Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–16 ಏಪ್ರಿಲ್ 17–23, 2023 ಪುಟ 16 ರೂ. 10/–

Volume-17 Issue-16 April 17-23, 2023 Pages:16 Price: 10/-



ಪರ್ಯಾಯ ನೀತಿಗಳಿಗಾಗಿ ಚುನಾವಣಾ ಹೋರಾಟ




ಸಂಸತ್ತು ಕಣ್ಮರೆಯಾಗುವ ಅಪಾಯ



- ಹುಲಿ ಯೋಜನೆ ಮತ್ತು ಆದಿವಾಸಿಗಳ ಆರ್ತನಾದ
- ಕರ್ನಾಟಕದ ಆರ್ಥಿಕತೆ: ಜನಗಳ ಹಕ್ಕೊತ್ತಾಯಗಳೇನು?
- ಮುಸ್ಲಿಂ ಮೀಸಲಾತಿ ಪಲ್ಲಟ ಸುಪ್ರಿಂ ಕೋರ್ಟ್ ಟೀಕೆ

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್‌ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–25

ಡಾ.ಶಮ್ಸುಲ್‌ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಇದುವರೆಗೆ ನಾಲ್ಕು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ
ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?
ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3 – ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಮಿಥ್ಯೆ 4: ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು!?
ಈಗ ಮಿಥ್ಯೆ 5 – ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು !?
ಸಾವರ್ಕರ್ ಒಬ್ಬ ವಿಚಾರವಾದಿಯಾಗಿದ್ದರು, ವೈಜ್ಞಾನಿಕ ಮನೋಭಾವ ಹೊಂದಿದ್ದರು ಎಂಬುದು ಎಂತಹ ಸುಳ್ಳು ಎಂಬುದನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಈ ಸಂಚಿಕೆಯಲ್ಲಿ ಅಸ್ಪೃಶ್ಯತೆಯ ವಿರುದ್ಧ ಅವರ 'ಹೋರಾಟ' ಏನು ಎಂಬುದನ್ನು ಓದಿ..

ಅಸ್ಪೃಶ್ಯತೆಗೆ ಸೋಗಿನ ವಿರೋಧ

ತಮ್ಮ ಗುರುವು ಅಸ್ಪೃಶ್ಯರೊಂದಿಗೆ ಸಾಮುದಾಯಿಕ ಭೋಜನವನ್ನು ಸಂಘಟಿಸುತ್ತಿದ್ದರು ಮತ್ತು ಅವರ ವಸತಿ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದರು ಎಂಬ ಅಂಶವನ್ನು ಸಾವರ್ಕರ್ ಅವರ ಅನುಯಾಯಿಗಳು ಯಾವಾಗಲೂ ಒತ್ತಿ ಹೇಳುತ್ತಾರೆ. ಇಂತಹ ಅಲಂಕಾರಕ ಸುಧಾರಕ ಕೆಲಸಗಳನ್ನು ಕೂಡ ಅವರು ಎಷ್ಟು ಗಂಭೀರವಾಗಿ ಮಾಡುತ್ತಿದ್ದರು ಎನ್ನುವುದನ್ನು, ಅವನ್ನು ತಮ್ಮ ವೈಯಕ್ತಿಕ ನೆಲೆಯಲ್ಲಿ ಮಾಡುತ್ತಿದ್ದರೆ ವಿನಃ, ಹಿಂದೂ ಮಹಾಸಭಾ ಸಂಘಟನೆಯನ್ನು ಒಳಗೊಳ್ಳುತ್ತಿರಲಿಲ್ಲ ಎಂಬ ಸಂಗತಿಯಿಂದ ಅರ್ಥ ಮಾಡಿಕೊಳ್ಳಬಹುದು.

ಹಿಂದೂ ದೇವಸ್ಥಾನಗಳಿಗೆ ಅಸ್ಪೃಶ್ಯರು ಪ್ರವೇಶಿಸುವ ಕುರಿತು ಸನಾತನ ಹಿಂದೂಗಳಿಗೆ ಸಾವರ್ಕರ್ 1939ರಲ್ಲಿ ಹೀಗೆ ಭರವಸೆ ನೀಡಿದ್ದರು:

"ಅಸ್ಪೃಶ್ಯರ ದೇವಸ್ಥಾನ ಪ್ರವೇಶಕ್ಕೆ ಸಂಬಂಧಪಟ್ಟಂತೆ ಈಗ ಹಳೆಯ ದೇವಸ್ಥಾನಗಳಲ್ಲಿ ಹಿಂದೂಯೇತರರಿಗೆ ಎಲ್ಲಿಯತನಕ ಪ್ರವೇಶದ ಮಿತಿ ಇರುವ ಆಚರಣೆ ಇದೆಯೋ, ಅದನ್ನು ಮೀರುವ ಯಾವುದೇ ಕಡ್ಡಾಯದ ಶಾಸನವನ್ನು ಹಿಂದೂ ಮಹಾಸಭಾವು ಮಂಡಿಸುವುದಿಲ್ಲ ಅಥವಾ ಬೆಂಬಲಿಸುವುದಿಲ್ಲ."

1941 ಜೂನ್ 20ರಂದು ವೈಯಕ್ತಿಕ ಭರವಸೆಯ ರೂಪದಲ್ಲಿ ಮತ್ತೊಮ್ಮೆ ವಾಗ್ದಾನ ಮಾಡಿ, ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಸಂಬಂಧಪಟ್ಟಂತೆ ಸನಾತನ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟಾಗುವಂತೆ ಮಾಡುವುದಿಲ್ಲ ಎಂದರು. ಈ ಬಾರಿ ಅವರು ತಾನು ಮಹಿಳಾ–ವಿರೋಧಿ ಹಾಗೂ ದಲಿತ–ವಿರೋಧಿ ವೈಯಕ್ತಿಕ ಕಾನೂನುಗಳನ್ನು ಮುಟ್ಟುವುದಿಲ್ಲ ಎಂದೂ ವಾಗ್ದಾನ ಮಾಡಿದರು:

"ಆ ಸನಾತನ ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಸಂಬಂಧಪಟ್ಟಂತೆ ಯಾವುದೇ ಶಾಸನವನ್ನು ಹಿಂದೂ ಮಹಾಸಭಾವು ಎಂದಿಗೂ ಕಡ್ಡಾಯಗೊಳಿಸುವುದಿಲ್ಲ ಅಥವಾ ಆ ದೇವಸ್ಥಾನಗಳಲ್ಲಿ ಆಚರಣೆಯಲ್ಲಿರುವ ಯಾವುದೇ ಪವಿತ್ರ ಪ್ರಾಚೀನ ಹಾಗೂ ಸದಾಚಾರದ ಬಳಕೆಯ ವಿರುದ್ಧ ಕಾನೂನನ್ನು ಬಲವಂತವಾಗಿ ಹೇರುವುದಿಲ್ಲ. ಸನಾತನಿ ಬಂಧುಗಳ ವೈಯಕ್ತಿಕ ಕಾನೂನಿಗೆ ಸಂಬಂಧಪಟ್ಟಂತೆ ಅವರ ಮೇಲೆ ಸುಧಾರಕ ಅಭಿಪ್ರಾಯಗಳನ್ನು ಹೇರುವ ಯಾವುದೇ ಶಾಸನವನ್ನು ಹಿಂದೂ ಮಹಾಸಭಾ ಬೆಂಬಲಿಸುವುದಿಲ್ಲ. . ."

ಒಬ್ಬ ಹಿಂದೂ ಮತಾಂಧನಾಗಿ ಸಾವರ್ಕರ್

ಅವರ ವೈಜ್ಞಾನಿಕ ಮನೋಭಾವದ ಸತ್ಯವನ್ನು ಅರಿಯಬೇಕೆಂದರೆ ಅವರು ಕೊಲ್ಲಾಪುರದೊರೆಗೆ ಕಳಿಸಿದ ಟೆಲಿಗ್ರಾಮಿನ ಭಾಷೆಯನ್ನು ಆಧರಿಸಿಯೇ ತೀರ್ಮಾನ ಮಾಡಬಹುದು. ಮಹಾರಾಜರಿಗೆ ಮಗಳು ಹುಟ್ಟಿದ ಸಂದರ್ಭದಲ್ಲಿ ಕಳಿಸಿದ ಶುಭಾಶಯ ಸಂದೇಶದ ಜತೆಯಲ್ಲೇ, ಪುತ್ರ ಸಂತಾನವಿಲ್ಲದಿದ್ದರೆ ಬದುಕು ಸಾರ್ಥಕವಲ್ಲ ಎಂಬ ಅರ್ಥದೊಂದಿಗೆ ಒಬ್ಬ ಮಗ ಹುಟ್ಟಲಿ ಎಂದು ಹಾರೈಸುವುದನ್ನು ಸಾವರ್ಕರ್ ಮರೆಯಲಿಲ್ಲ. ಮೂಲ ಟೆಲಿಗ್ರಾಮಿನ ಒಕ್ಕಣೆ ಹೀಗಿದೆ:

"ಘನತೆವೆತ್ತ ಕೊಲ್ಲಾಪುರ ಮಹಾರಾಜರಿಗೆ, ರಾಜಕುಮಾರಿ ಲಲಿತಾದೇವಿಯ ಜನನಕ್ಕಾಗಿ ಖಾವಂದರಿಗೆ ನನ್ನ ಶುಭಾಶಯಗಳನ್ನು ಕೋರುತ್ತೇನೆ ಮತ್ತು ಈ ರಾಜ್ಯಕ್ಕೆ ಅದೇ ರೀತಿಯಲ್ಲಿ ಒಬ್ಬ ರಾಜಕುಮಾರನನ್ನು ಕರುಣಿಸಲಿ ಎಂದೂ ಪ್ರಾರ್ಥಿಸುತ್ತೇನೆ. ಸಾವರ್ಕರ್, 18.10.40"

ಇದೇ 'ವಿಚಾರವಾದಿ' ಹಾಗೂ 'ಜಾತ್ಯತೀತವಾದಿ' ಸಾವರ್ಕರ್ ಮಹಾರಾಷ್ಟ್ರದಲ್ಲಿ ಶುದ್ಧಿ (ಶುದ್ಧೀಕರಣ) ಚಳವಳಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಶುರುಮಾಡಿದರು. ಮುಸ್ಲಿಮರು ಮತ್ತು ಕ್ರಿಶ್ಚಿಯನರನ್ನು ಹಿಂದೂಗಳಾಗಿ ಮತಾಂತರಗೊಳಿಸುವ ಸಂಕುಚಿತವಾದಿ ಆಚರಣೆಯನ್ನು ಆರಂಭಿಸಿದರು. ಸಾವರ್ಕರ್ ಅವರ ಅಧಿಕೃತ ಆತ್ಮವೃತ್ತಾಂತವು ಈ ಶುದ್ಧಿ ಚಟುವಟಿಕೆಗಳ ಬಗ್ಗೆ ಕಣ್ಣಿಗೆ ಕಟ್ಟಿದಂತಹ ವಿವರಣೆಯನ್ನು ಹೀಗೆ ನೀಡುತ್ತದೆ:

"ರತ್ನಗಿರಿ ಹಿಂದೂ ಸಭಾವು 1926ರ ಮಧ್ಯದ ನಂತರ ಹಲವಾರು ಜನರನ್ನು ನಿಗದಿತ ಧಾರ್ಮಿಕ ಶಿಷ್ಟಾಚಾರಗಳೊಂದಿಗೆ ಹಿಂದೂತೆಕ್ಕೆಗೆ ಮರುಮತಾಂತರ ಕೈಗೊಂಡಿತು. ಕ್ರಿಶ್ಚಿಯನ್ ಮಿಷನರಿಗಳು ಇದರಿಂದ ರೋಷಗೊಂಡರು. ಹಿಂದೂವಾಗಿ ಮರುಮತಾಂತರವಾದ ಹುಡುಗನೊಬ್ಬನಿಗೆ ಮಿಷನ್ನಿನ ವಸತಿಗಳ ಬಳಿ ಸುಳಿಯಬಾರದೆಂದು, ಅವನು ಅಲ್ಲಿ ಬಂದರೆ ಇತರ ಹುಡುಗರಿಗೂ ಅವನ ವಾಸನೆ ಬಡಿದು ಮರುಮತಾಂತರ ಆಗಬಹುದೆಂದು ನಿರ್ಬಂಧ ಹೇರಿದರು. . . ರತ್ನಗಿರಿ ಹಿಂದೂ ಸಭಾವು ಇಂದೋರಿನ ಮಹಾರಾಜ ತುಕೋಜಿರಾವ್ ಅವರು, ಅಮೆರಿಕನ್ ಮಹಿಳೆ ಕುಮಾರಿ ಮಿಲ್ಲರ್ ಜತೆ ಮದುವೆಯಾಗುವುದನ್ನು ಅತ್ಯುತ್ಸಾಹದಿಂದ ಬೆಂಬಲಿಸಿತು. ಮದುವೆ ಶಿಷ್ಟಾಚಾರಕ್ಕೆ ಒಬ್ಬ ಪುರೋಹಿತನನ್ನು ಏರ್ಪಾಟು ಮಾಡುವ ಸಿದ್ಧತೆಗೆ ಕೂಡ ಮುಂದಾಯಿತು. ಸಭಾವು ಆರಂಭದಲ್ಲಿ ಇಬ್ಬರು ಮರುಮತಾಂತರಗೊಂಡ ಹುಡುಗಿಯರನ್ನು ಸಾವರ್ಕರ್ ಅವರ ನಿರ್ದೇಶನದ ಮೇರೆಗೆ ಇಬ್ಬರು ಹಿಂದೂ ಕುಲೀನರ ಜತೆ ಮದುವೆ ಮಾಡಿಸಿತು, ಮದುವೆ ಧಾರ್ಮಿಕ ವಿಧಿಗಳನ್ನು ಕೂಡ ಸಾವರ್ಕರ್ ಅವರೇ ನೆರವೇರಿಸಿದರು."

ಸಾವರ್ಕರ್ ಮುಂದಾಳತ್ವದಲ್ಲಿ ನಡೆದ ಮತಾಂತರ ಕಾರ್ಯಕ್ರಮಗಳಿಗೆ ಬಹಳ ಪ್ರಚಾರ ಸಿಗುತ್ತಿತ್ತು ಮತ್ತು ಅದು ಧಾರ್ಮಿಕ ಸಮುದಾಯಗಳಲ್ಲಿ ಭಾರಿ ಹಗೆತನವನ್ನು ಹುಟ್ಟುಹಾಕುತ್ತಿತ್ತು. ಎಷ್ಟು ನಿರ್ಲಜ್ಜವಾಗಿ ಧಾರ್ಮಿಕ ಮತಾಂತರಗಳನ್ನು ಕೈಗೊಳ್ಳುತ್ತಿದ್ದರು ಎನ್ನುವುದನ್ನು ಜುಲೈ 1, 1941ರಲ್ಲಿ ಹಿಂದೂ ಮಹಾಸಭಾವು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಿಂದ ತಿಳಿದುಕೊಳ್ಳಬಹುದು:

"ಹಿಂದೂಗಳಾಗಿ ಕ್ರಿಶ್ಚಿಯನ್ನರ ಸಾಮೂಹಿಕ ಮತಾಂತರ. ಪ್ರಮುಖ ಶುದ್ಧಿ ಸಮಾರಂಭ ಮತ್ತು ಸರ್ವ ಹಿಂದೂಗಳ ಭೋಜನ ಬಾಂಬೆಯಲ್ಲಿ. ವೀರ್ ಸಾವರ್ಕರ್ ಅಧ್ಯಕ್ಷತೆ ವಹಿಸುವರು. ಬಹಳ ಪ್ರಮುಖವಾದ ಶುದ್ಧಿ ಸಮಾರಂಭವು 1941, ಜೂನ್ 29ರಂದು ವೀರ್ ಸಾವರ್ಕರ್ ಅವರ ಅಧ್ಯಕ್ಷತೆಯಲ್ಲಿ ಮಾಹಿಮ್ (ಬಾಂಬೆ)ನಲ್ಲಿ ನಡೆಯಿತು.

ಪೋರ್ಚುಗೀಸರ ಮತೀಯ ತನಿಖೆಗಳ ದಿನಗಳಲ್ಲಿ ನೂರಾರು ಸಾವಿರಾರು ಹಿಂದೂ ಕುಟುಂಬಗಳನ್ನು, ಬಹುತೇಕ ಕೋವಿ ಕಠಾರಿಯ ಭಯ ತೋರಿಸಿ ಕ್ರಿಶ್ಚಿಯನ್ನರನ್ನಾಗಿ ಬಲವಂತವಾಗಿ ಮತಾಂತರ ಮಾಡಲಾಯಿತು. ನಾಲ್ಕು ನೂರು ವರ್ಷಗಳ ನಂತರ ಇತ್ತೀಚೆಗೆ ಹಿಂದೂ ಸಂಘಟನೆ ಚಳವಳಿ ಆರಂಭವಾದಾಗ, ಸತಾರಾದ ಮಹಾರಾಜ ಶ್ರೀ ಮಸೂರ್ಕರ್ ಅವರು ದೊಡ್ಡ ಪ್ರಮಾಣದಲ್ಲಿ ಹತ್ತು ಸಾವಿರ ಕ್ರಿಶ್ಚಿಯನ್ನರನ್ನು ಹಿಂದೂಗಳಾಗಿ ಮರುಮತಾಂತರ ಮಾಡುವಲ್ಲಿ ಯಶಸ್ವಿಯಾದರು. ಸಂಘಟನೆ ಚಳವಳಿಯ ಈ ಗಮನಾರ್ಹ ಯಶಸ್ಸು ಸಹಜವಾಗಿಯೇ ಪೋರ್ಚುಗೀಸ್ ಭಾರತ ಹಾಗೂ ಬಾಂಬೇಯಲ್ಲಿ ಕ್ರಿಶ್ಚಿಯನ್ ಮಿಷನರಿಗಳ ಸಂಘಟಿತ ವಿರೋಧವನ್ನು ಕೆರಳಿಸಿತು. ಆದರೆ ಹಿಂದೂ ಸಂಘಟನೆಕಾರರ ಸತತ ಪ್ರಯತ್ನದ ಫಲವಾಗಿ ಹಿಂದೂಗಳಾಗಿ ಮರುಮತಾಂತರ ಮಾಡುವ ದೊಡ್ಡ ಪ್ರಮಾಣದ ಎರಡನೇ ಚಳವಳಿ ಪ್ರಾರಂಭವಾಯಿತು, ಅದು ಹಿಂದಿನ ಚಳವಳಿಗಿಂತ ಹೆಚ್ಚು ಯಶಸ್ವಿಯಾಗುವ ಭರವಸೆ ಮೂಡಿಸಿತು. ಬಾಂಬೇ ಪ್ರಾಂತ ಹಿಂದೂಸಭಾವು ಮುನ್ನೂರು ವರ್ಷಗಳ ಹಿಂದೆ ಬಲವಂತ ಮತಾಂತರಕ್ಕೆ ಒಳಗಾಗಿದ್ದವರ ಈಗಿನ ಪೀಳಿಗೆಯ ಐವತ್ತು ಕ್ರಿಶ್ಚಿಯನ್ನರನ್ನು ಮೊದಲ ತಂಡವಾಗಿ ಈ ವಾರ ಮರುಮತಾಂತರ ಮಾಡಿತು. ಡಾ. ಪುರಂದರೆ ಅವರ ಜತೆ ರಾವ್ ಬಹಾದೂರ್ ಬೋಲೆ, ಡಾ. ಸಾವರ್ಕರ್ ಮತ್ತು ಹಲವಾರು ಗಣ್ಯರು ಈ ಚಳವಳಿಯನ್ನು ಮುನ್ನಡೆಸಿದರು, ಹಿಂದೂಸಭಾಹಿತ ಹೋಮವನ್ನು ನೆರವೇರಿಸಿದರು."

ಈ ಪತ್ರಿಕಾ ಹೇಳಿಕೆಯು ಇನ್ನೂ ಮುಂದುವರಿದು ಕ್ರಿಶ್ಚಿಯನ್ನರು ಹಿಂದೂಗಳಾಗಿ ಮತಾಂತರಗೊಳ್ಳುವ ಸಮಾರಂಭವು 'ವೀರ್ ಸಾವರ್ಕರ್ ಅವರ ವೀರ್ಯವತ್ತಾದ ಹಾಗೂ ಅತ್ಯಂತ ಸ್ಫೂರ್ತಿದಾಯಕ ಭಾಷಣದೊಂದಿಗೆ ಮುಕ್ತಾಯವಾಯಿತು' ಎಂದು ಆವೇಶಪೂರಿತವಾಗಿ ತಿಳಿಸಿತು. ಭಿಡೆಯವರ ಪುಸ್ತಕವು ಈ ಕೆಳಗಿನ 1940, ಮಾರ್ಚ್ 14ರ ವರದಿಯಂತೆ ಮತಾಂತರ ವರದಿಗಳಿಂದ ತುಂಬಿಹೋಗಿದೆ:

"ಆರು ಭಿಲ್ಲಾ ಕ್ರಿಶ್ಚಿಯನ್ನರ ಶುದ್ಧಿಯನ್ನು ನಾಲ್ಕು ಸಾವಿರಕ್ಕೂ ಹೆಚ್ಚಿನ ಜನರು ಪಾಲ್ಗೊಂಡಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಕೈಗೊಳ್ಳಲಾಯಿತು. ವೀರ್ ಸಾವರ್ಕರ್‌ಜಿಯವರು ಒಂದು ಗಂಟೆ ಕಾಲ ಭಾಷಣ ಮಾಡಿದರು."

ಈ ಎಲ್ಲಾ ಸತ್ಯಗಳು ಮತ್ತು ಹಿಂದೂ ಮಹಾಸಭಾದ ಪತ್ರಾಗಾರದಲ್ಲೇ ದೊರೆಯುವ ಇನ್ನೂ ಹಲವಾರು ದಾಖಲೆಗಳು ಲಭ್ಯವಿರುವಾಗಲೂ ಸಾವರ್ಕರ್ ಅವರನ್ನು ಮಹಾನ್ ವಿಚಾರವಾದಿ, ಜಾತ್ಯತೀತವಾದಿ ಹಾಗೂ ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯುಳ್ಳವರು ಎಂದು ಬಿಂಬಿಸಲಾಗುತ್ತಿದೆ!

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂಪರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಸಂಪಾದಕೀಯ

ಹುಲಿ ಯೋಜನೆ ಮತ್ತು ಆದಿವಾಸಿಗಳ ಆರ್ತನಾದ

ಭಾರತದಲ್ಲಿನ ಹುಲಿ ಅಭಿವೃದ್ಧಿ ಯೋಜನೆಗೆ ಐವತ್ತು ತುಂಬಿದ ಸಂದರ್ಭವನ್ನು ಕರ್ನಾಟಕದ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಗಿದೆ. 1973ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಆರಂಭಿಸಿದ ಯೋಜನೆಯ ಯಶಸ್ವಿಗೆ ಇಂದಿನ ಪ್ರಧಾನಿ ನರೇಂದ್ರ ಮೋದಿಯವರು ಸಾಕ್ಷಿಯಾಗಿದ್ದಾರೆ. ಅದೇ ಮಗ್ಗುಲಲ್ಲಿ ಹುಲಿ ಯೋಜನೆಯಲ್ಲಿ ಸಂತ್ರಸ್ತರಾದ ಆದಿವಾಸಿಗಳು ಅಂದು ಉಪವಾಸ ನಡೆಸುವ ಮೂಲಕ ಕಾಡಿನ ನೆನಪಲ್ಲೇ ನಿಧನರಾದ ಹಿರಿಯರ ಸ್ಮರಣೆಯಲ್ಲಿ ಶೋಕ ದಿನವಾಗಿ 'ಸಂಕಟಗಳ ಸತ್ಯಾಗ್ರಹ' ನಡೆಸಿದ್ದಾರೆ. ಈ ಎರಡೂ ಘಟನೆಗಳು ವನ್ಯಮೃಗಗಳ ಬಗ್ಗೆ ಸರಕಾರಕ್ಕಿರುವ 'ಪ್ರೀತಿ' ಮತ್ತು ತನ್ನದೇ ಮೂಲ ನಿವಾಸಿಗಳ ಬಗೆಗಿನ ನಿರ್ಲಜ್ಜ ತಿರಸ್ಕಾರಗಳ ನೀತಿಯ ನಿದರ್ಶನವಾಗಿವೆ.

ನಿಜ, ಅಳಿವಿನಂಚಿನಲ್ಲಿರುವ ಹುಲಿಗಳ ಸಂತತಿಯನ್ನು ಸಂರಕ್ಷಿಸಬೇಕು ಎನ್ನುವ ಪಾರಿಸಾರಿಕ ಕಾಳಜಿಯನ್ನು ಪ್ರಶ್ನಿಸಬೇಕಿಲ್ಲ. ಆದರೆ ವನ್ಯಜೀವಿಗಳ ರಕ್ಷಣೆಯನ್ನು ಅರಣ್ಯದ ಒಂದು ಭಾಗವೇ ಆಗಿರುವ ಮಾನವನನ್ನೂ ಒಳಗೊಂಡು ಇತರೆ ಜೀವ ಸಂಕುಲದ ಸಂರಕ್ಷಣೆಯ ಹೊಣೆಗಾರಿಕೆಯೂ ಕೂಡ ಘನ ಸರಕಾರದ ಜವಾಬ್ದಾರಿ ಎನ್ನುವ ಬದ್ಧತೆ ವಸಾಹತುಶಾಹಿ ಹಾಗೂ ಸ್ವಾತಂತ್ರ್ಯೋತ್ತರದ ಆಡಳಿತಗಳಲ್ಲಿ ಕಂಡು ಬರುವುದಿಲ್ಲ. ಅರಣ್ಯ ಎನ್ನುವುದು ಆಳುವ ಪ್ರಭುತ್ವಗಳ ಮನಸೋ ಇಚ್ಚೆ ಲೂಟಿಗೆ ತೆರೆದ ಮುಕ್ತ ಮೈದಾನ ಎಂದೇ ಭಾವಿಸಿವೆ. ಮಾನವ ಕಾಳಜಿ ಕೇಂದ್ರಿತ ನೀತಿಯೆಂಬುದು ಒಕ್ಕೂಟದ ಸರಕಾರಕ್ಕೆ ಇಲ್ಲವೇ ಇಲ್ಲ.

ದೇಶದಲ್ಲಿ ಕೈಗೊಂಡ ಹುಲಿ ಯೋಜನೆಯಿಂದಾಗಿ ಆರಂಭದಲ್ಲಿದ್ದ 1827 ರಷ್ಟಿದ್ದ ಹುಲಿಗಳ ಸಂಖ್ಯೆ3167 ಕ್ಕೇರಿದೆ. ಇದು ಪ್ರಪಂಚದ ಹುಲಿಗಳ ಸಂಖ್ಯೆಗೆ ಹೋಲಿಸಿದರೆ ಶೇ.75 ರಷ್ಟು ಎನ್ನುವುದು ದಾಖಲೆಯ ಸಂಗತಿ. 1972 ರಲ್ಲಿ 'ವನ್ಯಜೀವಿ ಸಂರಕ್ಷಣಾ ಕಾಯ್ದೆ' ಜಾರಿಗೆ ಬಂದ ನಂತರ ಶತಮಾನಗಳಿಂದ ಅರಣ್ಯದಲ್ಲೇ ನೆಲೆ ಮಿಂತಿದ್ದ ಆದಿವಾಸಿ ಸಮುದಾಯಗಳ ಬದುಕು ಅತಂತ್ರವಾಯಿತು. ಸರಕಾರಕ್ಕೆ ವನ್ಯಜೀವಿಗಳ ಸಂರಕ್ಷಣೆಯ ಜೊತೆಯಲ್ಲಿ ಅರಣ್ಯ ಹಕ್ಕು ಸ್ಥಾಪಿಸಿದ್ದ ಆದಿವಾಸಿಗಳನ್ನು ಅಲ್ಲಿಂದ ನಿವಾರಿಸಿಕೊಳ್ಳುವ ಯೋಚನೆಗೂ ಹೆಚ್ಚು ಇಂಬು ಸಿಕ್ಕಿತು. ಆ ಕಾರಣದಲ್ಲಿ ಕಾಡಿನಲ್ಲಿ ಗೂಡು ಕಟ್ಟಿಕೊಂಡಿದ್ದ ಆದಿವಾಸಿಗಳನ್ನು ರಾತ್ರೋರಾತ್ರಿ ನೆಲೆಗಳಿಂದ ಎತ್ತಂಗಡಿ ಮಾಡಲಾಯಿತು. ಪ್ರತಿರೋಧಿಸಿದವರ ಮೇಲೆ ದೌರ್ಜನ್ಯ, ಕೊನೆಗೆ ಪುನರ್ವಸತಿ ಯೋಜನೆಗಳ ಜಾರು ಬಂಡೆಯೂ ಸೃಷ್ಟಿಯಾಯಿತು. ಈಗ ಶೋಕದಿನ ಆಚರಿಸಿದ ಬಂಡಿಪುರ, ಚಾಮರಾಜನಗರ ಪ್ರದೇಶದ ಆದಿವಾಸಿಗಳಿಗೆ ನೀಡಲಾದ ಭರವಸೆಯಂತೆ ಪುನರ್ವಸತಿ ಯೋಜನೆ ಜಾರಿಯಾಗಲಿಲ್ಲ. ಉಚ್ಚ ನ್ಯಾಯಾಲಯದ ತೀರ್ಪಿಗೂ ಕವಡೆ ಕಿಮ್ಮತ್ತಿನ ಬೆಲೆಯನ್ನು ಸರಕಾರಗಳು ನೀಡಲಿಲ್ಲ. ತಮ್ಮ ನೆಲ, ಸಂಸ್ಕೃತಿ, ಜೀವನ ಕಳೆದುಕೊಂಡ ಆದಿವಾಸಿಗಳ ಬದುಕು ನೀರಿನಿಂದ ಹೊರಗೆಸೆದ ಮೀನಿನಂತಾಗಿದೆ. ಈಗಲೂ ಹುಲಿ ಆವಾಸ ಸ್ಥಾನ ಹೆಚ್ಚಿಸುವ ಹುಲಿ ಕಾರಿಡಾರ್ ಯೋಜನೆ, ಆನೆ ಕಾರಿಡಾರ್, ಜೀವ ವೈವಿಧ್ಯತೆಯ ತಾಣ, ನ್ಯಾಷನಲ್ ಪಾರ್ಕ್, ಸೂಕ್ಷ್ಮ ಪರಿಸರ ವಲಯ ಹೀಗೆ ಹಲವು ಹನ್ನೊಂದು ಯೋಜನೆಗಳು, ಕಸ್ತೂರಿ ರಂಗನ್ ವರದಿಯಂತಹ ಶಿಫಾರಸುಗಳು ಆದಿವಾಸಿಗಳನ್ನು, ಅರಣ್ಯದಂಚಿನಲ್ಲಿ ಬದುಕು ಕಟ್ಟಿಕೊಂಡ ಜನರನ್ನು ನಿರ್ಗತಿಕರನ್ನಾಗಿಸುತ್ತಿವೆ, ಆಗಿಸಲಿವೆ. ಇಲ್ಲಿಯ ಜನತೆಯ ಅಳಲು, ಅರ್ತ ನಾದ ಕೇಳಿಸಿಕೊಳ್ಳದಷ್ಟು ನಿರ್ದಯವಾಗಿವೆ ಸರಕಾರಗಳು.

ಹೆಚ್ಚುತ್ತಿರುವ ವನ್ಯಜೀವಿಗಳು ಮತ್ತು ಮಾನವರ ನಡುವಿನ ಸಂಘರ್ಷದಂತಹ ಜ್ವಲಂತ ಪ್ರಕರಣಗಳ ಬಗ್ಗೆ ವೈಜ್ಞಾನಿಕ ನೀತಿ, ಸಲಹೆಗಳ ಪರಿಹಾರಕ್ಕೂ ಮನಸ್ಸಿಲ್ಲ. ಮಾನವ ಮುಕ್ತರನ್ನಾಗಿಸಬೇಕೆಂಬ ಸರಕಾರಗಳ ನೀತಿ ಯಶಸ್ವಿಯಾದರೆ ಅರಣ್ಯಗಳನ್ನು ಖಾಸಗಿ ಉದ್ಯಮಿಗಳಿಗೆ ಪರಭಾರೆ ಮಾಡಲು ಸಾಧ್ಯ ಎಂಬ ದುಷ್ಟ ಯೋಜನೆ ಅಂತರಂಗದಲ್ಲಿರುವಾಗ ಜನ ಕಾಳಜಿಯ ಕ್ರಿಯಾಶೀಲತೆಯನ್ನು ನಿರೀಕ್ಷಿಸುವುದು ಮೂರ್ಖತನವೇ ಆದೀತು.

ಪರಿಸರ ಸಂರಕ್ಷಿಸಬೇಕು ಎನ್ನುವುದಕ್ಕೆ ಜಾಗತಿಕ ತಾಪಮಾನವನ್ನೂ ಒಳಗೊಂಡು ಹಲವು ಹನ್ನೆರಡು ಕಾರಣಗಳಿವೆ. ಕಾಡಿನ ನಾಶ ತಡೆಯಬೇಕು ಎಂಬ ಕಾಳಜಿಯೇನೋ ಸರಿ. ಆದರೆ ಈ ನಾಶದ ಹೊಣೆಯನ್ನು ಅರಣ್ಯದ ಮೂಲ ನಿವಾಸಿಗಳ ಮೇಲೆ ಆರೋಪಿಸುವುದು ಎಷ್ಟು ಸರಿ? ಹುಲಿಗಳನ್ನು ಉಳಿಸಿಕೊಳ್ಳ ಬೇಕು ಎನ್ನುವಾಗ ಕಾಡು ಉಳಿಯ ಬೇಕು ಎನ್ನುವುದೂ ಮುಖ್ಯ ಅಂಶವಾಗಿದೆ. ಕಾಡು ಎನ್ನುವುದು ಇತರೆ ಜೀವಸಂಕುಲಗಳ ಆವಾಸಸ್ಥಾನ. ಆದರೆ ಅಲ್ಲಿಯ ಇತರೆ ಜೀವ ಸಂಕುಲಗಳಿಂದ ಆದಿವಾಸಿಗಳನ್ನು ಹೇಗೆ ಹೊರತು ಪಡಿಸುತ್ತಾರೆ? ಇವರೂ ಈ ಸಂಕುಲದ ಅವಿಭಾಜ್ಯ ಅಂಗ. ಶತ ಶತಮಾನಗಳಿಂದ ಅಲ್ಲಿಯೇ ಹುಟ್ಟಿ, ಬೆಳೆದು, ಆ ವನ್ಯ ಮೃಗಗಳ ಜೊತೆಯಲ್ಲಿಯೇ ಬದುಕಿ ಬಾಳಿದವರು ಅವರು. ಜೀವ ಸಂಕುಲದ ಸಂರಕ್ಷಣೆಯೇ ಅರಣ್ಯ ರಕ್ಷಣೆ ಎನ್ನುವ ವಿವೇಕ ಇರುವವರು. ಹುಲಿಯನ್ನೂ ಒಳಗೊಂಡಂತೆ ಇತರೆ ವನ್ಯ ಮೃಗಗಳ ನಾಶ ಏಕಾಗುತ್ತದೆ? ಇದು ಅಧಿಕಾರಸ್ಥರ ಕಣ್ಣಿಗೆ ಕಾಣಿಸದೇ ನಡೆಯುತ್ತದೆ ಎನ್ನುವುದನ್ನು ಒಪ್ಪುವುದು ಅಸಾಧ್ಯ. ಇವರ ಪಾಲಿಲ್ಲವೆಂದರೆ, ಅದು ಆತ್ಮವಂಚನೆ, ದ್ರೋಹ. ಆಡಳಿತದ ಯಾವುದೋ ಒಂದು ಅಂಗದ ಶಾಮೀಲಿಲ್ಲದೇ ಅಂತಹ ಕಾಡುಗಳ್ಳತನ, ವನ್ಯ ಮೃಗಗಳ ಹನನ ಬಹುತೇಕ ಆಸಾಧ್ಯ.

ಅರಣ್ಯ ಸಂರಕ್ಷಣೆಗೆಂದು ಸರಕಾರ ಕೈಗೊಳ್ಳುವ ಯಾವುದೇ ಕ್ರಮಗಳು ಬಹುತೇಕ ಏಕಪಕ್ಷೀಯವೂ, ಆದಿವಾಸಿಗಳ ಹಾಗೂ ಕಾಡಿನ ಅಂಚನ್ನು ಆಧರಿಸಿದ ಜನ ಸಮೂಹಗಳನ್ನು ಹೊರತು ಪಡಿಸಿಯೇ ಇರುತ್ತವೆ. ಈ ಪಾರಂಪಾರಿಕ ಸಮುದಾಯಗಳನ್ನು ಸದಾವಕಾಲ ಅಪರಾಧಿ ಸ್ಥಾನದಲ್ಲಿ ಇರಿಸಲಾಗುತ್ತದೆ ಮತ್ತು ದಂಡಿಸಲಾಗುತ್ತಿದೆ. ಬ್ರಿಟೀಷರ ಕಾಲದಲ್ಲಿ 18ನೆಯ ಶತಮಾನದಲ್ಲಿ ಅರಣ್ಯವನ್ನು ಅಂಕೆಗೆ ತೆಗೆದುಕೊಳ್ಳುವ ವ್ಯವಸ್ಥಿತ ಪ್ರಯತ್ನಗಳು 1800–1835 ರ ಅವಧಿಯಲ್ಲಿ ನಡೆದವು. ಮೊದಲ ಅರಣ್ಯ ಕಾಯ್ದೆ 1865 ರಲ್ಲಿ ರೂಪುಗೊಂಡಿತು. ಇದು ಆದಿವಾಸಿಗಳು ಮತ್ತು ಅರಣ್ಯ ಅವಲಂಬಿತ ಗ್ರಾಮೀಣ ಸಮುದಾಯಗಳ ಅಭಾದಿತ ಹಕ್ಕನ್ನು ನಿರ್ಭಂದಿಸುವ, ಅರಣ್ಯದ ಮೇಲೆ ಸಮುದಾಯಗಳಿಗೆ ಇದ್ದ ಸಹಜ ಹಕ್ಕನ್ನು ಕಿತ್ತುಕೊಂಡು ಪ್ರಭುತ್ವ ಸ್ಥಾಪಿಸುವ ದಿಕ್ಕಿನಲ್ಲಿ ಹೆಜ್ಜೆ ಇರಿಸಿತು. ಮುಂದೆ ತರಲಾದ ಕಾಯ್ದೆಗಳು ಕಾಡಿನ ಉತ್ಪಾದನೆಗಳ ಸಂಗ್ರಹಕ್ಕೆ ನಿರ್ಭಂದಗಳನ್ನು ವಿಧಿಸಿದವು. ಈ ಎಲ್ಲಾ ಕ್ರಮಗಳು ಅರಣ್ಯ ಸಂಪತ್ತು ಸಮುದಾಯಗಳ ಉಪಯೋಗಕ್ಕೆ ಎನ್ನುವ ಬದಲು ಪ್ರಭುತ್ವದ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಅದರ ಬೆಳವಣಿಗೆಗೆ, ಅಲ್ಲಿನ ಮರ ಗಿಡಗಳ ಯಥೇಚ್ಛ ಲೂಟಿಗೆ, ಕಚ್ಚಾ ವಸ್ತುಗಳ ಸಂಪನ್ಮೂಲವಾಗಿ ಬಳಸಲಾಯಿತು. ಇಂದಿಗೂ ಆಧುನಿಕ ಭಾರತದಲ್ಲಿ ವಸಾಹತುಶಾಹಿಯ ಕಾನೂನುಗಳೇ ಅಲ್ಪಸ್ವಲ್ಪ ತಿದ್ದುಪಡಿಗೊಂಡು ಚಾಲ್ತಿಯಲ್ಲಿವೆ.



ಹುಲಿ ಸಂರಕ್ಷಣಾ ಯೋಜನೆ ಜಾರಿಗೊಳಿಸುವಾಗ ಈ ಪ್ರದೇಶಗಳಲ್ಲಿ ನೆಲ ಕಳೆದುಕೊಂಡ, ಕಳೆದುಕೊಳ್ಳುವ ಜನ ಸಮುದಾಯಗಳ ರಕ್ಷಣೆಯೂ ಆದ್ಯತೆ ಆಗಬೇಕು. ಹುಲಿ ಅಭಿವೃದ್ಧಿಯ ಸಂಭ್ರಮದಲ್ಲಿರುವ ಪ್ರಧಾನಿಗಳು ನೊಂದ ಆದಿವಾಸಿಗಳ ಅಳಲು ಕೇಳ ಬೇಕಿತ್ತು. ಆದರೆ ಪ್ರಧಾನಿಗಳ ಸಂಭ್ರಮದಲ್ಲಿ ಎದ್ದು ಕಂಡಿದ್ದು ಜನರ ಬಗೆಗಿನ ನಿಷ್ಕಾಳಜಿ.

ಮೀಸಲಾತಿ 'ಹಂಚಿಕೆ': ಸುಪ್ರಿಂ ಕೋರ್ಟ್ ಗುದ್ದು

ಇತರೆ ಹಿಂದುಳಿದ ವರ್ಗಗಳ ಪಟ್ಟಿಯ 2 ಎ ಕ್ಯಾಟಗರಿಯಲ್ಲಿದ್ದ ಮುಸ್ಲಿಮರಿಗೆ ಶಿಕ್ಷಣ ಮತ್ತು ಉದ್ಯೋಗ ನೀಡಿಕೆಯಲ್ಲಿ ನೀಡಲಾಗುತ್ತಿದ್ದ ಶೇ.4 ಮೀಸಲಾತಿಯನ್ನು ರದ್ದುಗೊಳಿಸಿ ಅದನ್ನು ಪಂಚಮಸಾಲಿ ಲಿಂಗಾಯತರು ಹಾಗೂ ಒಕ್ಕಲಿಗರಿಗೆ ತಲಾ ಶೇ.2 ರಂತೆ, ಹಂಚಿಕೆ ಮಾಡಿ ಕರ್ನಾಟಕ ರಾಜ್ಯ ಸರಕಾರ ಆದೇಶವನ್ನು ಹೊರಡಿಸಿತ್ತು. ಬಸವರಾಜ ಬೊಮ್ಮಾಯಿ ಸರಕಾರದ ಈ ನಿರ್ಧಾರವನ್ನು ಮೇಲ್ನೋಟದಲ್ಲಿ 'ದೋಷಪೂರಿತ' ಎಂದು ಹೇಳಿರುವ ಸುಪ್ರಿಂ ಕೋರ್ಟ್ ಅಂತಿಮ ತೀರ್ಪು ಪ್ರಕಟಗೊಳ್ಳುವವರೆಗೆ ಯಾವುದೇ ನೇಮಕಾತಿ, ಪ್ರವೇಶಾವಕಾಶಗಳಿಗೆ ಅನ್ವಯಿಸಬಾರದು ಎಂದು ನಿರ್ಭಂಧಿಸಿದೆ. ಸಾಮಾಜಿಕ ನ್ಯಾಯದ ತತ್ವವನ್ನೇ ವಿಕೃತಗೊಳಿಸಿ ಜನತೆಯನ್ನು ಪರಸ್ಪರ ಎತ್ತಿ ಕಟ್ಟಿ ದ್ವೇಷದ ಫಸಲು ಪಡೆಯುವ ಉದ್ದೇಶ ಇರಿಸಿಕೊಂಡಿದ್ದ ಬಿಜೆಪಿ ಸರಕಾರಕ್ಕೆ ತೀವ್ರ ಏಟು ಕೊಟ್ಟಂತಾಗಿದೆ.

ಈ ವಾರ

ಎಸ್.ವೈ. ಗುರುಶಾಂತ್

ಒಕ್ಕಲಿಗರು ಮತ್ತು ಪಂಚಮಸಾಲಿ ಸಮುದಾಯಗಳು ತಮಗೆ ಮೀಸಲಾತಿ ನೀಡುವಂತೆ ಮತ್ತು ಹೆಚ್ಚಿಸುವಂತೆ ಸರ್ಕಾರದ ಮುಂದೆ ಬೇಡಿಕೆಯನ್ನು ಮಂಡಿಸಿದ್ದವು. ಆದರೆ ಅವರ್ಯಾರೂ ಮುಸ್ಲಿಮರ ಮೀಸಲಾತಿಯನ್ನು ಕಿತ್ತಿ ತಮಗೆ ಕೊಡಬೇಕೆಂದು ಕೇಳಿದ್ದೇ ಇಲ್ಲ. ಸರ್ಕಾರ ಒಂದು ವೇಳೆ ಆ ಸಮುದಾಯಗಳು ಕೇಳಿದ್ದ ಮೀಸಲಾತಿ ನ್ಯಾಯ ಸಮ್ಮತವೆಂದು ಬಗೆದಿದ್ದಲ್ಲಿ ಈಗಿರುವ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಇಲ್ಲವೇ ಬೇರೊಂದು ಬಗೆಯ ಪರಿಹಾರವನ್ನು ಕಂಡುಕೊಳ್ಳಬಹುದಾಗಿತ್ತು. ಆದರೆ ಸರ್ಕಾರದ ಉದ್ದೇಶ ಆ ಸಮುದಾಯಗಳಿಗೆ ನ್ಯಾಯ ಒದಗಿಸಬೇಕು ಎನ್ನುವುದಕ್ಕಿಂತ ಮುಸ್ಲಿಮರ ವಿರುದ್ಧ ಅಥವಾ ಮುಸ್ಲಿಮರನ್ನು ಆ ಸಮುದಾಯಗಳ ವಿರುದ್ಧ ಎತ್ತಿಕಟ್ಟಿ ಮುಂಬರುವ ಚುನಾವಣೆಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಬೇಕು ಎನ್ನುವ ಯೋಚನೆಯೇ ಆದ್ಯತೆಯನ್ನು ಪಡೆದಿತ್ತು. ಹೀಗಾಗಿ ಅಂತಹ ಒಂದು ಸಮ ಚಿತ್ತದ ಪರಿಹಾರ ರೂಪಿಸುವ ಬದಲು ಹಲವು ದಶಕಗಳಿಂದ ನೀಡಲಾಗುತ್ತಿದ್ದ ಮುಸ್ಲಿಂ ಮೀಸಲಾತಿಯನ್ನು ರದ್ದುಗೊಳಿಸಿ ವಾದಕ್ಕಾಗಿ ಅವರಿಗೆ ಆರ್ಥಿಕ ಹಿಂದುಳಿದ ಮೀಸಲಾತಿ ಕೋಟಾದಲ್ಲಿ ಒದಗಿಸಿರುವುದಾಗಿ ಹೇಳಿತ್ತು. ಮುಸ್ಲಿಮರಿಗೆ ನೀಡಲಾಗುತ್ತಿದ್ದ ಮೀಸಲಾತಿಯನ್ನು ರದ್ದುಪಡಿಸುವುದಕ್ಕೆ ಸರ್ಕಾರ ನೀಡಿದ ಕಾರಣ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂವಿಧಾನದಲ್ಲಿ ಮೀಸಲಾತಿ ಕೊಡುವಂತೆ ಇಲ್ಲ ಎನ್ನುವುದಾಗಿತ್ತು. ವಾಸ್ತವದಲ್ಲಿ ಈ ಮೀಸಲಾತಿಯನ್ನು ಈ ಅಂಶದ ಆಧಾರದಲ್ಲಿ ಕೊಟ್ಟಿರಲಿಲ್ಲ. ಹಿಂದುಳಿದ ವರ್ಗಗಳ ಆಯೋಗದ ವರದಿಗಳ ಶಿಫಾರಸಿನ ಆಧಾರದಲ್ಲಿ ಆರ್ಥಿಕ ಹಿಂದುಳಿದ ವರ್ಗಗಳ ವ್ಯಾಪ್ತಿಯಲ್ಲಿ ನೀಡಲಾಗಿತ್ತು. ಅಂದರೆ ಬಿಜೆಪಿ ಬೇಕೆಂದೇ ಜನತೆಯನ್ನು ತಪ್ಪು ದಾರಿಗೆಳೆಯುವ ಕೆಲಸಕ್ಕೆ ಮುಂದಾಗಿತ್ತು. ಈಗ ನೀಡಲಾದ ಮೀಸಲಾತಿಗೆ ಯಾವುದೇ ವೈಜ್ಞಾನಿಕ ಅಧ್ಯಯನದ ಅಥವಾ ಆಯೋಗಗಳ ವಾಸ್ತವಿಕ ವರದಿಯ ಆಧಾರದಲ್ಲಿ ಇಲ್ಲ ಎನ್ನುವುದನ್ನು ಸುಪ್ರೀಂಕೋರ್ಟ್ ಗಮನಿಸಿದೆ.

ಕರ್ನಾಟಕ ಸರಕಾರದ ಪರವಾಗಿ ವಿವರಗಳನ್ನು ಸಲ್ಲಿಸಲು ಸರ್ಕಾರಿ ವಕೀಲರು ಕಾಲಾವಕಾಶವನ್ನು ಕೇಳಿದರೆ, ಯಾವುದೇ ಆದೇಶ ಹೊರಡಿಸುವ ಮೊದಲು ಪಂಚಮಸಾಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ವಾದಗಳನ್ನು ಆಲಿಸಬೇಕೆಂದು ಆ ಸಮುದಾಯಗಳ ಪರವಾಗಿ ವಕೀಲರು ವಿನಂತಿಸಿದ್ದಾರೆ. ಹೀಗಾಗಿ ನ್ಯಾಯಾಲಯವು ಅದಕ್ಕಾಗಿ ಒಂದಿಷ್ಟು ಕಾಲಾವಕಾಶವನ್ನು ಕೊಟ್ಟಿದೆ. ಆದರೆ ಒಟ್ಟಾರೆ ಮೀಸಲಾತಿ ಕೊಟ್ಟಂತೆ ಮತ್ತು ಯಾರಿಗೂ ಸಿಗದಂತೆ ಆದರೆ ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಬೆಳೆಸುವಂತೆ ಮಾಡಿದ್ದ ಸರ್ಕಾರದ 'ಹಂಚಿಕೆ' ಈ ಹಂತದಲ್ಲಿ ಬಟಾ ಬಯಲುಗೊಂಡಿರುವುದು ವಾಸ್ತವ. ಈ ಮೂರು ಸಮುದಾಯಗಳು ಕುತಂತ್ರಕ್ಕೆ ಬಲಿಯಾಗದೇ ಇರುವುದು ಅಭಿನಂದನಾರ್ಹ. ಈಗಲೂ ಅದನ್ನು ಮತ್ತಷ್ಟೂ ಮನನ ಮಾಡಿಕೊಳ್ಳುವುದೂ ಅವಶ್ಯಕ.

ನಿವೃತ್ತಿ ವೇತನ, ಖಾಯಮಾತಿಗಾಗಿ ಹೋರಾಟ: ಮಾಲಿನಿ ಮೇಸ್ತ

ವರದಿ: ವಾ.ಉಚ್ಚಿಲ್

ಅಕ್ಷರದಾಸೋಹ ನೌಕರರಿಗೆ ನಿವೃತ್ತಿ ವೇತನ, ಖಾಯಮಾತಿ ಹಾಗೂ ಕನಿಷ್ಠ ಕೂಲಿಗಾಗಿ ಸಿಐಟಿಯು ನೇತೃತ್ವದಲ್ಲಿ ತೀವ್ರ ಹೋರಾಟ ನಡೆಸಲಾಗುವುದೆಂದು ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ ಹೇಳಿದ್ದಾರೆ.

ಉಡುಪಿ ಬನ್ನಂಜೆ ನಾರಾಯಣ ಗುರು ಮಂದಿರದ ಸಭಾ ಭವನದಲ್ಲಿ ಎಪ್ರಿಲ್ 12ರಂದು ನಡೆದ ಅಕ್ಷರದಾಸೋಹ ನೌಕರರ ಸಂಘದ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿ ನೌಕರರ ಸತತ ಹೋರಾಟಗಳಿಂದ ವೇತನದಲ್ಲಿ ಸ್ವಲ್ಪ ಮಟ್ಟದಲ್ಲಿ ಏರಿಕೆ ಮಾಡಿಕೊಳ್ಳಲಾಗಿದೆ ಈ ಹೋರಾಟಗಳನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಿಷ್ಟಗೊಳಿಸಿ ನ್ಯಾಯ ಪಡೆಯಬೇಕು ಎಂದು ಹೇಳಿದರು.

ಸಿಐಟಿಯು ಜಿಲ್ಲಾ ಮುಖಂಡ ಶಶಿಧರ ಗೊಲ್ಲ ಮಾತನಾಡಿದರು. ಅಧ್ಯಕ್ಷತೆಯನ್ನು ಸಂಘದ ಜಿಲ್ಲಾಧ್ಯಕ್ಷ ಜಯಶ್ರೀ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಸುನಂದ ವರದಿ ಲೆಕ್ಕಪತ್ರ ಮಂಡಿಸಿದರು.

ವರದಿ ಮೇಲೆ ಚರ್ಚೆ ನಡೆಸಿ ಅಂಗೀಕರಿಸಿದರು. ಸಮ್ಮೇಳನದಲ್ಲಿ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಜಯಶ್ರೀ, ಪ್ರಧಾನ ಕಾರ್ಯದರ್ಶಿಯಾಗಿ ಸುನಂದ, ಕೋಶಾಧಿಕಾರಿಯಾಗಿ ಕಮಲ ಆಯ್ಕೆಗೊಂಡರು. ಪದಾಧಿಕಾರಿಗಳು ಸೇರಿದಂತೆ 19 ಮಂದಿ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಯಿತು.

ಬಿಜೆಪಿ ಸರಕಾರ ಮತ್ತೆ ಅಧಿಕಾರಕ್ಕೇರದಂತೆ ತಡೆಯಲು ಕಾರ್ಮಿಕ ವರ್ಗ ನಿರ್ಧಾರ

ರಾಜ್ಯದಲ್ಲಿದ್ದ ಬಿಜೆಪಿ ಸರಕಾರ ನಿತ್ಯ ನಿರಂತರವಾಗಿ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸಿ ದುಡಿಯುವ ವರ್ಗದ ಜನತೆಯ ಬದುಕನ್ನೇ ಸರ್ವನಾಶಗೊಳಿಸಿದೆ. ದುಡಿಮೆಯ ಅವಧಿಯನ್ನು ಹೆಚ್ಚಳಗೊಳಿಸಿದ್ದು ಮಾತ್ರವಲ್ಲದೆ ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ದುಡಿಸುವ ಮೂಲಕ ತೀರಾ ಅಮಾನವೀಯ ಕಾರ್ಯಕ್ಕೆ ಮುಂದಾಗಿದೆ. ಜನರಲ್ಲಿ ಬೆಳೆದು ಬರುತ್ತಿರುವ ತೀವ್ರ ಪ್ರತಿರೋಧವನ್ನು ಬಗ್ಗು ಬಡಿಯಲು ಕೋಮುವಾದದ ಭೂತವನ್ನು ಮುನ್ನೆಲೆಗೆ ತಂದು ತಾನು ಮಾಡುತ್ತಿರುವ ಅನ್ಯಾಯವನ್ನು ಮರೆಮಾಚುತ್ತಿದೆ. ಇಂತಹ ಫ್ಯಾಸಿಸ್ಟ್ ಮನೋಭಾವದ ಸರಕಾರ ಮತ್ತೆ ಅಧಿಕಾರಕ್ಕೇರಿದರೆ ಜನತೆಯ ಬದುಕಿಗೆ ಮಾತ್ರವಲ್ಲ ನಾಡಿನ ಸೌಹಾರ್ದ ಪರಂಪರೆಗೆ ಅಪಾಯ ಕಟ್ಟಿಟ್ಟ ಬುತ್ತಿ, ಅದನ್ನು ತಡೆಯಲು ಕಾರ್ಮಿಕ ವರ್ಗ ಒಂದಾಗಿ ನಿಲ್ಲಬೇಕಾಗಿದೆ ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಂಗಳೂರಿನಲ್ಲಿ ಜರುಗಿದ ಸಿಐಟಿಯು ದ.ಕ. ಜಿಲ್ಲಾ ಮಟ್ಟದ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, ದುಡಿಯುವ ಜನತೆಯ ಯಾವುದೇ ಪ್ರಶ್ನೆಗಳಿಗೆ ಸ್ಪಂದಿಸದ ರಾಜ್ಯದ ಬಿಜೆಪಿ ಸರಕಾರ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದ್ದು ಮಾತ್ರವಲ್ಲದೆ, 40% ಕಮಿಷನ್ ಸರಕಾರವೆಂದು ಕುಖ್ಯಾತಿ ಗಳಿಸಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡಿ ದ.ಕ ಜಿಲ್ಲೆಯ ಅಭಿವೃದ್ದಿಯಾಗಬೇಕಾದರೆ ಸೌಹಾರ್ದತೆ ತೀರಾ ಅಗತ್ಯ, ದುಡಿಯುವ ವರ್ಗದ ಚಳುವಳಿಯಿಂದ ಮಾತ್ರವೇ ಸೌಹಾರ್ದತೆ ಮತ್ತು ಅಭಿವೃದ್ಧಿ ಸಾಧ್ಯ ಎಂದರು.

ಸಭೆಯಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಯು.ಬಿ. ಲೋಕಯ್ಯ, ಯೋಗೀಶ್ ಜಪ್ಪಿನಮೊಗರು, ಸುಕುಮಾರ್, ಮುನೀರ್ ಕಾಟಿಪಳ್ಳ,ರಾಧಾ ಮೂಡಬಿದ್ರಿ, ನೋಣಯ್ಯಾ ಗೌಡ, ಸುಂದರ ಕುಂಪಲ, ಬಿ ಕೆ ಇಮ್ತಿಯಾಜ್, ವಸಂತಿ ಕುಪ್ಪೆಪದವು, ಗಿರಿಜಾ ಮೂಡಬಿದ್ರಿ, ಲೋಲಾಕ್ಷಿ ಬಂಟ್ವಾಳ ಮುಂತಾದವರಿದ್ದರು.

ಹೇಮಾವತಿ ನಾಲಾ ಕಾಮಗಾರಿ–ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ, ಸಮಗ್ರ ತನಿಖೆಗೆ ಸಿಪಿಐ(ಎಂ) ಒತ್ತಾಯ

ಕೆ.ಆರ್. ಪೇಟೆ – ನಾಗಮಂಗಲ – ಪಾಂಡವಪುರ ತಾಲ್ಲೂಕುಗಳನ್ನು ಹಾದು ಹೋಗುವ ಹೇಮಾವತಿ ನಾಲೆಯ 142 ಕಿಲೋಮೀಟರ್ ದುರಸ್ತಿ ಕಾಮಗಾರಿಯಲ್ಲಿ ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿದ್ದು, ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮಂಡ್ಯ ಜಿಲ್ಲಾ ಸಮಿತಿ ಒತ್ತಾಯಿಸಿದೆ.

2019–20 ರಲ್ಲಿ ಕಾಮಗಾರಿ ಪೂರ್ಣಗೊಳಿಸಿ ಬಿಲ್ ಪಾವತಿಯಾಗಿರುವ ಸದರಿ ಕಾಮಗಾರಿಯ ಒಟ್ಟು ಮೊತ್ತ 1102 ಕೋಟಿ ರೂಪಾಯಿಗಳಾಗಿದ್ದು ಕೇವಲ ಹಳ್ಳ ಬಿದ್ದ ಕಡೆ ಕಲ್ಲು ಮಿಶ್ರಿತ ಮಣ್ಣು ತುಂಬಿಸಲು 252 ಕೋಟಿ ರೂಪಾಯಿ ಬಿಲ್ ಮಾಡಲಾಗಿದೆ, ಆದರೆ ಒಂದೇ ಒಂದು ಲಾರಿ ಮಣ್ಣನ್ನೂ ಹಾಕದೆ ಇಡೀ 253 ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆಯಲಾಗಿದೆ ಎಂದು ಸಿಪಿಐ(ಎಂ) ಆರೋಪಿಸಿದೆ.

ರೈತ ಸಂಘ ಮತ್ತು ಇತರೆ ಸಾಮಾಜಿಕ ಸಂಘಟನೆಗಳು ಮಾಹಿತಿ ಹಕ್ಕಿನಡಿ ಪಡೆದಿರುವ ದಾಖಲೆಗಳು ಎಲ್ಲವನ್ನೂ ಜಗಜ್ಜಾಹೀರು ಮಾಡಿವೆ. ಒಂದು ಕ್ಯುಬಿಕ್ ಮೀಟರ್ ಮಣ್ಣಿಗೆ 169 ರೂಪಾಯಿ ಇರುವೆಡೆ ನೂರಾರು ಕಿಲೋಮೀಟರ್ ದೂರದಿಂದ ಮಣ್ಣು ತರಬೇಕೆಂದು ಸುಳ್ಳು ಹೇಳಿ ಒಂದು ಕ್ಯುಬಿಕ್ ಮೀಟರ್ ಮಣ್ಣಿಗೆ 672 ರೂಪಾಯಿಯಂತೆ ಅಂದಾಜು ತಯಾರಿಸಲಾಗಿದೆ. ಹಣ ಲಪಟಾಯಿಸುವ ಉದ್ದೇಶದಿಂದಲೇ ಈ ರೀತಿಯಲ್ಲಿ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಅಧಿಕಾರಸ್ಥ ರಾಜಕಾರಣಿಗಳು ಅಂದಾಜು ವೆಚ್ಚವನ್ನು ಹೆಚ್ಚಿಸಿ ಮೋಸ ಮಾಡಿದ್ದಾರೆ.

ಆದರೆ 142 ಕಿಲೋಮೀಟರ್ ಉದ್ದಕ್ಕೂ ಮಣ್ಣು ತುಂಬಲು ಸುಮಾರು 35 ಲಕ್ಷ ಘನ ಅಡಿ ಮಣ್ಣು ಬೇಕಾಗುತ್ತದೆ. ಅಂದರೆ ಸುಮಾರು ಒಂದು ಲಕ್ಷ ಲಾರಿ ಲೋಡ್ ಮಣ್ಣು ಬೇಕಾಗುತ್ತದೆ. ಆದರೆ ಒಂದು ಲೋಡೂ ಮಣ್ಣು ಹಾಕದೆ ಇಡೀ ಹಣವನ್ನು ದೋಚಲಾಗಿದೆ. ಇದು ಬಿಜೆಪಿ ಸರ್ಕಾರದ 40% ಭ್ರಷ್ಟಾಚಾರವಲ್ಲ, 400% ಭ್ರಷ್ಟಾಚಾರ. ಇದರ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಬೇಕು. ತಪ್ಪಿತಸ್ಥ ಎಲ್ಲರನ್ನೂ ಶಿಕ್ಷಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಮಾಹಿತಿ ಹಕ್ಕಿನಡಿ ಮಾಹಿತಿ ನೀಡಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾವೇರಿ ನೀರಾವರಿ ನಿಗಮ ಮತ್ತು ತಾಲ್ಲೂಕು ಆಡಳಿತಗಳು ಮಣ್ಣು ತೆಗೆಯಲಾಗಿದೆ ಎಂದು ಗುತ್ತಿಗೆದಾರರು ನಮೂದಿಸಿದ ಜಮೀನುಗಳಲ್ಲಿ ಯಾವುದೇ ಮಣ್ಣು ತೆಗೆದಿಲ್ಲ ಎಂದು ಮಾಹಿತಿ ನೀಡಿವೆ. ಅದರಲ್ಲೂ ಕದಲಗೆರೆ ಗ್ರಾಮದ ಸರ್ವೇ ನಂಬರ್ 207 ರಲ್ಲಿ ಮೇಲುಕೋಟೆ ನರಸಿಂಹಸ್ವಾಮಿ ದೇವಾಲಯವಿದೆ ಹಾಗೆಯೇ ಚೌಡಹಳ್ಳಿ ಎಂಬ ಗ್ರಾಮ ಮಂಡ್ಯ ಜಿಲ್ಲೆಯ ದಾಖಲೆಗಳಲ್ಲೇ ಇಲ್ಲ ಎಂದು ಮಾಹಿತಿ ನೀಡಿದ್ದಾರೆ.

1102 ಕೋಟಿ ರೂಪಾಯಿಗಳ ಈ ಕಾಮಗಾರಿಯಲ್ಲಿ ಕೇವಲ ಮಣ್ಣು ತುಂಬುವ ವಿಷಯದಲ್ಲಿ ಮಾತ್ರವೇ ಅಲ್ಲ ಇತರೆ ಎಲ್ಲಾ ಕಾಮಗಾರಿಗಳಲ್ಲಿ ಇದೇ ರೀತಿಯ ಮೋಸ, ಭ್ರಷ್ಟಾಚಾರ ನಡೆದಿದೆ. ಇದು ಬಿಜೆಪಿ ಸರ್ಕಾರ ಕಳೆದ ಮೂರೂವರೆ ವರ್ಷಗಳಲ್ಲಿ ಕೆಲಸ ಮಾಡಿರುವ ರೀತಿ. ಹಾಗಾಗಿ ಸಮಗ್ರ ತನಿಖೆ ನಡೆಸಿ ಹಗರಣದಲ್ಲಿ ಭಾಗಿಯಾದ ಎಲ್ಲರನ್ನೂ ಶಿಕ್ಷಿಸಬೇಕೆಂದು ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಸಿಪಿಐ(ಎಂ) ಹಿರಿಯ ಸದಸ್ಯರಾದ ದೊಂಬಯ್ಯ ಮೂಲ್ಯ ನಿಧನ



ಸಿಪಿಐ(ಎಂ) ಪಕ್ಷದ ಸದಸ್ಯರೂ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಬಂಟ್ವಾಳದ ಕಾ.ದೊಂಬಯ್ಯ ಮೂಲ್ಯ (65ವರ್ಷ) ರವರು 14 ಏಪ್ರಿಲ್ 2023ರ ಸಂಜೆ ಬಂಟ್ವಾಳ ಬೈಪಾಸ್ ನಲ್ಲಿ ನಡೆದ ರಸ್ತೆ ಅಪಘಾತವೊಂದರಲ್ಲಿ ಸಾವನ್ನಪ್ಪಿದರು.

ಬಂಟ್ವಾಳದ ಭಂಡಾರಿಬೆಟ್ಟು ನಿವಾಸಿಯಾಗಿದ್ದ ಕಾಂ. ದೊಂಬಯ್ಯ ಮೂಲ್ಯರವರು ಮಂಗಳೂರಿನ ಮರೋಳಿಯಲ್ಲಿರುವ ಕೆನರಾ ವರ್ಕ್ಸ್ ಶಾಪ್ ನಲ್ಲಿ ದೀರ್ಘ ಕಾಲ ಉದ್ಯೋಗಿಯಾಗಿ ಕೆಲಸ ನಿರ್ವಹಿಸಿದರು. ಕಳೆದ 5 ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ತಮ್ಮ ದುಡಿಮೆಯ ಕಾಲಾವಧಿಯಲ್ಲಿ ಕಾರ್ಮಿಕರ ಸಂಕಷ್ಟವನ್ನು ಸ್ವತಃ ಅರಿತು ಕಾರ್ಮಿಕ ನಾಯಕರಾಗಿ ಬೆಳೆದರು. ಆ ಮೂಲಕ ಫ್ಯಾಕ್ಟರಿ ಕಮಿಟಿ ಕಾರ್ಯದರ್ಶಿಯಾಗಿ, ಮೋಟಾರ್ ಟ್ರಾನ್ಸ್ ಪೋರ್ಟ್ ಆಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ರಿ) ಸಿಐಟಿಯು ಸದಸ್ಯರಾಗಿ, ನಂತರ ಅದರ ಪ್ರಮುಖ ಪದಾದಿಕಾರಿಯಾಗಿ ದುಡಿದು ಕಾರ್ಮಿಕ ವರ್ಗಕ್ಕೆ ನಾಯಕತ್ವ ನೀಡಿದರು. ಸಿಐಟಿಯು ದ.ಕ ಜಿಲ್ಲಾ ಸಮಿತಿಯ ಸದಸ್ಯರಾಗಿ, ಕಮ್ಯೂನಿಸ್ಟ್ ಕಾರ್ಯಕರ್ತರಾಗಿ, ದುಡಿಯುವ ಜನತೆಯ ಮಧ್ಯೆ ಕೆಲಸ ನಿರ್ವಹಿಸಿರುವ ದೊಂಬಯ್ಯ ಮೂಲ್ಯರ ಅಗಲುವಿಕೆ ಕಾರ್ಮಿಕ ವರ್ಗದ ಚಳುವಳಿಗೆ ತುಂಬಲಾರದ ನಷ್ಟವಾಗಿದೆ ಎಂದು ಸಿಐಟಿಯು ದ.ಕ. ಜಿಲ್ಲಾ ಸಮಿತಿಯು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

'ಕಾಣೆಯಾಗುತ್ತಾರೆ'

ರಾತ್ರಿಗೆ ಅದೆಷ್ಟು ಕಗ್ಗಂಟುಗಳು
ಆಕಾಶದಲ್ಲಿ, ಭೂಮಿಯಲ್ಲಿ
ಬೆಡ್ರುಮಿನ ಹಾಸಿಗೆಯಲ್ಲಿ
ನಡುಬೀದಿಯಲ್ಲಿ ಸಂಸಾರ ಹೂಡಿದ ನಾಯಿಗಳಂತೆ
ಮಲಗಿರುತ್ತವೆ

ಹೌದು ಜಗವೆಲ್ಲ ಮಲಗಿರುತ್ತದೆ
ಸೂರ್ಯನ ಮಕ್ಕಳೆಲ್ಲ ಮಲಗಿರುತ್ತಾರೆ
ಆದರೆ ಆದರೇ ಚಂದಿರ ರಾತ್ರಿಗೆ ಪಹರೆ ಕುಂತಿರುತ್ತಾನೆ
ನಕ್ಷತ್ರಗಳ ಜೊತೆಗೆ,
ಅಮಾಸಿಯ ರಾತ್ರಿಗೆ ನಕ್ಷತ್ರಗಳೆಲ್ಲ ಹೊಂಚು ಹಾಕುತ್ತಲೇ
ಇರುತ್ತವೆ

ನದಿ ತಣ್ಣನೆ ಹರಿಯುತ್ತಿರುತ್ತದೆ
ಗಾಳಿ ತಂಪಾಗಿ ಬೀಸುತ್ತಿರುತ್ತದೆ
ರೈಲು ನಿಶಬ್ದದ ಹೊಟ್ಟೆ ತೂರಿ ತಾಳ ಹಾಕುತ್ತಾ ಚಲಿಸುತ್ತದೆ
ಇವಷ್ಟೇ ಅಲ್ಲ ಅದೆಷ್ಟೋ ಕನಸುಗಳು ರಾತ್ರಿಗೆ ನನಸಾಗುತ್ತವೆ
ಮತ್ತು ಸತ್ತುಹೋಗುತ್ತವೆ

ದಂದೆಗಳ ಲಿಸ್ಟಿಗೆ ಹೊಸದೊಂದು ಸೇರ್ಪಡೆ
ದುಡಿದು ದಣಿದು ಗೇಣುದ್ದ ಜಾಗದಲ್ಲಿ ಬೆಚ್ಚಗೆ ಮಲಗಿದ್ದ
ಬೆವರ ಮಕ್ಕಳು ಕಾಣೆಯಾಗಿ ಬಿಡುತ್ತಾರೆ

ಹೌದು ಕಾಣೆಯಾಗುತ್ತಾರೆ
ಮುಂಜಾನೆಗೆ ಬೆವರೆಲ್ಲ ರಕ್ತವಾಗಿ ಹರಿಯುತ್ತದೆ
ಸ್ವಲ್ಪ ಹೊತ್ತಿಗೆ ಹೆಪ್ಪುಗಟ್ಟಿ ದನ ತಿನ್ನುವವರ, ಅಜಾ ಕೂಗುವವರ
ಚಹರೆ ಪಡುತ್ತದೆ
ಸಂಜೆಗೆ ನೆತ್ತರು, ಮಾಂಸ ಕೊಳೆತು ಉರೋಟು ನಾತ

ನಾತ ನಾತ ನಾತ
ಕೊಲೆಯಾದವರಿಗೆ ದೇಶದ್ರೋಹಿಗಳು ಪಟ್ಟ
ಕೊಂದವರೆಲ್ಲರೂ ದೇಶಪ್ರೇಮಿಗಳು

ಎಚ್ಚರ ಎಚ್ಚರ ಅಣ್ಣಗಳಿರಾ ಎಚ್ಚರ
ಒಂದು ದಿನ ದೇಶದ್ರೋಹಿಗಳ ಪಾಳಿ ಮುಗಿದುಹೋಗುತ್ತದೆ
ಮರುದಿನದ ದಾಹಕ್ಕೆ ದೇಶಭಕ್ತರದ್ದೆ ನೆತ್ತರು,
ಹಸಿವಿಗೆ ಮತ ಹೊತ್ತ ಮೈಗಳ ಬೇಕು....

~ ವಿಶಾಲ್ ಮ್ಯಾಸರ್

ಸ್ಫೋಟಗೊಳ್ಳುತ್ತಿರುವ ಒಳ ಬಂಡಾಯಗಳು



ರಾಜ್ಯದ ರಾಜಕಾರಣದಲ್ಲಿ ಬಿಜೆಪಿ ಪಕ್ಷದೊಳಗಿನ ಈ ಬಾರಿ ಬಂಡಾಯ ಬಹಳ ಮಹತ್ವದ ಅಂಶ. ಇದು ಜನತೆಯೊಳಗೆ ತೀವ್ರ ಮಡುಗಟ್ಟಿರುವ ಅತೃಪ್ತಿಯ ಒಂದು ಮಟ್ಟಿನ ಪ್ರತಿಫಲನವೂ ಕೂಡ.

ಅಧಿಕಾರದ ಕುರ್ಚಿಗೆ 'ದಸ್ತಿ' ಹಾಕಿರುವ ಮುಖ್ಯವಾಗಿ ಮೂರು ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಬಹುತೇಕ ಬಿಡುಗಡೆ ಮಾಡಿವೆ. ಉಳಿದಿರುವ ಕೆಲವು 'ಕುತೂಹಲ' ಉಳಿಸಿಕೊಂಡಿರುವ ಕ್ಷೇತ್ರಗಳಂತೆ! ಎದುರಾಳಿ ಯಾರಿರುತ್ತಾರೆ ಎನ್ನುವುದನ್ನು ನೋಡಿಕೊಂಡು ಅಭ್ಯರ್ಥಿಯನ್ನು ಆಯ್ಕೆಮಾಡುವರಂತೆ. ಆಯಾ ಪಕ್ಷಗಳು ಅನುಭವಿ, ಜನಾನುರಾಗಿಯನ್ನು ಅಭ್ಯರ್ಥಿಯನ್ನಾಗಿಸುವ ಪದ್ಧತಿ ಹೊರಟೇ ಹೋಗಿ ಗೆಲ್ಲುವ 'ಮಾನದಂಡ' ವೇ ಮೇಲುಗೈ ಸಾಧಿಸಿರುವಾಗ ಚುನಾವಣೆಗೂ ಮೊದಲೇ ಅಭ್ಯರ್ಥಿ ಆಯ್ಕೆಯೇ ಕುತೂಹಲಕಾರಿಯೂ, ರೋಮಾಂಚಕಾರಿಯೂ ಆಗಿರುತ್ತದೆ. ಎಲ್ಲವನ್ನೂ ಹೈ ಕಮಾಂಡಿಗೆ ಒಪ್ಪಿಸಿರುವುದರಿಂದ ಕೆಳಗಿನಿಂದ ಮೇಲಿನವರೆಗೂ ಆಕಾಂಕ್ಷಿಗಳು ಲಾಬಿ ಮಾಡಬೇಕು. ಅರ್ಜಿ ತುಂಬಿ ನಾಯಕರ ಸಂದರ್ಶನಗಳನ್ನು ಎದುರಿಸಬೇಕು. ಇದಕ್ಕೂ ಮೊದಲು ಆಯಾ ಪಕ್ಷದ ಹೈ ಮತ್ತು ಲೋ ಕಮಾಂಡ್ ಗಳು ಕ್ಷೇತ್ರ ಸರ್ವೆ ಮಾಡಿಸಬೇಕು, ಅದೂ ಸಾಲದೇ ಆಕಾಂಕ್ಷಿ ಅಭ್ಯರ್ಥಿಗಳು ಸಹ ತಮ್ಮ ಬಗ್ಗೆ, ಬಯಸುವ ಪಕ್ಷದ ಅಲೆ ಬಗ್ಗೆಯೂ ಮಾಡಿಸಿಕೊಳ್ಳುತ್ತಾರೆ! ಇಂತಹ ಸರ್ವೆಗಳು ಸುಮ್ಮನೇ ಆಗುತ್ತವೆಯೇ? ಕೋಟಿ ಅಲ್ಲದಿದ್ದರೂ, ಅದಕ್ಕೂ ಹಲವು ಲಕ್ಷಗಳನ್ನು ಸುರಿಯಬೇಕು! ಚುನಾವಣೆ, ಅಧಿಕಾರ ಅನ್ನುವುದು ಸುಲಭ ಅಲ್ಲ ನೋಡಿ. ಅದು ಭರ್ಜರಿ ಬಂಡವಾಳ ಹೂಡುವ ಉದ್ಯಮ. ಉದಾರೀಕರಣ, ಕಾರ್ಪೋರೇಟ್ ರಾಜಕಾರಣದ ಕಾಲದಲ್ಲಿ ಯಾವುದೂ ಸುಲಭವೂ ಅಲ್ಲ, ಪುಕ್ಕಟೆ ಸಿಗುತ್ತದೆ ಎಂದು ಭಾವಿಸುವಂತಿಲ್ಲ!

ಇಷ್ಟೆಲ್ಲ ಕಸರತ್ತುಗಳನ್ನು ಮಾಡಿದ ಬಳಿಕವೂ ಆಯಾ ಪಕ್ಷಗಳ ಒಳಗಡೆಯಲ್ಲಿ ಟಿಕೆಟ್ ಆಕಾಂಕ್ಷಿಗಳಿಂದ ಭಿನ್ನಮತ ಸ್ಫೋಟಿಸಿದೆ. ಬಂಡಾಯದ ಸ್ವರೂಪ ಪಡೆದಿದೆ. ಈ ಚುನಾವಣೆಯ ಸರಣಿಯಲ್ಲಿ ಅಂತೂ ಅತಿ ಹೆಚ್ಚು ಅತೃಪ್ತಿ ಬಂಡಾಯಗಳು ನಡೆಯುತ್ತಿರುವುದು ಭಾರತೀಯ ಜನತಾ ಪಕ್ಷದಲ್ಲಿ. ಶಿಸ್ತು ಮತ್ತು ಸಿದ್ಧಾಂತಕ್ಕೆ ಬದ್ಧರು ಎಂದು ಹೇಳಿಕೊಂಡ ಬಿಜೆಪಿಯ ಅನೇಕ ಹಿರಿಯರು ಟಿಕೆಟ್ ವಂಚಿತರಾಗುತ್ತಲೇ ಸಿಡಿದೆದಿದ್ದಾರೆ. ಅವರಿಗೆ ಟಿಕೆಟ್ ಸಿಕ್ಕಿಲ್ಲ ಎನ್ನುವ ದೃಷ್ಟಿ ಒಂದು ಕಡೆ ಇರುವಾಗಲೇ ರಾಜ್ಯದ ರಾಜಕಾರಣದಲ್ಲಿ ಬರಲಿರುವ ಬಿರುಗಾಳಿ ಬದಲಾವಣೆಗಳನ್ನು ಆಯಾ ಪಕ್ಷಗಳಲ್ಲಿ ಅವರು ಅಂದಾಜಿಸಿಕೊಂಡಂತಿದೆ.

ಪ್ರಮುಖವಾಗಿ, ಆಡಳಿತರೂಢ ಬಿಜೆಪಿ ಪಕ್ಷ ಜನತೆಯ ಅತೃಪ್ತಿ, ಸಿಟ್ಟನ್ನು ಎದುರಿಸುತ್ತಿರುವಾಗಲೇ ಅತಿ ಪ್ರಭಾವಿ ನಾಯಕರುಗಳನ್ನು ಮೂಲೆಗೆ ತಳ್ಳಿ ಹೊಸಬರಿಗೆ ಟಿಕೆಟ್ ನೀಡಿರುವುದು ಮಹತ್ವದ ಅಂಶ. ಈ ಸಂದರ್ಭವನ್ನೇ ಬಳಸಿಕೊಂಡು ತಮಗೆ ಬೇಡವಾದ ನಾಯಕರುಗಳನ್ನು ಅಂದರೆ ಜನ ಸಮೂಹಗಳ ನಡುವಿನಲ್ಲಿ ಅತ್ಯಂತ ಪ್ರಭಾವಶಾಲಿಯಾಗಿರುವ ನಾಯಕರುಗಳನ್ನು ನೇಪಥ್ಯಕ್ಕೆ ಸರಿಸುವ ಮತ್ತು 'ಕೇಶವ ಕೃಪಾ'ದ ನೇರ ನಿಯಂತ್ರಣದಲ್ಲಿ ಇರುವವರನ್ನು ಗೆಲ್ಲಿಸಿ ಸಂಪೂರ್ಣ ಹಿಡಿತ ಸಾಧಿಸುವ ವರಸೆಯೂ ಇಲ್ಲಿದೆ. ಬಹು ಹಿಂದಿನಲ್ಲೇ ಲಿಂಗಾಯತರ ನಡುವಿನಲ್ಲಿ ಮತ್ತು ರಾಜ್ಯದ ರಾಜಕಾರಣದಲ್ಲಿ ಪ್ರಭಾವಿ ನಾಯಕರಾಗಿ ಹಿಡಿತ ಹೊಂದಿದ್ದ ಬಿ.ಎಸ್. ಯಡಿಯೂರಪ್ಪನವರನ್ನು ಪೂರ್ಣ ಮೂಲೆಗೆ ತಳ್ಳಲು ಪ್ರಯತ್ನ ಆರಂಭಗೊಂಡಿತ್ತು. ಅಲ್ಪ ಕಾಲದ ನಂತರದಲ್ಲಿ ಬಸವರಾಜ ಬೊಮ್ಮಾಯಿ ಅವರನ್ನೇ ಬದಲಿಸುವುದಕ್ಕೆ ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನಿಸಿತು. ಆ ಬಳಿಕ ಕೆ. ಎಸ್.ಈಶ್ವರಪ್ಪ, ಆರ್. ಅಶೋಕ, ಅವರು ಹಿಂದೆ ಸರಿಯುವಂತೆ ಒತ್ತಡ ಹೇರಲಾಗಿತ್ತು. ಇವ್ಯಾವನ್ನೂ ಕೇಳದೆ ಇರುವಾಗ ಒಂದೊಂದು ಕಾರಣಗಳನ್ನು ಒಡ್ಡಿ ಸರಿಸುವ ಪ್ರಯತ್ನಗಳು ನಡೆದಿದ್ದವು. ಹಾಗೂ ಹೀಗೂ ಅಧಿಕಾರಕ್ಕೆ ಅಂಟಿಕೊಂಡಿದ್ದ ಆರ್.ಅಶೋಕ್ ಅವರಿಗೆ ಈಗ ಡಿ.ಕೆ.ಶಿವಕುಮಾರ್ ವಿರುದ್ಧ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗಿದೆ. ತನ್ನೊಂದಿಗೆ ತನ್ನ ಮಗನಿಗೆ ಸ್ಥಾನ ದೊರಕಿಸಿಕೊಡಬೇಕು ಎಂದು ಯತ್ನಿಸಿ ಇನ್ನೇನು ಬಿಜೆಪಿಯನ್ನು ಬಿಟ್ಟು ಹೊರಟೆ ಹೋದರು ಎನ್ನುವಂತೆ ಬಂಡಾಯದ ಬಾವುಟ ಹರಿಸುತ್ತಿದ್ದ ವಿ. ಸೋಮಣ್ಣನವರನ್ನು ಸಿದ್ದರಾಮಯ್ಯನವರ ಎದುರಿಗೆ ವರುಣಾದಲ್ಲಿ ಅಭ್ಯರ್ಥಿಯನ್ನಾಗಿಸಲಾಗಿದೆ. ಅಲ್ಲಿ ಚುನಾವಣೆಯ ಸ್ಪರ್ಧೆಯಲ್ಲಿ ಫಲಿತಾಂಶ ಏನಾಗುತ್ತದೆ ಎನ್ನುವುದು ಮುಂದಿನ ವಿಷಯ. ಆದರೆ ಅವರು ಹೋರಾಡಬೇಕಾಗಿರುವುದು ಎಂಥವರೊಂದಿಗೆ ಎನ್ನುವುದು ಸ್ಪಷ್ಟವಾಗಿರುವಂತದ್ದೇ. ಅಲ್ಲಿ ಸೆಣಸಾಡಿ ಉಳಿದು ಬಂದರೆ ಮುಂದೆ ಅಧಿಕಾರ. ಇಷ್ಟೇ ಅಲ್ಲವೇ ಅದರ ಸಂದೇಶ! ಅವರು ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೂ ಅಲ್ಲಿಯೂ ಒಳಬಂಡಾಯಗಳು ಸ್ಫೋಟಗೊಂಡಿವೆ. ವಿ.ಸೋಮಣ್ಣನವರ ಬರವಿಗೆ ಸ್ಥಳೀಯ ಬಿಜೆಪಿ ಟಿಕೆಟ್ ಆಕಾಂಕ್ಷಿಯ ನೇತೃತ್ವದಲ್ಲಿ ಧರಣಿ ನಡೆದಿದೆ. ವರುಣಾ ದಲ್ಲಿ ಬಿಎಸ್.ವೈ.ಯ ಬಲಗೈ ಬಂಟ ಸಿದ್ದಲಿಂಗಸ್ವಾಮಿಯ ಕೈ ಹಿಡಿದ ಸೋಮಣ್ಣ ನಿನ್ನನ್ನೇ ನಂಬಿ ಬಂದಿದ್ದೀನಿ ಕಣಯ್ಯಾ ಅಂತಾ ಗೋಗರೆದಿದ್ದಾರೆ. ಮೋ–ಶಾ ತಂಡದ ತಲೆಯಲ್ಲಿ ಏನೇನು ಯೋಜನೆಗಳಿವೆ ಎನ್ನುವುದು ಅಲ್ಲಿಯ ನಾಯಕರಿಗೂ ಅಷ್ಟು ನಿಲುಕುತ್ತಿಲ್ಲ ಎನ್ನುವುದು ನಿಜ.

ಆದರೆ ಬದಲಾವಣೆ ಅಷ್ಟಾಗಿ ನಿರೀಕ್ಷಿಸದಿದ್ದ ಲಕ್ಷ್ಮಣ ಸವದಿ ಮತ್ತು ಜಗದೀಶ್ ಶೆಟ್ಟರ್ ಇವರನ್ನು ಟಿಕೆಟ್ ನೀಡದೇ ಹೊರಗಿಟ್ಟಿದ್ದು ಮಾತ್ರ ವಿಶೇಷ, ಕುತೂಹಲಕಾರಿಯೂ ಆಗಿದೆ. ಅವರಿಗೆ ಟಿಕೆಟ್ ಒಂದು ಕೊನೆಯ ಬಾರಿ ನೀಡಬೇಕೆಂದು ಹಲವು ಮನವಿ ಮತ್ತು ಒತ್ತಡಗಳ ಬಳಿಕವೂ ಹೈಕಮಾಂಡ್ ಸೊಪ್ಪು ಹಾಕಿಲ್ಲ. ಅಂದರೆ ಇಲ್ಲಿ



ಎಲ್ಲವನ್ನು ನಿರ್ಧರಿಸುವ ಸಂಘ ಪರಿವಾರ ಮತ್ತು ವಿಶೇಷವಾಗಿ ಮೋ–ಶಾ ಹೈಕಮಾಂಡ್ ನಿಶ್ಚಿತವಾದ ಒಂದು ನೀಲಿನಕಾಶೆ ಯನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಇಂತಹದರ ಸುಳಿವು ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ ಅಂತವರಿಗೆ ಗೊತ್ತಿರಬಹುದು, ಗೊತ್ತಿಲ್ಲದೆ ಇರಬಹುದು. ಆದರೆ ತಾವು ಈ ಪಕ್ಷದಲ್ಲಿ ಇದ್ದರೆ ಇನ್ನು 'ಶೂನ್ಯಸಿಂಹಾಸನಾದೀಶ'ರು ಆಗಬೇಕಾಗುತ್ತದೆ ಎನ್ನುವ ಅರಿವು ಮೂಡಿರುವುದಂತೂ ನಿಜ. ಹಾಗಾಗಿಯೇ ಆ ಪಕ್ಷಗಳಿಂದ ಹೊರ ನಡೆದಿರುವುದು, ತಮ್ಮ ಮುಂದಿನ ಭವಿಷ್ಯ ಉಳಿಸಿಕೊಳ್ಳಬೇಕು ಎನ್ನುವ ದೆಸೆಯಲ್ಲಿ.

<u>ಬಿಜೆಪಿ ಸಿದ್ಧಪಡಿಸಿದ ಪಟ್ಟಿ ಮತ್ತು ಘಟಾನುಘಟಿ ನಾಯಕರಗಳನ್ನು ಹೊರ ದಬ್ಬಲು ಹೊರಟ ರೀತಿ ಇವೆಲ್ಲವುಗಳನ್ನು ಒಟ್ಟಿಗೆ ವಿಶ್ಲೇಷಿಸಿದರೆ ಕರ್ನಾಟಕ ರಾಜ್ಯದಲ್ಲಿ ಮುಂದಿನ ಚುನಾವಣೆ ಬಳಿಕ ರಚನೆಯಾಗುವ ಸರ್ಕಾರವನ್ನು ಕೇಶವ ಕೃಪ ಮತ್ತು ನಾಗಪುರಗಳು ನೇರವಾಗಿ ತಮ್ಮ ಸುಪರ್ದಿನಲ್ಲಿ ತೆಗೆದುಕೊಳ್ಳಲು ಮುಂದಾಗಿವೆ ಎನ್ನುವುದರ ಬಗ್ಗೆ ಅನುಮಾನವಿಲ್ಲ.</u>

ಬಿಜೆಪಿ ಟಿಕೆಟ್ ಸಿಗದ ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ ಮುಂತಾದವರು ಖಂಡಿತಕ್ಕೂ ಪ್ರಭಾವಿ ನಾಯಕರು ಎನ್ನುವುದು ನಿಜ. ಅದನ್ನು ಗಮನಿಸಿಯೇ ಇಂಥವರನ್ನು ತಮ್ಮ ಕಡೆಗೆ ಸೆಳೆಯಲು ಕಾಂಗ್ರೆಸ್ ಮುಂದಾಗಿದೆ. ಮತ್ತು ಅವರು ಸಹ ಸೇರ್ಪಡೆಗೊಳ್ಳುತ್ತಿದ್ದಾರೆ. ರಾಜ್ಯದ ರಾಜಕಾರಣದಲ್ಲಿ ಬಿಜೆಪಿ ಪಕ್ಷದೊಳಗಿನ ಈ ಬಾರಿ ಬಂಡಾಯ ಬಹಳ ಮಹತ್ವದ ಅಂಶ ಮತ್ತು ಜನತೆಯೊಳಗೆ ತೀವ್ರ ಮಡುಗಟ್ಟಿರುವ ಅತೃಪ್ತಿಯ ಒಂದು ಮಟ್ಟಿನ ಪ್ರತಿಫಲನವೂ ಕೂಡ.

ಪ್ರಶ್ನೆ ಎದುರಾಗಿರುವುದು ಈ ಹಿಂದೆ ಬಿಜೆಪಿ ಪಕ್ಷ ಮತ್ತು ಸಂಘ ಪರಿವಾರದ ಪ್ರತಿ ಕ್ರಮ ಮತ್ತು ನಿಲುವುಗಳನ್ನು, ಉಗ್ರಹಿಂದುತ್ವವಾದದ ಬಗ್ಗೆ ಬಹಳಷ್ಟು ಗಟ್ಟಿದನಿಯಲ್ಲಿ ಸಮರ್ಥಿಸಿಕೊಳ್ಳುತ್ತಿದ್ದವರು ಈಗ ಅದ್ಹೇಗೆ ಬದಲಾಗುತ್ತಾರೆ ಅಥವಾ ಅಂತಹವರನ್ನು ಸೇರಿಸಿಕೊಂಡ ಕಾಂಗ್ರೆಸ್ ಏನಾಗಬಹುದು ಎನ್ನುವ ಸಹಜ ಪ್ರಶ್ನೆಗಳಿವೆ. ಈ ನಾಯಕರು ಮಾತನಾಡುತ್ತಿದ್ದ ದಾಟಿಗಳನ್ನು ನೋಡಿದರೆ ಸಿದ್ಧಾಂತ ಪ್ರಖರತೆ ಅಧಿಕಾರ ಕುರ್ಚಿಗೆ ಸೀಮಿತವಾಗಿತ್ತೇನೋ ಎನಿಸುತ್ತದೆ. ಮುಂದೆ ಹೇಗೆ ಎನ್ನುವುದನ್ನು ಈಗ ಹೇಳಲಾಗುವುದಿಲ್ಲ. ಯಾಕೆಂದರೆ ಅವರು ಸೇರುವ ಪಕ್ಷದ ನೀತಿ ನಿಲುವುಗಳು ಅವರಿಗೆ ಗೊತ್ತಿಲ್ಲ ಎಂದೇನಲ್ಲ. ಆದರೆ ವಿವಿಧ ಪಕ್ಷಗಳಲ್ಲಿರುವ ನಾಯಕರು ಎಷ್ಟು ಸುಲಭದಲ್ಲಿ ಮತ್ತೊಂದು ಪಕ್ಷಕ್ಕೆ ಹಾರುವುದು ಮತ್ತು ಅದಾಗಿ ಪರಿವರ್ತಗೊಳ್ಳುವುದು ವಿಶೇಷ. ಅಂದರೆ ಇಂದಿನ ಕಾಲದಲ್ಲಿ ರಾಜಕೀಯ, ಸೈದ್ಧಾಂತಿಕತೆ ಎನ್ನುವುದು ಕೂಡ ಉದ್ಯಮಕ್ಕೆ ಬೇಕಾಗುವ ರೀತಿಯಲ್ಲಿ ಪುನರ್ ರೂಪಿಸಿಕೊಳ್ಳಬಹುದಾದ ಒಂದು ಅರ್ಹ ಸಲಕರಣೆ ಅಂಶ ಎನ್ನಬಹುದೇ?

ಬಿಜೆಪಿ ಸಿದ್ಧಪಡಿಸಿದ ಪಟ್ಟಿ ಮತ್ತು ಘಟಾನುಘಟಿ ನಾಯಕರಗಳನ್ನು ಹೊರ ದಬ್ಬಲು ಹೊರಟ ರೀತಿ ಇವೆಲ್ಲವುಗಳನ್ನು ಒಟ್ಟಿಗೆ ವಿಶ್ಲೇಷಿಸಿದರೆ ಕರ್ನಾಟಕ ರಾಜ್ಯದಲ್ಲಿ ಮುಂದಿನ ಚುನಾವಣೆ ಬಳಿಕ ರಚನೆಯಾಗುವ ಸರ್ಕಾರವನ್ನು ಕೇಶವ ಕೃಪ ಮತ್ತು ನಾಗಪುರಗಳು ನೇರವಾಗಿ ತಮ್ಮ ಸುಪರ್ದಿನಲ್ಲಿ ತೆಗೆದುಕೊಳ್ಳಲು ಮುಂದಾಗಿವೆ ಎನ್ನುವುದರ ಬಗ್ಗೆ ಅನುಮಾನವಿಲ್ಲ. ಲಿಂಗಾಯತರ ನಡುವಿನಲ್ಲಿ ಪ್ರಬಲರಾಗಿರುವವರನ್ನು ದುರ್ಬಲಗೊಳಿಸುತ್ತಾ ನಿಧಾನಕ್ಕೆ ಬ್ರಾಹ್ಮಣ್ಯದ ತೆಕ್ಕೆಗೆ ತೆಗೆದುಕೊಳ್ಳುವ ತಂತ್ರಗಳು ಇವೆ ಎನ್ನಲಾಗುತ್ತಿದೆ. ಅದಕ್ಕೆ ಅತಿ ಸಣ್ಣ ಸಮುದಾಯವಾಗಿರುವ ಬ್ರಾಹ್ಮಣ ಜಾತಿಯಲ್ಲಿ 12 ಜನರಿಗೆ ಅವಕಾಶ ಕಲ್ಪಿಸಿರುವುದು ಮತ್ತು ಬೇರೆಯವರಿಗೆ ಅನ್ವಯವಾದ ಅನರ್ಹತೆಯ ಮಾನದಂಡಗಳು ಅಲ್ಲಿರುವವರಿಗೆ ಅನ್ವಯಿಸದೇ ಇರುವುದು ಅದನ್ನು ಸೂಚಿಸುತ್ತಿವೆ ಎನ್ನಲಾಗುತ್ತಿದೆ. ಉಗ್ರ ಹಿಂದುತ್ವದ ಅಜೆಂಡಾದ ಜಾರಿ ಮತ್ತು 2025ರಲ್ಲಿ ಅದು ಅಂದುಕೊಂಡಂತೆ ಭಾರತವನ್ನು ಫ್ಯಾಶಿಸ್ಟ್ ಸ್ವರೂಪದ 'ಹಿಂದೂ ರಾಷ್ಟ್ರ'ವನ್ನಾಗಿಸುವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತದೆ ಎಂದು ಭಾವಿಸುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಈ ಅಪಾಯವನ್ನು ಎಲ್ಲರೂ ಅತಿ ಗಂಭೀರವಾಗಿ ಪರಿಗಣಿಸಬೇಕು ಮತ್ತು ಎದುರಿಸಬೇಕು.

ಇಂತಹ ಒಳ ಬಂಡಾಯಗಳಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ಗಳು ಹೊರತಾಗಿಲ್ಲ. ಅಂತವರಿಗೆ ಒಂದು ಅಭಯದ ವಾತಾವರಣವಲ್ಲಂತೂ ಈ ರಾಜಕೀಯ ಪಕ್ಷಗಳು ಸೃಷ್ಟಿಸಿವೆ. ಅತಿ ಹೆಚ್ಚು ಬೇಡಿಕೆ ಇರುವ ಪಕ್ಷದಲ್ಲಿ ಸೀಟು ಸಿಗದೇ ಇದ್ದರೆ ತಕ್ಕಮಟ್ಟಿಗೆ ಇರುವ ಜೆಡಿಎಸ್ ಪಕ್ಷದತ್ತ ವಲಸೆ ಕಡಿಮೆ ಏನಿಲ್ಲ.

ಒಟ್ಟಾರೆ, ಬಹುತೇಕ ಬಲಪಂಥೀಯ ರಾಜಕೀಯ ಪಕ್ಷಗಳು ತಮ್ಮದೇ ಆದಂತಹ ಸಿದ್ಧಾಂತ ಕಾರ್ಯಕ್ರಮ ಮತ್ತು ಜನತೆಗೆ ಬದ್ಧವಾದ ದೃಷ್ಟಿಕೋನಗಳನ್ನು ಪ್ರತಿನಿಧಿಸುವುದಾಗಲಿ, ಪ್ರತಿಪಾದಿಸುವುದಾಗಲಿ ಅಷ್ಟಾಗಿ ಇಲ್ಲ. ಹೀಗಾಗಿ ಈ ಪಕ್ಷಗಳಲ್ಲಿಯೂ ಮುಕ್ತ ಮಾರುಕಟ್ಟೆ ವ್ಯವಸ್ಥೆ ಜಾರಿಯಲ್ಲಿದೆ. ಇವುಗಳ ನಡುವೆಯೇ ಕನಿಷ್ಠ ಕೋಮು ದ್ವೇಷ ಮುಕ್ತ ಸೌಹಾರ್ದ ಕರ್ನಾಟಕವನ್ನ ಉಳಿಸಿಕೊಳ್ಳುವುದು ಬಹುದೊಡ್ಡ ಸವಾಲು.

ಕೊನೆಯ ಮಾತು:

ಹೀಗೆ ಬಂಡಾಯ ನಡೆಸಿ ಪಕ್ಷ ಸೇರಿದ ನಾಯಕರು ಚುನಾವಣಾ ಫಲಿತಾಂಶದ ನಂತರ ಮಾತ್ರ ಪಕ್ಷಕ್ಕೆ ಮತ್ತೆ ಸುಲಲಿತವಾಗಿ ಮರಳದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ. ಒಂದು ವೇಳೆ ಬಹುಮತ ತಮಗೆ ಸಿಗದೇ ಹೋದರೆ ಕಾಂಗ್ರೆಸ್ ಪಕ್ಷದ ಬಹುದೊಡ್ಡ ಸಂಖ್ಯೆಯಲ್ಲಿ ಶಾಸಕರನ್ನ ಸೆಳೆಯುವ ಮೋ–ಶಾ 'ಸಿ' ಯೋಜನೆ ಗುಜರಾತ್ ಚುನಾವಣೆ ವೇಳೆ ಸಿದ್ದಗೊಂಡಿತ್ತು ಎನ್ನುವುದು ಮರೆಯದ ಮಾತು.

–ಎಸ್.ವೈ.ಜಿ.

ಕರ್ನಾಟಕದ ಆರ್ಥಿಕತೆ: ಜನಗಳ ಹಕ್ಕೊತ್ತಾಯಗಳೇನು, ಆಶಯಗಳೇನು?




ಪ್ರೊ. ಟಿ.ಆರ್. ಚಂದ್ರಶೇಖರ್

ಆರ್ಥಿಕರಂಗದಲ್ಲಿ ಯಾವುದು ಆದ್ಯತೆ, ಯಾವುದು ಸರ್ಕಾರದ ಕೆಲಸ–ಯಾವುದಲ್ಲ ಎಂಬುದರ ಪರಿಜ್ಞಾನವೇ ಸರ್ಕಾರಕ್ಕೆ ಇದಂತೆ ಕಾಣುವುದಿಲ್ಲ! ಈ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆ ಸಂದರ್ಭದಲ್ಲಿ ಕರ್ನಾಟಕ ಆರ್ಥಿಕತೆ ಕುರಿತಂತೆ ಜನಗಳ ಹಕ್ಕೊತ್ತಾಯಗಳೇನು, ಆಶಯಗಳು ಏನಾಗಿರಬೇಕು ಎಂಬುದನ್ನು ಯೋಚಿಸುವುದು ಅಗತ್ಯ ಎಂದಿರುವ ಅರ್ಥಶಾಸ್ತ್ರಜ್ಞ ಪ್ರೊ. ಟಿ.ಆರ್. ಚಂದ್ರಶೇಖರ್ ಇಲ್ಲಿ ಅಂತಹ ಒಂದು ಆರ್ಥಿಕತೆ ಕುರಿತಾದ ಪ್ರಣಾಳಿಕೆಯನ್ನು ರೂಪಿಸುವ ಪ್ರಯತ್ನ ಮಾಡಿದ್ದಾರೆ:

ಕರ್ನಾಟಕ ಆರ್ಥಿಕತೆಯ ಆರೋಗ್ಯ ಹದಗೆಟ್ಟಿದೆ. ಬಡತನ, ನಿರುದ್ಯೋಗ, ಹಸಿವು, ದುಸ್ಥಿತಿ, ಅಸಮಾನತೆ, ಶೋಷಣೆ ಸಮಾಜವನ್ನು ಕಾಡುತ್ತಿವೆ. ಈಗಿರುವ ಡಬಲ್ ಎಂಜಿನ್ ಸರ್ಕಾರ ರೆಟರಿಕ್‌ನಲ್ಲಿಯೇ ಬದುಕು ದೂಡುತ್ತಿದೆ. ರಾಜ್ಯದ ಆರ್ಥಿಕತೆಯನ್ನು ಕಾಡುತ್ತಿರುವ ಸಮಸ್ಯೆಗಳನ್ನು ಇದು ಮರೆಮಾಚುತ್ತಿದೆ. ಉದಾ: ಕರ್ನಾಟಕ ಸರ್ಕಾರವು ಪ್ರಕಟಿಸುವ ಮಾನವಅಭಿವೃದ್ಧಿ ವರದಿಗಳಲ್ಲಿ ದಲಿತರ ಹಾಗೂ ಆದಿವಾಸಿಗಳ ಸ್ಥಿತಿಗತಿಗಳ ಬಗ್ಗೆ ಹಾಗೂ ಪ್ರಾದೇಶಿಕ ಅಸಮಾನತೆಯ ಬಗ್ಗೆ ಪ್ರತ್ಯೇಕ ಅಧ್ಯಾಯಗಳಿರುತ್ತಿದ್ದವು. ಈಗ ಪ್ರಕಟವಾಗಿರುವ 'ಕರ್ನಾಟಕ ಮಾನವ ಅಭಿವೃದ್ಧಿ ವರದಿ 2022'ರಲ್ಲಿ ಇವು ಮಾಯವಾಗಿವೆ. ಸಾಂದರ್ಭಿಕವಾಗಿ ಅವುಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಇದೇ ರೀತಿಯಲ್ಲಿ ಕರ್ನಾಟಕ ಆರ್ಥಿಕ ಸಮೀಕ್ಷೆಯಲ್ಲಿಯೂ ಪ್ರಾದೇಶಿಕ ಅಸಮಾನತೆ ಅಧ್ಯಾಯ ಮಾಯವಾಗಿದೆ ಮತ್ತು ದಲಿತರ ಮತ್ತು ಆದಿವಾಸಿಗಳ ಬಗೆಗಿನ ಚರ್ಚೆಯನ್ನು ಕೆಲವು ಪುಟಗಳಿಗೆ ಮಿತಿಗೊಳಿಸಲಾಗಿದೆ. ಹಾಗಾದರೆ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆಯಾಗಿದೆಯೇ? ದಲಿತರ ಮತ್ತು ಆದಿವಾಸಿಗಳ ಬದುಕು ಸಾಮಾನ್ಯ ಜನವರ್ಗದ ಮಟ್ಟಕ್ಕೆ ಉತ್ತಮಗೊಂಡಿದೆಯೇ?

ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣದಲ್ಲಿ ಸರ್ಕಾರ ಬ್ಯುಸಿಯಾಗಿದೆ. ಇದು ಅಭಿವೃದ್ಧಿ ಆದ್ಯತೆಯೇ? ಆರು ಪಥಗಳ ಎಕ್ಸಪ್ರೆಸ್ ಹೈವೇಗಳು ನಮಗೆ ಆದ್ಯತೆಯೇ? ಒಕ್ಕೂಟ ಸರ್ಕಾರ ಪ್ರಕಟಿಸಿರುವ ಮಲ್ಟಿ ಡೈಮೆಂಷನಲ್ ಪಾವರ್ಟಿ ಇಂಡೆಕ್ಸ್ ಪ್ರಕಾರ ಯಾದಗಿರಿ ಜಿಲ್ಲೆಯಲ್ಲಿನ ಬಹುಮುಖಿ ಬಡವರ ಪ್ರಮಾಣ ಶೇ. 42, ರಾಯಚೂರಿನಲ್ಲಿ ಇದು ಶೇ. 32. ಅಪೌಷ್ಟಿಕತೆಯ ಪ್ರಮಾಣ ರಾಜ್ಯದಲ್ಲಿ ಏರಿಕೆಯಾಗುತ್ತಿದೆ. ನಿರುದ್ಯೋಗ ಪ್ರಮಾಣ ರಾಜ್ಯದಲ್ಲಿ ಕಡಿಮೆಯಿದೆ ಎಂದು ಸರ್ಕಾರ ಬೀಗುತ್ತಿದೆ. ನಿಜ, ಒಟ್ಟು ನಿರುದ್ಯೋಗ ಕೆಳಮಟ್ಟದಲ್ಲಿದೆ (ಶೇ.4.4). ಆದರೆ, 15 ರಿಂದ 29 ವರ್ಷಗಳ ವಯೋಮಾನದ ಯುವಕರು–ಯುವತಿಯರಲ್ಲಿ ಇದು ಅನುಕ್ರಮವಾಗಿ ಶೇ. 14.3 ಮತ್ತು ಶೇ. 22.1 ರಷ್ಟಿದೆ. ಇದಾವುದರ ಬಗ್ಗೆಯೂ ಯೋಚಿಸದೆ ರಾಮದೇವರಗುಡಿ ಬಗ್ಗೆ, ಅಂಜನಾದ್ರಿ ಬೆಟ್ಟದ ಬಗ್ಗೆ, ಕಾಶಿ ಯಾತ್ರೆಯ ಬಗ್ಗೆ ಸರ್ಕಾರ ಮಾತನಾಡುತ್ತಿದೆ. ಯಾವುದು ಆದ್ಯತೆ, ಯಾವುದು ಸರ್ಕಾರದ ಕೆಲಸ–ಯಾವುದಲ್ಲ ಎಂಬುದರ ಪರಿಜ್ಞಾನವೇ ಸರ್ಕಾರಕ್ಕೆ ಇದಂತೆ ಕಾಣುವುದಿಲ್ಲ!. ಈ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆ ಸಂದರ್ಭದಲ್ಲಿ ಕರ್ನಾಟಕ ಆರ್ಥಿಕತೆ ಕುರಿತಂತೆ ನಮ್ಮ ಪ್ರಣಾಳಿಕೆ, ನಮ್ಮ ಹಕ್ಕೊತ್ತಾಯಗಳು, ನಮ್ಮ ಆಶಯಗಳು ಏನಾಗಿರಬೇಕು ಎಂಬುದನ್ನು ಯೋಚಿಸುವುದು ಅಗತ್ಯ. ಇಲ್ಲಿ ಅಂತಹ ಒಂದು ಪ್ರಣಾಳಿಕೆಯನ್ನು ರೂಪಿಸುವ ಪ್ರಯತ್ನ ಮಾಡಲಾಗಿದೆ.

(1). ಮಹಿಳೆಯರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕ ವರ್ಗ, ಕೂಲಿಕಾರರು ಸೇರಿದಂತೆ 'ಜನರು' ಅಭಿವೃದ್ಧಿ ಅಭಿಯಾನದ ಕೇಂದ್ರದಲ್ಲಿರಬೇಕು. ನಮ್ಮ ರಾಜ್ಯದಲ್ಲಿ 15ರಿಂದ 49 ವರ್ಷ ವಯೋಮಾನದ ಒಟ್ಟು ಮಹಿಳೆಯರಲ್ಲಿ ಅನಿಮಿಯ(ರಕ್ತಹೀನತೆ) 2015–16ರಲ್ಲಿ ಶೇ. 44.8ರಷ್ಟಿದ್ದುದು 2019–20ರಲ್ಲಿ ಶೇ. 47.8ಕ್ಕೇರಿದೆ(ಮೂಲ: ಎನ್‌ಎಫ್‌ಎಚ್‌ಎಸ್ 5).



ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 14ರಷ್ಟಿರುವ ಅಲ್ಪಸಂಖ್ಯಾತರು ಜನಾಂಗೀಯ ದ್ವೇಷಕ್ಕೆ, ತಾರತಮ್ಯಕ್ಕೆ, ದೈಹಿಕ ಆಕ್ರಮಣಕ್ಕೆ ಒಳಗಾಗುತ್ತಿದ್ದಾರೆ. ಅಭದ್ರತೆಯು ಅವರನ್ನು ಕಾಡುತ್ತಿದೆ. ರೈತರು ತಮ್ಮ ಉಳುವಿಗಾಗಿ ಹೋರಾಟ ನಡೆಸುತ್ತಿದ್ದರೆ, ಸರ್ಕಾರವು ಕೃಷಿಯೇತರರು ಅಲ್ಲಿ ಬಂಡವಾಳ ಹೂಡುವುದಕ್ಕೆ ಅವಕಾಶ ನೀಡುವ ಭೂಸುಧಾರಣೆ ಕಾಯಿದೆ 2020 ಜಾರಿಗೊಳಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಮನರೇಗಾ ಒಂದು ರೀತಿಯಲ್ಲಿ ಭೂರಹಿತ ಕೃಷಿ ಕೂಲಿಕಾರರಿಗೆ ಅಮೃತಪಾನವಾಗಿದೆ. ವಲಸೆಯ ಹಿನ್ನೆಲೆಯಲ್ಲಿ ಇದೇ ರೀತಿಯ ಕಾರ್ಯಕ್ರಮವನ್ನು ನಗರ ಪ್ರದೇಶದಲ್ಲಿಯೂ ಹಮ್ಮಿಕೊಳ್ಳುವುದು ತೀರಾ ಅಗತ್ಯವಾಗಿದೆ. ಕರ್ನಾಟಕದ ಆರ್ಥಿಕತೆಯು ಎನ್‌ಆರ್. ನಾರಾಯಣಮೂರ್ತಿ ಅಥವಾ ಕಿರಣ್ ಮಜುಂದಾರ್ ಶಾ ಅಥವಾ ಅಂಬಾನಿ, ಆದಾನಿ ಮುಂತಾದವರ ಶ್ರಮದ ಮೇಲೆ ನಿಂತಿಲ್ಲ. ಸರಿಸುಮಾರು 70 ಲಕ್ಷದಷ್ಟಿರುವ ಭೂರಹಿತ ಕೃಷಿ ಕೂಲಿಕಾರ್ಮಿಕರು ಬೆವರು, ಕಣ್ಣೀರು, ರಕ್ತ ಹರಿಸಿ ನಡೆಸಿರುವ ದುಡಿಮೆಯ ಮೇಲೆ ನಿಂತಿದೆ. ಇವರು ನಿಜವಾಗಿ ಆರ್ಥಿಕತೆಯಲ್ಲಿ 'ವೆಲ್ತ್‌ಕ್ರಿಯೇಟರ್ಸ್'. ಆದರೆ ನಮ್ಮ ಪ್ರಧಾನಮಂತ್ರಿ ಬಂಡವಳಿಗರು ವೆಲ್ತ್‌ಕ್ರಿಯೇಟರ್ಸ್ ಎಂದು ಹೇಳುತ್ತಿದ್ದಾರೆ. ಈ ಧೋರಣೆ ಕರ್ನಾಟಕಕ್ಕೆ ಬೇಡ.

ನಮ್ಮ ಒತ್ತಾಯ: ಕಾರ್ಮಿಕರು, ರೈತರು, ಮಹಿಳೆಯರು, ಅಲ್ಪಸಂಖ್ಯಾತರು ಅಭಿವೃದ್ಧಿಯ ಕೇಂದ್ರದಲ್ಲಿರಬೇಕು.

(2). ಶಿಕ್ಷಣ ಕ್ಷೇತ್ರವನ್ನು, ಮುಖ್ಯವಾಗಿ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರ ಹಾಳು ಮಾಡುತ್ತಿದೆ. ಅನವಶ್ಯಕವಾಗಿ ಇಲ್ಲದ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ. ಪಠ್ಯ ಪುಸ್ತಕಗಳ ಮರುಪರಿಷ್ಕರಣೆ ಕೊವಿಡ್ ಪೆಂಡಮಿಕ್ ನಂತರದ ವರ್ಷದ ಮಧ್ಯದಲ್ಲಿ ಬೇಕಾಗಿತ್ತಾ? ದಲಿತರ ಬರಹಗಳನ್ನು ಕಿತ್ತುಹಾಕುವುದರ ಮೂಲಕ, ಬಸವಣ್ಣನ ಜೀವನ ಚಿತ್ರವನ್ನು ವಿಕೃತಗೊಳಿಸುವುದರ ಮೂಲಕ, ಯಜ್ಞ–ಯಾಗಗಳ ಅರ್ಥಹೀನತೆಯ ಬಗ್ಗೆ ಬರಹಗಳನ್ನು ಬದಲಾಯಿಸಿ ರಾಜ್ಯದ 105 ಲಕ್ಷ ಮಕ್ಕಳಿಗೆ ಏನು ಸಂದೇಶ ನೀವು ಕೊಡುತ್ತಿದ್ದೀರಿ? ಹಿಜಾಬ್ ಗೊಂದಲ ಸೃಷ್ಟಿಸಿ ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಎಳ್ಳುನೀರು ಬಿಟ್ಟಿರಿ!. ಇದೆಲ್ಲ ಬೇಕಿತ್ತಾ? ಪ್ರಾಥಮಿಕ ಶಿಕ್ಷಣ ಕ್ಷೇತ್ರವು ಹಳ್ಳಹಿಡಿದಿದೆ. ಸರ್ಕಾರ ಉನ್ನತ ಶಿಕ್ಷಣದಲ್ಲಿ ಖಾಸಗಿ ವಿವಿಗಳಿಗೆ ಅವಕಾಶ ನೀಡಿ, ಅದು ನಾಡಿನ ದಲಿತರಿಗೆ, ಆದಿವಾಸಿಗಳಿಗೆ, ಅಲ್ಪಸಂಖ್ಯಾತರಿಗೆ, ಒಬಿಸಿಗಳಿಗೆ ದೊರೆಯದಂತೆ ಮಾಡುತ್ತಿದ್ದೀರಿ.

ನಮ್ಮ ಒತ್ತಾಯ: ಶಿಕ್ಷಣವು ಒಂದು ಅಗತ್ಯ ಸೇವೆ. ಆದ್ದರಿಂದ ಇದು, ಕನಿಷ್ಟ ಪ್ರಾಥಮಿಕ ಶಿಕ್ಷಣವು ಸಾರ್ವಜನಿಕ ವಲಯದಲ್ಲಿರಬೇಕು. ರಾಜ್ಯದಲ್ಲಿ 2023–24ರಲ್ಲಿ ಜಿಎಸ್‌ಡಿಪಿಯ(ರೂ. 23.34 ಲಕ್ಷಕೋಟಿ) ಶೇ. 1.43ರಷ್ಟನ್ನು (ರೂ. 0.34 ಲಕ್ಷಕೋಟಿ) ಶಿಕ್ಷಣಕ್ಕೆ ನೀಡಲಾಗುತ್ತಿದೆ. ಇದನ್ನು ಶೇ. 5ಕ್ಕೇರಿಸಬೇಕು. ಶಿಕ್ಷಣದ ಬಗ್ಗೆ ಆಳವಾದ ಚಿಂತನೆ–ಅಧ್ಯಯನವಿಲ್ಲದ ಕೋಮುವಾದಿಯೊಬ್ಬನನ್ನು ಐಐಟಿ ಪ್ರಾಧ್ಯಾಪಕ ಎಂದು ಸುಳ್ಳು ಹೇಳಿ ಪಠ್ಯಕ್ರಮಗಳನ್ನು ಬದಲಾಯಿಸುವ ಕ್ರಮಗಳನ್ನು ಸರ್ಕಾರ ಕೈಬಿಡಬೇಕು.

(3). ನಮ್ಮ ರಾಜ್ಯದಲ್ಲಿ ಆರೋಗ್ಯ ಸೇವೆಯು ಅತ್ಯಂತ ಕೆಳಮಟ್ಟದಲ್ಲಿದೆ. ಸರ್ಕಾರವು ಬೆಂಗಳೂರೇ ಕರ್ನಾಟಕವೆಂದು ಭಾವಿಸಿ, ಅಲ್ಲಿಯೇ ಎಲ್ಲ ಆರೋಗ್ಯ ಸೇವೆಯ ಸೌಲಭ್ಯಗಳನ್ನು ಕೇಂದ್ರೀಕರಿಸುತ್ತಿದೆ. ಇದನ್ನು ಬದಲಾಯಿಸಬೇಕು. ಯಾದಗಿರಿ, ರಾಯಚೂರು, ಚಾಮರಾಜನಗರ, ಚಿತ್ರದುರ್ಗ ಮುಂತಾದ ಹಿಂದುಳಿದ ಜಿಲ್ಲೆಗಳಲ್ಲಿ ಆರೋಗ್ಯ ಸೇವೆಯ ಸ್ಥಿತಿ ಚಿಂತಾಜನಕವಾಗಿದೆ. ಅಲ್ಲಿ ಹಸಿವಿನ ಸಮಸ್ಯೆಯಿದೆ. ಉದಾ: ಎನ್‌ಎಫ್‌ಎಚ್‌ಎಸ್ 5(2019–20)ದ ಪ್ರಕಾರ ಯಾದಗಿರಿ ಜಿಲ್ಲೆಯಲ್ಲಿನ 6ರಿಂದ 59 ತಿಂಗಳು ವಯೋಮಾನದ ಒಟ್ಟು ಮಕ್ಕಳಲ್ಲಿ ಶೇ. 76ರಷ್ಟು ಮಕ್ಕಳು ಅನೀಮಿಯ ಎದುರಿಸುತ್ತಿದ್ದಾರೆ. ರಾಜ್ಯಮಟ್ಟದಲ್ಲಿ ಇದರ ಪ್ರಮಾಣ 2015–16ರಲ್ಲಿ ಶೇ. 60.9 ರಷ್ಟಿದ್ದುದು, 2019–20ರಲ್ಲಿ ಇದು ಶೇ. 65.5ಕ್ಕೇರಿದೆ. ಸರ್ಕಾರಕ್ಕೆ ನಾಚಿಕೆಯಾಗಬೇಕು. ಈ ಕುಸಿತವು ಮೋದಿ ಪರ್ವದಲ್ಲಿ ಉಂಟಾಗಿದೆ. ರಾಜ್ಯದ 2023–24ರ ಬಜೆಟ್ಟಿನಲ್ಲಿ ಆರೋಗ್ಯಕ್ಕೆ ನೀಡಿರುವ ಅನುದಾನ ರೂ. 14,552.22 ಕೋಟಿ. ಇದು ರಾಜ್ಯದ 2023–24ರ ಜಿಎಸ್‌ಡಿಪಿಯ ಶೇ. 0.6 ರಷ್ಟಾಗುತ್ತದೆ.

ನಮ್ಮ ಒತ್ತಾಯ: ಕನಿಷ್ಟ ಜಿಎಸ್‌ಡಿಪಿಯ ಶೇ. 3ರಷ್ಟನ್ನು ಆರೋಗ್ಯ ಸೇವೆಗೆ ನೀಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪಕೇಂದ್ರಗಳನ್ನು ಬಲಪಡಿಸಬೇಕು.



(4). ಕೃಷಿ ಎಂದರೆ ನೀರಾವರಿ ಮಾತ್ರವಲ್ಲ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಒಟ್ಟು ಸಾಗುವಳಿ ಪ್ರದೇಶದಲ್ಲಿ ಶೇ. 60ರಷ್ಟು ಒಣ ಭೂಮಿ ಬೇಸಾಯವಾಗಿದೆ. ಆದರೆ ಸರ್ಕಾರವು 2023–24ರಲ್ಲಿ ಒಟ್ಟು ಬಜೆಟ್ ವೆಚ್ಚದಲ್ಲಿ ಶೇ. 7.39ರಷ್ಟನ್ನು ನೀರಾವರಿಗೆ ನೀಡಲಾಗಿದೆ. ನೀರಾವರಿಯು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ.

ಆದ್ದರಿಂದ ಸರ್ಕಾರವು ಅತಿಸಣ್ಣ ಮತ್ತು ಸಣ್ಣರೈತರು ಅಧಿಕವಾಗಿ ಅವಲಂಬಿಸಿರುವ ಒಣ ಬೇಸಾಯಕ್ಕೆ ಹೆಚ್ಚು ಅನುದಾನ ನೀಡಬೇಕು.

ರಾಜ್ಯದ ಒಟ್ಟು ಭೂಹಿಡುವಳಿಗಳಲ್ಲಿ ಶೇ. 85ರಷ್ಟು ಅತಿಸಣ್ಣ ಮತ್ತು ಸಣ್ಣ ಭೂಹಿಡುವಳಿಗಳಿವೆ. ನಾಡಿನ ರೈತರು ತಾವು ಬೆಳೆದ ಬೆಳೆಗೆ ಕನಿಷ್ಟ ಬೆಂಬಲ ಬೆಲೆಯ ವ್ಯವಸ್ಥೆಯನ್ನು ಕಾನೂನುಬದ್ಧಗೊಳಿಸಬೇಕೆಂದು ಚಳುವಳಿ ಮಾಡುತ್ತಿದ್ದಾರೆ. ಕಾರ್ಖಾನೆಗಳಲ್ಲಿ ತಯಾರಾಗುವ ಬ್ರಶ್, ಟೂತ್ ಪೇಸ್ಟಿಗೆ ಎಂಆರ್‌ಪಿ ಇರುತ್ತದೆ. ನಾಡಿನ 140 ಕೋಟಿ ಜನಸಂಖ್ಯೆಗೆ ಕೂಳು ನೀಡುವ ರೈತರ ಉತ್ಪನ್ನಗಳಿಗೆ ಎಂಆರ್‌ಪಿ ಏಕಿಲ್ಲ? **ಸರ್ಕಾರವು ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆಯನ್ನು ಕಾಯಿದೆಯ ಮೂಲಕ ಬಲಪಡಿಸಬೇಕು.**

(5). ಈಗಾಗಲೆ ಹೇಳಿರುವಂತೆ ರಾಜ್ಯದಲ್ಲಿ ಯುವಕರು–ಯುವತಿಯರಲ್ಲಿ ನಿರುದ್ಯೋಗವು ಅತ್ಯಧಿಕ ಮಟ್ಟದಲ್ಲಿದೆ. ಕರ್ನಾಟಕವು ಅತ್ಯಧಿಕ ಪ್ರಮಾಣದಲ್ಲಿ ಯುವ ಶಕ್ತಿಯನ್ನು ಪಡೆದಿದೆ. ಇದನ್ನು ತಜ್ಞರು 'ಜನಸಂಖ್ಯಾ ಲಾಭಾಂಶ'(ಡಿವಿಡೆಂಡ್) ಎನ್ನುತ್ತಾರೆ. ಈ ಲಾಭಾಂಶದ ಅನುಕೂಲವನ್ನು ಗರಿಷ್ಟ ಪ್ರಮಾಣದಲ್ಲಿ ಪಡೆಯಬೇಕೆಂದರೆ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಬೇಕು. ಇಲ್ಲದಿದ್ದರೆ ಜನಸಂಖ್ಯಾ ಲಾಭಾಂಶ ಎನ್ನುವುದು ಜನಸಂಖ್ಯಾ ವಿಪತ್ತಾಗುವ ಸಾಧ್ಯತೆಯಿದೆ. ನಮ್ಮ ಸರ್ಕಾರಗಳು ಉದ್ಯೋಗ ಕಾರ್ಯಕ್ರಮಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದಿವೆ.

ನಮ್ಮ ಒತ್ತಾಯ: ಸರ್ಕಾರವು ಉದ್ಯೋಗ ಕಾರ್ಯಕ್ರಮಗಳಿಗೆ ಪ್ರಥಮ ಆದ್ಯತೆ ನೀಡಬೇಕು. ಖಾಸಗಿ ವಲಯದಿಂದ ಉದ್ಯೋಗಗಳ ಸೃಷ್ಟಿಯಾಗುತ್ತಿಲ್ಲ. ಇಲ್ಲಿ ಉದ್ಯೋಗ ಬೆಳವಣಿಗೆಯ ಸ್ಥಿತಿಸ್ಥಾಪಕತ್ವವು ಅತ್ಯಂತ ಕೆಳಮಟ್ಟದಲ್ಲಿದೆ(0.22). ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವುದನ್ನು–ಮಾರಾಟ ಮಾಡುವುದನ್ನು ಬಿಟ್ಟು ಅವುಗಳನ್ನು ಬಲಪಡಿಸಬೇಕು.

(6). ಅಭಿವೃದ್ಧಿಗೆ ಮಹಿಳಾ ರೂಪವನ್ನು ಮತ್ತು ದಲಿತ–ಆದಿವಾಸಿ ಮುಖವನ್ನು ನೀಡಬೇಕು. ಅಭಿವೃದ್ಧಿಯು ಲಾಗಾಯ್ತಿನಿಂದ ಪುರುಷ

ಪುಟ 11 ಕ್ಕೆ

ಕೇರಳದಲ್ಲಿ ಕ್ರೈಸ್ತರ ಕುರಿತು ಸಿನಿಕತನದ ಧೋರಣೆ

ಪ್ರಕಾಶ್ ಕಾರತ್

ಏಪ್ರಿಲ್ 9ರಂದು ಈಸ್ಟರ್ ದಿನ ಪ್ರಧಾನಿ ನರೇಂದ್ರ ಮೋದಿ ನವ ದೆಹಲಿಯ ಸೇಕ್ರೆಡ್ ಹಾರ್ಟ್ ಕೆಥಡ್ರಲ್ ಚರ್ಚ್‌ಗೆ ಭೇಟಿ ನೀಡಿದ್ದು ಗಮನಾರ್ಹವಾಗಿದೆ. ಯಾಕೆಂದರೆ, ಒಂಬತ್ತು ವರ್ಷಗಳ ಹಿಂದೆ ಪ್ರಧಾನಿಯಾದ ನಂತರ ಅವರು ಯಾವುದೇ ಒಂದು ಚರ್ಚ್‌ಗೆ ಭೇಟಿ ನೀಡಿದ್ದು ಇದೇ ಮೊದಲ ಸಲವಾಗಿದೆ. ಅದೇ ದಿನ, ಅಂದರೆ ಈಸ್ಟರ್ ಭಾನುವಾರ, ನಾನಾ ಕಡೆಗಳಲ್ಲಿ ಬಿಜೆಪಿ ನಾಯಕರು ಚರ್ಚ್ ಮುಖಂಡರು ಮತ್ತು ಕ್ರೈಸ್ತರ ಮನೆಗಳಿಗೆ ಭೇಟಿ ನೀಡಿ ಈಸ್ಟರ್ ಶುಭಾಶಯ ಕೋರಿದರು.

ಕ್ರೈಸ್ತರ ಕುರಿತ ಈ ಹಠಾತ್ ಪ್ರೀತಿ ಹಲವರನ್ನು ಅಚ್ಚರಿಗೊಳಿಸಿದೆ. ಆದರೆ, ಇದರ ಉದ್ದೇಶ ಏನೆಂಬುದನ್ನು ಸ್ವತಃ ಮೋದಿಯೇ ಸೂಚ್ಯವಾಗಿ ಹೇಳಿದ್ದಾರೆ. ತಿಂಗಳ ಹಿಂದೆ ನಡೆದ ಮೂರು ಈಶಾನ್ಯ ರಾಜ್ಯಗಳ ಚುನಾವಣಾ ಫಲಿತಾಂಶಗಳನ್ನು ಸಂಭ್ರಮಿಸಲು ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಮೋದಿ, ಕ್ರೈಸ್ತರೇ ಹೆಚ್ಚಿರುವ ಮೇಘಾಲಯ ಮತ್ತು ನಾಗಾಲ್ಯಾಂಡ್‌ನಲ್ಲಿ ಬಿಜೆಪಿ ಯಶಸ್ಸು ಪಡೆದಿದೆ ಎಂದು ಎತ್ತಿ ಹೇಳಿದ್ದರು. ಕ್ರೈಸ್ತ ಸಮುದಾಯಕ್ಕೂ ಬಿಜೆಪಿ ಅಂಗೀಕಾರಾರ್ಹವಾಗಿದೆ ಎನ್ನುವುದರ ಸೂಚನೆ ಇದಾಗಿದೆ ಎಂದ ಮೋದಿ, ಕೇರಳವೇ ಬಿಜೆಪಿಯ ಮುಂದಿನ ಗುರಿ (ಟಾರ್ಗೆಟ್) ಎಂದಿದ್ದರು. ಮೇಘಾಲಯ ಮತ್ತು ನಾಗಾಲ್ಯಾಂಡ್‌ನಲ್ಲಿ ಕ್ರೈಸ್ತರ ಬೆಂಬಲ ದೊರಕಿದೆ ಎಂದು ಹೇಳುವುದೇ ಟೊಳ್ಳು ಹೇಳಿಕೆಯಾಗಿದೆ. ಯಾಕೆಂದರೆ ಮೇಘಾಲಯದ 60 ಸ್ಥಾನಗಳಲ್ಲಿ ಬಿಜೆಪಿ ಪಡೆದಿರುವುದು ಕೇವಲ ಎರಡು ಸ್ಥಾನ. ನಾಗಾಲ್ಯಾಂಡ್‌ನಲ್ಲಿ ಅದು ಆಳುವ ಕೂಟದಲ್ಲಿ ಕಿರಿಯ ಪಾಲುದಾರ ಪಕ್ಷವಾಗಿದೆ ಅಷ್ಟೇ.

ಜನಸಂಖ್ಯೆಯಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಶೇಕಡ 45ರಷ್ಟಿರುವ ಕೇರಳದಲ್ಲಿ ತನ್ನನ್ನು ಸಂಸ್ಥಾಪಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಲೇ ಇದ್ದು ಹೆಚ್ಚಿನ ಯಶಸ್ಸು ಅದಕ್ಕೆ ಸಿಕ್ಕಿಲ್ಲ. ಮುಸ್ಲಿಂ ಸಮುದಾಯದಲ್ಲಿ ಮುನ್ನಡೆ ಸಾಧಿಸಲು ಸಾಧ್ಯವಿಲ್ಲ ಎನ್ನುವುದನ್ನು ಮನವರಿಕೆ ಮಾಡಿಕೊಂಡ ಬಿಜೆಪಿ, ಕೇರಳದ ಜನಸಂಖ್ಯೆಯ ಶೇಕಡ 18ರಷ್ಟಿರುವ ಕ್ರೈಸ್ತರ ನಡುವೆ ಪ್ರಭಾವ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಅದಕ್ಕಾಗಿ ಬಿಜೆಪಿ ಎರಡು ಬಗೆಯ ಧೋರಣೆಯನ್ನು ಅನುಸರಿಸುತ್ತಿದೆ: ಮೊದಲನೆಯದಾಗಿ, ಕ್ರೈಸ್ತ ಜನರ ನಡುವೆ ಮುಸ್ಲಿಂ–ವಿರೋಧಿ ಭಾವನೆ ಹುಟ್ಟುಹಾಕಲು ಬಿಜೆಪಿ ಯತ್ನಿಸಿದೆ. ಅದರಲ್ಲೂ ವಿಶೇಷವಾಗಿ ಕೇರಳದಲ್ಲಿ ಸಿರೊ–ಮಲಬಾರ್ ಎಂದು ಜನಜನಿತವಾದ ಕ್ಯಾಥೊಲಿಕ್ ಚರ್ಚ್ ನಡುವೆ ಈ ರೀತಿಯ ಪ್ರಯತ್ನ ನಡೆಸಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಚರ್ಚ್ ನಾಯಕರು 'ಲವ್ ಜಿಹಾದ್' ವಿರುದ್ಧ ಮಾತನಾಡಿದ್ದಾರೆ ಹಾಗೂ ಕ್ಷುಲ್ಲಕ ಕ್ರೈಸ್ತ ರಂಗವೊಂದನ್ನು ಹುಟ್ಟು ಹಾಕಲಾಗಿದ್ದು ಅದು ಮುಸ್ಲಿಂ–ವಿರೋಧಿ ಪ್ರಚಾರವನ್ನು ನಡೆಸುತ್ತಿದೆ. ಅಲ್ಲದೆ ಆರ್‌ಎಸ್‌ಎಸ್‌ನ ಕೆಲವು ಅಂಗಸಂಸ್ಥೆಗಳಿಗೆ ಅದು ಸಹಕಾರ ನೀಡುತ್ತಲೂ ಇದೆ. ಕ್ರಿಶ್ಚಿಯನ್–ಮುಸ್ಲಿಂ ವಿಭಜನೆಯಿಂದ ಲಾಭ ಪಡೆಯುವುದು ಬಿಜೆಪಿ ಹವಣಿಕೆಯಾಗಿದೆ. ಬಿಜೆಪಿ–ಆರ್‌ಎಸ್‌ಎಸ್ ರಾಜಕೀಯಕ್ಕೆ ಬಗ್ಗದವರನ್ನು ಕಿರುಕುಳ ಹಾಗೂ ಒತ್ತಡದ ಮೂಲಕ ಮಣಿಸಲು ಯತ್ನಿಸುವ ಮೋದಿ ಸರ್ಕಾರದ ಮಾಮೂಲಿ ತಂತ್ರ ಇನ್ನೊಂದು ವಿಧಾನವಾಗಿದೆ.

ಚರ್ಚ್ ಆಫ್ ಸೌತ್ ಇಂಡಿಯಾದ ಮಾಡರೇಟರ್ ಬಿಷಪ್ ಧರ್ಮ ರಾಜ್ ಮತ್ತು ಕೆ.ಪಿ. ಯೊಹಾನನ್ ಮತ್ತು ಪೌಲ್ ದಿನಕರನ್ ಮುಂತಾದ ಧಾರ್ಮಿಕ ನಾಯಕರ ವಿರುದ್ಧ ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ತನಿಖೆ ನಡೆಸಿದ್ದನ್ನು ಕೇರಳ ಕಂಡಿದೆ.

ಕ್ಯಾಥೊಲಿಕ್ ಚರ್ಚ್‌ನ ಅತ್ಯುನ್ನತ ನಾಯಕ, ಎರ್ನಾಕುಳಂ ಅಂಗಮಲಿ ಆರ್ಚ್‌ಡಯೋಸಿಸ್‌ನ ಆರ್ಚ್‌ಬಿಷಪ್ ಕಾರ್ಡಿನಲ್ ಜಾರ್ಜ್ ಅಲೆಂಚರಿಯವರನ್ನು ಅನುಷ್ಠಾನ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಆರ್ಚ್‌ಡಯೋಸಿಸ್‌ನ ಆಸ್ತಿಗಳನ್ನು ಮಾರಾಟ ಮಾಡಿದ್ದ ವ್ಯವಹಾರದಲ್ಲಿ ಹಣಕಾಸು ದುರ್ಬಳಕೆ ಪ್ರಕರಣವನ್ನು ಅವರ ವಿರುದ್ಧ ಇ.ಡಿ. ದಾಖಲಿಸಿದೆ. ಕಟ್ಟುನಿಟ್ಟಿನ ವಿದೇಶಿ ದೇಣಿಗೆ ನಿಯಂತ್ರಣ ಕಾನೂನು (ಎಫ್‌ಸಿಆರ್‌ಎ) ಮೂಲಕವೂ ಒತ್ತಡ ಹೇರಲಾಗುತ್ತಿದೆ. ದಾನಧರ್ಮ ಮತ್ತು ಶೈಕ್ಷಣಿಕ ಕಾರ್ಯಗಳಿಗೆ ಚರ್ಚ್‌ಗಳು ಪಡೆಯುವ ವಿದೇಶಿ ಹಣವನ್ನು ಕಡಿತಗೊಳಿಸಲು ಈ ಮೂಲಕ ಪ್ರಯತ್ನಿಸಲಾಗುತ್ತಿದೆ.



ಇಂಥ ವಿಧಾನಗಳ ಮೂಲಕ ಕೆಲವು ಚರ್ಚ್‌ಗಳ ನಾಯಕರನ್ನು "ಮೃದುಗೊಳಿಸಿದ" ನಂತರ ಇದೀಗ ಬೆದರಿಕೆಗಳು ಮಾತ್ರವಲ್ಲದೆ ಪುಸಲಾಯಿಸುವಿಕೆಯ ತಂತ್ರ ಅನುಸರಿಸಲಾಗುತ್ತಿದೆ.

ಚರ್ಚ್‌ಗೆ ಮೋದಿ ಭೇಟಿ ಹಾಗೂ ಕೇರಳದಲ್ಲಿ ಚರ್ಚ್ ನಾಯಕರುಗಳನ್ನು ತಲುಪಲು ಬಿಜೆಪಿ ನಾಯಕರು ನಡೆಸಿದ ಕ್ರಮವನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಮೃದು ಕೈಗವಸಿನಿಂದ ಸವರುವ ಈ ಧೋರಣೆಯಿಂದ ಕ್ರೈಸ್ತ ಸಮುದಾಯದ ನಡುವೆ ನುಸುಳಲು ತನಗೆ ಅನುಕೂಲವಾಗುತ್ತದೆ ಎಂಬುದು ಬಿಜೆಪಿ ಲೆಕ್ಕಾಚಾರವಾಗಿದೆ. ಆದರೆ ಭಾರತದ ಇತರ ಭಾಗಗಳಲ್ಲಿ ಬಿಜೆಪಿ ಆಡಳಿತದ ಅಡಿಯಲ್ಲಿ ಕ್ರೈಸ್ತರಿಗೆ ಏನಾಗುತ್ತಿದೆ ಎಂದು ನೋಡಿದಾಗ, ಕೇರಳದಲ್ಲಿನ ಈ ಕುಖ್ಯಾತ ತಂತ್ರವು ತೀರಾ ತದ್ವಿರುದ್ಧವಾಗಿ ಕಾಣಿಸುತ್ತದೆ.

2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕ್ರೈಸ್ತರ ಪ್ರಾರ್ಥನಾ ಮಂದಿರಗಳು ಮತ್ತು ಕ್ರಿಶ್ಚಿಯನ್ನರ ಮೇಲೆ ದಾಳಿಗಳು ಒಂದೇ ಸಮನೆ ಹೆಚ್ಚಿದೆ. ಮುಸ್ಲಿಮರು ಮತ್ತು ಕ್ರೈಸ್ತರಿಬ್ಬರೂ ಹಿಂದೂ ಸಮಾಜಕ್ಕೆ ಹೊರಗಿನವರು ಎಂದು ಪರಿಗಣಿಸುವ ಆರೆಸ್ಸೆಸ್ ಸಿದ್ಧಾಂತದ ಪರಿಣಾಮವಾಗಿ ಕ್ರೈಸ್ತರ ವಿರುದ್ಧ ದ್ವೇಷ ಹಾಗೂ ದಾಳಿಗಳು ನಡೆಯುತ್ತಿವೆ. ಆರೆಸ್ಸೆಸ್‌ನ ಎರಡನೇ ಸರಸಂಘಚಾಲಕ ಎಂ.ಎಸ್. ಗೋಲ್ವಾಲ್ಕರ್ ಮೂರು ಆಂತರಿಕ ಅಪಾಯಗಳ ಬಗ್ಗೆ ಮಾತನಾಡಿದ್ದಾರೆ: ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಸ್ಟರು ಆಂತರಿಕ ವೈರಿಗಳು ಎಂಬುದು ಅವರ ಅಭಿಪ್ರಾಯ.

ಭಾರತದಲ್ಲಿ ಕ್ರೈಸ್ತರು ಸಣ್ಣ ಅಲ್ಪಸಂಖ್ಯಾತ ಸುಮದಾಯವಾಗಿದ್ದು ಹಲವು ದಶಕಗಳಿಂದ ಅದು ಇಳಿಮುಖವಾಗುತ್ತಿದೆ. 1971ರಲ್ಲಿ ಶೇಕಡ 2.53 ರಷ್ಟಿದ್ದ ಕ್ರೈಸ್ತರು 1991ರಲ್ಲಿ ಶೇ. 2.43ಕ್ಕೆ ಇಳಿದಿದ್ದರು. 2001ರಲ್ಲಿ 2.34% ಆಗಿದ್ದಿದು 2011ರ ಜನಗಣತಿ ಅನ್ವಯ 2.30%ಕ್ಕೆ ಕುಸಿದಿದೆ. ಈ ಸಣ್ಣ ಸಮುದಾಯವು ಈಗ ದೇಶದ ಅನೇಕ ಭಾಗಗಳಲ್ಲಿ ದಿಗ್ಬಂಧನಕ್ಕೆ ಒಳಪಟ್ಟಿದೆ.

ಸಂಯುಕ್ತ ಕ್ರಿಶ್ಚಿಯನ್ ವೇದಿಕೆ (ಯುಸಿಎಫ್) ಪ್ರಕಾರ, 2022ರಲ್ಲಿ ಕ್ರೈಸ್ತರ ಮೇಲಿನ ದಾಳಿ ತಾರಕಕ್ಕೇರಿರುವುದು ಅದರ ಸಮೀಕ್ಷೆಯಿಂದ ತಿಳಿದು ಬಂದಿದೆ. 21 ರಾಜ್ಯಗಳಲ್ಲಿ ಕ್ರೈಸ್ತರ ಮೇಲಿನ ದಾಳಿಗಳ 598 ಪ್ರಕರಣಗಳಿವೆ. 2018ರಲ್ಲಿ ಆಕ್ರಮಣದ 292 ಪ್ರಕರಣ, 2019ರಲ್ಲಿ 328 ಪ್ರಕರಣ ಹಾಗೂ 2020ರಲ್ಲಿ ಕೋವಿಡ್ ಸಾಂಕ್ರಾಮಿಕತೆ ಹಾಗೂ ಲಾಕ್‌ಡೌನ್‌ನಿಂದಾಗಿ ದಾಳಿ ಇಳಿಕೆಯಾಗಿ 279ರಲ್ಲಿ ನಿಂತಿದ್ದು –ಇವೆಲ್ಲವೂ ದೇಶದಲ್ಲಿ ಕ್ರೈಸ್ತರ ಮೇಲೆ ನಿರಂತರವಾಗಿ ದಾಳಿಗಳು ನಡೆಯುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. 2021ರಲ್ಲಿ ಕೇಸ್‌ಗಳು ಮತ್ತೆ ಏರಿಕೆಯಾಗಿ 505 ದಾಳಿಗಳು ನಡೆದಿವೆ.

2022ರ ಕೊನೆಯ ತ್ರೈಮಾಸಿಕದಲ್ಲಿ ಛತ್ತೀಸ್‌ಗಢದಲ್ಲಿ ಕ್ರೈಸ್ತ ಆದಿವಾಸಿಗಳ ಮೇಲೆ ವ್ಯಾಪಕ ದಾಳಿಗಳು ನಡೆದಿವೆ. ಆರೆಸ್ಸೆಸ್‌ನ ಅನೇಕ ಮುಂಚೂಣಿ ಸಂಸ್ಥೆಗಳು ಸ್ಥಾಪಿಸಿದ ಜನಜಾತಿ ಸುರಕ್ಷಾ ಮಂಚ್ ಹೆಸರಿನಲ್ಲಿ ಕ್ರೈಸ್ತರ ವಿರುದ್ಧ ವಿಷಕಾರಿ ಅಪಪ್ರಚಾರ ನಡೆಸಲಾಗುತ್ತಿದ್ದು, ಅದರ ಪರಿಣಾಮವಾಗಿ ದಕ್ಷಿಣ ಛತ್ತೀಸ್‌ಗಢದ ಮೂರು ಜಿಲ್ಲೆಗಳಲ್ಲಿ ವ್ಯಾಪಕ ದಾಳಿಗಳು ನಡೆದಿವೆ. ಹಿಂಸಾಚಾರ ಮತ್ತು ವಿವಿಧ ರೀತಿಯ ಸಾಮಾಜಿಕ ಬಹಿಷ್ಕಾರದ ಕಾರಣದಿಂದಾಗಿ ಸಾವಿರಾರು ಕ್ರೈಸ್ತರು ತಮ್ಮ ಗ್ರಾಮಗಳನ್ನು ತೊರೆಯುವ ಬಲವಂತಕ್ಕೆ ಒಳಗಾಗಿದ್ದಾರೆ. ಛತ್ತೀಸ್‌ಗಢದ ಕ್ರೈಸ್ತ ಬುಡಕಟ್ಟು ಜನರ ಮೇಲೆ ನಡೆದ ದಾಳಿಗಳ ಬಗ್ಗೆ ಸಿಪಿಐ (ಎಂ) ನಿಯೋಗ ಸಿದ್ಧಪಡಿಸಿದ ಸಮಗ್ರ ವರದಿಯನ್ನು ಪ್ರಕಟಿಸಲಾಗಿದೆ.

ಮೀಸಲಾತಿ ವಂಚನೆ

ಛತ್ತೀಸ್‌ಗಢದಲ್ಲಿ ಕ್ರೈಸ್ತ ಬುಡಕಟ್ಟು ಜನರ ಮೇಲೆ ನಡೆಯುತ್ತಿರುವ ದಾಳಿಗಳನ್ನು ಆರೆಸ್ಸೆಸ್ ನೇತೃತ್ವದ ಆದಿವಾಸಿ ಸಂಘಟನೆಗಳು ನಡೆಸುತ್ತಿರುವ ಪ್ರಚಾರದ ಹಿನ್ನೆಲೆಯಲ್ಲೂ ನೋಡಬೇಕಾಗುತ್ತದೆ. ಕ್ರೈಸ್ತ ಆದಿವಾಸಿಗಳನ್ನು ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿ ಪಟ್ಟಿಯಿಂದ ಕೈಬಿಡುವಂತೆ ಈ ಸಂಘಟನೆಗಳು ಒತ್ತಾಯಿಸುತ್ತಿವೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಬುಡಕಟ್ಟು ಜನರು ಮೀಸಲಾತಿಗೆ ಅರ್ಹರಲ್ಲ ಎನ್ನುವುದು ಅವರ ವಾದವಾಗಿದೆ. ಇದರ ಪರಿಣಾಮ ಅಗಾಧವಾಗಿರುತ್ತದೆ. ಉದಾಹರಣೆಗೆ, ಈಶಾನ್ಯ ಭಾರತದ ಬಹಳಷ್ಟು ಬುಡಕಟ್ಟು ಸಮುದಾಯಗಳು ಕ್ರಿಶ್ಚಿಯನ್ ಆಗಿವೆ. ಮತ್ತು ಆರೆಸ್ಸೆಸ್‌ನ ಈ ಬೇಡಿಕೆಯಿಂದಾಗಿ ಅವುಗಳು ಎಸ್‌ಟಿ ಸ್ಥಾನಮಾನದಿಂದ ವಂಚಿತವಾಗಲಿವೆ.

ಕರ್ನಾಟಕದಲ್ಲಿ ಕರಾಳ ಕಾನೂನು

ಬಲವಂತದ ಮತಾಂತರ ಮಾಡುತ್ತಾರೆ ಎಂದು ಆರೋಪಿಸುವುದು ಕ್ರೈಸ್ತರ ವಿರುದ್ಧದ ದಾಳಿಯ ಇನ್ನೊಂದು ಪ್ರಮುಖ ವಿಧಾನವಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ "ಧಾರ್ಮಿಕ ಸ್ವಾತಂತ್ರ್ಯ ಹಕ್ಕು ರಕ್ಷಣೆ ಕಾನೂನು" ಎಂಬ ಮತಾಂತರ ವಿರೋಧಿ ಕಾನೂನನ್ನು ರೂಪಿಸಿದೆ. 2022 ಸೆಪ್ಟೆಂಬರ್‌ನಲ್ಲಿ ಈ ಕಾನೂನು ಅಂಗೀಕಾರವಾಗಿದೆ. ಬಲವಂತದಿಂದ ಮತಾಂತರಗೊಳಿಸಲಾಗಿದೆ ಎಂದು ಮತಾಂತರಗೊಂಡ ವ್ಯಕ್ತಿಯ ಕುಟುಂಬದ ಹೊರಗಿನವರು ಕೂಡ ನೀಡಿದ ದೂರಿನ ಆಧಾರದಲ್ಲಿ ಚರ್ಚ್‌ಗಳು ಮತ್ತು ಪಾದ್ರಿಗಳನ್ನು ಬಂಧಿಸಲು ಅವಕಾಶ ಕೊಡುವ ಕರಾಳ ನಿಯಮ ಈ ಕಾನೂನಿನಲ್ಲಿದೆ. ಕರ್ನಾಟಕದಲ್ಲಿ ವಿವಿಧ ಚರ್ಚ್‌ಗಳು ಈ ಕಾನೂನಿನ ವಿರುದ್ಧ ಒಗ್ಗಟ್ಟಿನಿಂದ ಹೋರಾಡುತ್ತಿವೆ. ನ್ಯಾಯಕ್ಕಾಗಿ ಕೋರ್ಟ್‌ಗೂ ಮೊರೆಹೋಗಿವೆ.

ಕೇರಳದಲ್ಲಿ, ಕೇಂದ್ರದ ಬಿಜೆಪಿ ಆಡಳಿತಗಾರರ ಸತತ ಒತ್ತಡದಿಂದಾಗಿ ಕೆಲವು ಚರ್ಚ್ ನಾಯಕರು ಶರಣಾಗಿದ್ದು ತಲಶೇರಿ ಆರ್ಚ್‌ಡಯೋಸಿಸ್‌ನ ಆರ್ಚ್‌ಬಿಷಪ್ ಜೋಸೆಫ್ ಪಂಪ್ಲಾನಿಯಂಥವರು ರಾಜಿ ಮಾಡಿಕೊಂಡಿದ್ದಾರೆ. ತಮ್ಮ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಪಡಿಸುವಂತೆ ಕೋರಿ ಕಾರ್ಡಿನಲ್ ಜಾರ್ಜ್ ಅಲಂಚೆರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ತಳ್ಳಿ ಹಾಕಿದೆ. ಅಂಥ ಅಲೆಂಚೆರಿಯೇ ಈಸ್ಟರ್ ಭಾನುವಾರ ಸಂದರ್ಶನವೊಂದರಲ್ಲಿ 'ಮೋದಿ ಒಬ್ಬ ಒಳ್ಳೆಯ ನಾಯಕ' ಎಂದು ಹೇಳಿದ್ದಾರೆ. ಬಿಜೆಪಿ ಆಡಳಿತದಲ್ಲಿ ಕ್ರೈಸ್ತರು ಅಸುರಕ್ಷಿತರಲ್ಲ ಎಂದೂ ಹೇಳಿದ್ದಾರೆ.

ಕೆಲವು ಚರ್ಚ್ ನಾಯಕರ ಇಂಥ ಹೇಳಿಕೆಗಳು ಆ ಚರ್ಚ್‌ನ ಅಥವಾ ಇಡೀ ಸಮುದಾಯದ ಅಭಿಪ್ರಾಯವೆಂದು ಭಾವಿಸಬೇಕಾಗಿಲ್ಲ. ಪಾಂಪ್ಲನಿಯ ಹೇಳಿಕೆಗಳನ್ನು ಕ್ಯಾಥೊಲಿಕ್ ಚರ್ಚ್‌ನ ಕೆಲವು ವಿಭಾಗದವರು ವಿರೋಧಿಸಿದ್ದಾರೆ. ಕೇರಳದಲ್ಲಿ ಕ್ರೈಸ್ತರು ಕೇರಳ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಜಾತ್ಯತೀತ ಬಂಧದ ಅವಿಭಾಜ್ಯ ಭಾಗವಾಗಿದ್ದಾರೆ. ಬಿಜೆಪಿ–ಆರೆಸ್ಸೆಸ್‌ನ ಕ್ರೈಸ್ತ–ವಿರೋಧಿ ಸ್ವರೂಪದ ಬಗ್ಗೆ ಅವರಿಗೆ ಅರಿವಿದೆ. ಹಾಗೂ ದೇಶದಾದ್ಯಂತ ಕ್ರೈಸ್ತ ಸಮುದಾಯ ಅನುಭವಿಸಿದ ನೋವಿನ ಅನುಭವದ ಬಗ್ಗೆಯೂ ಗೊತ್ತಿದೆ. ಬಿಜೆಪಿ ಮತ್ತು ಹಿಂದೂತ್ವ ಶಕ್ತಿಗಳ ಕುಟಿಲೋಪಾಯಗಳನ್ನು ಎದುರಿಸಲು ಬೇಕಾದ್ದೆಲ್ಲವನ್ನೂ ಮಾಡಲು ಕೇರಳದ ಎಡ ಪ್ರಜಾಸತ್ತಾತ್ಮಕ ರಂಗವನ್ನು ನೆಚ್ಚಿಕೊಳ್ಳಬಹುದಾಗಿದೆ.

ಅನು: ವಿಶ್ವ



ವಸಂತರಾಜ ಎನ್.ಕೆ.

ಕಾಂಗ್ರೆಸ್, ಬಿಜೆಪಿ, ಜೆಡಿ–ಎಸ್ – ಈ ಮೂರು ಪ್ರಮುಖ ಬೂರ್ಜ್ವಾ–ಭೂಮಾಲಿಕ ಪಕ್ಷಗಳನ್ನು ಹೊರತುಪಡಿಸಿ, ಕರ್ನಾಟಕದಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಿರುವ ಇತರ ಪಕ್ಷಗಳಿವೆ. ಅವು ಮುಖ್ಯ ಸ್ಪರ್ಧಿಗಳು ಅಲ್ಲದಿರಬಹುದು, ಆದರೆ ವಿವಿಧ ರೀತಿಯಲ್ಲಿ ಗಣನೀಯ ಪ್ರಭಾವವನ್ನು ಹೊಂದಿರುತ್ತಾರೆ. ಇವುಗಳಲ್ಲಿ ಐದು ಎಡ ಪಕ್ಷಗಳು ಸೇರಿದ ಏಳು ಪಕ್ಷಗಳ ರಂಗ ಮತ್ತು ಎಎಪಿ, ಬಿಎಸ್ಪಿ, ಎಸ್ಡಿಪಿಐ, ಕೆಆರ್ಪಿಪಿ, ಕೆಆರ್‌ಎಸ್ನಂತಹ ಪಕ್ಷಗಳು ಸೇರಿವೆ.

ಪರ್ಯಾಯ ನೀತಿಗಳಿಗಾಗಿ ಎಡ ಸ್ಪರ್ಧೆ

ಐದು ಎಡಪಕ್ಷಗಳನ್ನು ಒಳಗೊಂಡ ಏಳು ಪಕ್ಷಗಳ ರಂಗ – (ಸಿಪಿಐ–ಎಂ, ಸಿಪಿಐ, ಸಿಪಿಐ–ಎಂಎಲ್–ಲಿಬರೇಶನ್, ಎಸ್ಯುಸಿಐ–ಸಿ, ಫಾರ್ವರ್ಡ್ ಬ್ಲಾಕ್), ಸರ್ವೋದಯ ಪಕ್ಷ ಮತ್ತು ಆರ್ಪಿಐ (ಮೋಹನ್‌ರಾಜ್ ನೇತೃತ್ವ) – ಕಳೆದ ಹಲವು ವರ್ಷಗಳಿಂದ ಒಕ್ಕೂಟ ರಚಿಸಿಕೊಂಡಿದ್ದವು. ಹಲವು ವರ್ಷಗಳಿಂದ ಜನರ ಸಮಸ್ಯೆಗಳನ್ನು ಎತ್ತಿಕೊಂಡು ಜನಪರ ಪರ್ಯಾಯಕ್ಕಾಗಿ ಹೋರಾಡುತ್ತಿವೆ. ಈ ಪಕ್ಷಗಳು ಮತ್ತು ಅವರ ನೇತೃತ್ವದ ಸಾಮೂಹಿಕ ಸಂಘಟನೆಗಳು, ಚಳುವಳಿಗಳು ಕಾರ್ಮಿಕರ, ರೈತರ, ದಲಿತರ, ಮಹಿಳೆಯರ ಅನೇಕ ಸಮಸ್ಯೆಗಳ ಕುರಿತು ಹೋರಾಟಗಳಲ್ಲಿ, ಹಾಗೂ ನವ–ಉದಾರವಾದ ಮತ್ತು ಕೋಮುವಾದದ ವಿರುದ್ಧದ ಅಭಿಯಾನದಲ್ಲಿ ಭಾಗವಹಿಸಿವೆ. ಅನೇಕ ಜಂಟಿ ಸಮಾವೇಶಗಳನ್ನು ನಡೆಸಲಾಯಿತು. ಜಂಟಿಯಾಗಿ ಪರ್ಯಾಯ ಜನಪರ ನೀತಿಗಳ ಗುಂಪನ್ನು ಯೋಜಿಸಿವೆ. ಚುನಾವಣೆ ಪೂರ್ವದಲ್ಲಿಯೂ ಚರ್ಚೆ ನಡೆಸಿದ್ದವು.. ಚುನಾವಣೆಗಳಲ್ಲಿ ಭಾಗವಹಿಸಲು ಅವರು ಈ ಕೆಳಗಿನ ಸ್ಥೂಲ ಮಾರ್ಗಸೂಚಿಗಳನ್ನು ಗುರುತಿಸಲಾಗಿತ್ತು:

1) ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದೇ ಪ್ರಮುಖ ಗುರಿಯಾಗಿದೆ. ನಮ್ಮ ಸ್ಪರ್ಧೆ ಬಿಜೆಪಿ ಗೆಲುವಿಗೆ ನೆರವಾಗುವ ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ತಪ್ಪಿಸಬೇಕು.
2) ನಾವು ಸ್ಪರ್ಧಿಸದ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಲು ಹೆಚ್ಚು ಸಜ್ಜಾಗಿರುವ ಅಭ್ಯರ್ಥಿಯ ಪರ ಪ್ರಚಾರ ಮಾಡಬೇಕು.
3) ರಾಜ್ಯದಾದ್ಯಂತ ನಮ್ಮ ಸ್ವತಂತ್ರ ಸಾಮಾನ್ಯ ಅಭಿಯಾನವು ಜನವಿರೋಧಿ ನವ–ಉದಾರವಾದಿ ಮತ್ತು ಕೋಮುವಾದಿ ನೀತಿಗಳ ವಿರುದ್ಧ ಮತ್ತು ಜನಪರ ಪರ್ಯಾಯ ನೀತಿಗಳ ಪರ ಪ್ರಚಾರಕ್ಕೆ ಒತ್ತು ಕೊಡುತ್ತದೆ.
4) ನಮಗೆ ಗೆಲ್ಲುವ ಅವಕಾಶವಿರುವ ಅಥವಾ ಎರಡನೇ ಸ್ಥಾನದಲ್ಲಿ ಬರಬಹುದಾದ ಕ್ಷೇತ್ರಗಳಲ್ಲಿ ಸ್ಪರ್ಧಿಸಬೇಕು. ವಿಧಾನಸಭೆಯಲ್ಲಿ ಜನರ ಧ್ವನಿ ಎತ್ತುವ ಪ್ರತಿನಿಧಿಗಳನ್ನು (ಈಗ ಒಬ್ಬರೂ ಇಲ್ಲ) ಹೊಂದಲು ನಾವು ಶ್ರಮಿಸಬೇಕು.
5) ನಾವು ಪರಸ್ಪರ ವಿರುದ್ದವಾಗಿ ಸ್ಪರ್ಧಿಸಬಾರದು ಮತ್ತು ಪರಸ್ಪರ ಬೆಂಬಲಿಸಿ ಪ್ರಚಾರ ಮಾಡಬೇಕು

ಆದಾಗ್ಯೂ ಈ ಮಾರ್ಗಸೂಚಿಗಳ ಆಚರಣೆಯಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಕುರಿತು ಧೋರಣೆಯಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬಂದಿವೆ.

ಸಿಪಿಐ(ಎಂ) ಸ್ಪರ್ಧೆ

ಸಿಪಿಐ(ಎಂ) ನಾಲ್ಕು ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸಲು ನಿರ್ಧರಿಸಿದೆ. ಪಕ್ಷವು 1983 ರಲ್ಲಿ (ಕಾಂ. ಎ.ವಿ. ಅಪ್ಪಸ್ವಾಮಿ ರೆಡ್ಡಿ ಅವರು), 1994 ಮತ್ತು 2004 ರಲ್ಲಿ (ಕಾಂ. ಜಿ.ವಿ.ಎಸ್. ರೆಡ್ಡಿ ಅವರು) ಗೆದ್ದಿದ್ದ ಮತ್ತು ಇತರ ಹೆಚ್ಚಿನ ಚುನಾವಣೆಗಳಲ್ಲಿ ಎರಡನೇ ಸ್ಥಾನದಲ್ಲಿದ್ದ ಬಾಗೇಪಲ್ಲಿ (ಚಿಕ್ಕಬಳ್ಳಾಪುರ ಜಿಲ್ಲೆ) ಕ್ಷೇತ್ರದಲ್ಲಿ ಮತ್ತೆ ಸ್ಪರ್ಧಿಸಲಿದೆ. ಇದು ಅವಿಭಜಿತ ಕೋಲಾರ ಜಿಲ್ಲೆಯ ಭಾಗವಾಗಿದ್ದು, ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ಪ್ರಬಲ ಕ್ಷೇತ್ರಗಳಲ್ಲಿ ಒಂದಾಗಿದೆ. ಕಾಂ. ಡಾಕ್ಟರ್ ಅನಿಲ್ ಕುಮಾರ್ ಅವುಲಪ್ಪ, ಪಕ್ಷದ ಅಭ್ಯರ್ಥಿಯಾಗಿ ಏಪ್ರಿಲ್ 15 ರಂದು ಪ್ರಧಾನ ಕಾರ್ಯದರ್ಶಿ ಕಾಂ. ಸೀತಾರಾಮ್ ಯೆಚೂರಿ ಅವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ. ಡಾ. ಅನಿಲ್ ಕುಮಾರ್ ಹಲವು ವರ್ಷಗಳಿಂದ ಜನಪ್ರಿಯ ವೈದ್ಯ ಮತ್ತು ಸಾಮಾಜಿಕ ಕಾರ್ಯಕರ್ತರಾಗಿ ದುಡಿದಿದ್ದರೆ. ಪ್ರಸ್ತುತ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಸೆಕ್ರೆಟಾರಿಯಟ್ ಸದಸ್ಯರಾಗಿದ್ದಾರೆ. ಬಾಗೇಪಲ್ಲಿ ತಾಲೂಕಿನ 160 ಹಳ್ಳಿಗಳಲ್ಲಿ 480 ಸ್ವಯಂಸೇವಕರೊಂದಿಗೆ ಕೋವಿಡ್ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಅವರ ನವೀನ ವಿಧಾನವು ಜಿಲ್ಲಾ ಆರೋಗ್ಯ ಅಧಿಕಾರಿಗಳು ಸೇರಿದಂತೆ ವ್ಯಾಪಕವಾಗಿ ಮೆಚ್ಚುಗೆ ಪಡೆದಿದೆ. 'ಸಾಮಾಜಿಕ ಬಲವರ್ಧನೆ ತಂತ್ರ' ಎಂದು ಕರೆಯಲಾದ ಅವರ ವಿಧಾನವು, ಅಸ್ತಿತ್ವದಲ್ಲಿರುವ ಆರೋಗ್ಯ ರಕ್ಷಣೆಯ ಮೂಲಸೌಕರ್ಯವು ಅಸಮರ್ಪಕವೆಂದು ಸಾಬೀತಾದಾಗ ಸಾಂಕ್ರಾಮಿಕ ರೋಗವನ್ನು ಎದುರಿಸುವ ಸರಳ, ಜನ–ಕೇಂದ್ರಿತ ಮತ್ತು ತಳಮಟ್ಟ–ಆಧಾರಿತ ಪ್ರಯತ್ನದ ಪರಿಣಾಮಕಾರಿತ್ವವನ್ನು ಪ್ರದರ್ಶಿಸಿದೆ. ಪಕ್ಷವು ಸೆಪ್ಟೆಂಬರ್ 18, 2022 ರಂದು ಸಿಪಿಐ(ಎಂ) ಪಿಬಿ ಸದಸ್ಯ ಮತ್ತು ಕೇರಳದ ಮುಖ್ಯಮಂತ್ರಿ ಕಾಂ ಪಿಣರಾಯಿ ವಿಜಯನ್ ಉದ್ಘಾಟಿಸಿದ ರಾಜಕೀಯ ಸಮಾವೇಶದೊಂದಿಗೆ ಪ್ರಚಾರವನ್ನು ಪ್ರಾರಂಭಿಸಿತು. ಪಕ್ಷದ ಕ್ರಿಯಾ ಯೋಜನೆಯಲ್ಲಿ ಸೇರಬೇಕಾದ ಸಮಸ್ಯೆಗಳನ್ನು ನಿಖರವಾಗಿ ಗುರುತಿಸಲು ಪಕ್ಷವು ಕ್ಷೇತ್ರದ ಸಮೀಕ್ಷೆಯನ್ನು ಸಹ ನಡೆಸಿದೆ.

ಸಿಪಿಐ(ಎಂ)–ಕೆಜಿಎಫ್ (ಕೋಲಾರ ಗೋಲ್ಡ್ ಫೀಲ್ಡ್ಸ್)–ಎಸ್ಸಿ, ಕಲ್ಬುರ್ಗಿ ಗ್ರಾಮಾಂತರ (ಎಸ್ಸಿ), ಕೆಆರ್ ಪುರಂ (ಬೆಂಗಳೂರು ಜಿಲ್ಲೆ)–ಈ ಮೂರು ಕ್ಷೇತ್ರಗಳಲ್ಲಿ ಸಹ ಸ್ಪರ್ಧಿಸಲಿದೆ. ಕೆಜಿಎಫ್, ಗುಲ್ಬರ್ಗಾ ಗ್ರಾಮೀಣ ಎರಡೂ ಎಸ್.ಸಿ ಮೀಸಲು ಕ್ಷೇತ್ರ. ಕೆಜಿಎಫ್ ಪಕ್ಷವು ಹಿಂದಿನಿಂದಲೂ ಸ್ಪರ್ಧಿಸುತ್ತಿರುವ ಮತ್ತೊಂದು ಕ್ಷೇತ್ರವಾಗಿದೆ. ಇದನ್ನು 1940 ರ ದಶಕದಿಂದ ಕಮ್ಯುನಿಸ್ಟ್ ಚಳುವಳಿಯ ಕೋಟೆ ಎಂದು ಪುಟ 10 ಕ್ಕೆ



ಕೆ.ಆರ್.ಪುರಂ: ಸಿಪಿಐ(ಎಂ)ನಿಂದ ಚುನಾವಣಾ ಪ್ರಚಾರದ ಉದ್ಘಾಟನೆ

ಏಪ್ರಿಲ್ 14 ರಂದು ಬೆಂಗಳೂರು ನಗರ ವ್ಯಾಪ್ತಿಗೆ ಸೇರಿದ ಕೆಆರ್ ಪುರಂ ಕ್ಷೇತ್ರದಲ್ಲಿ ಸಿಪಿಐ(ಎಂ) ಚುನಾವಣಾ ಪ್ರಚಾರ ಆರಂಭಿಸಿತು. ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ ಎಂ ಎ ಬೇಬಿ ಪ್ರಚಾರ ಉದ್ಘಾಟಿಸಿದರು. ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕೆ. ಎನ್. ಉಮೇಶ್, ರಾಜ್ಯ ಕಾರ್ಯದರ್ಶಿ ಸಮಿತಿ ಸದಸ್ಯರಾದ ಮೀನಾಕ್ಷಿಸುಂದರಂ, ಜಿಲ್ಲಾ ಮುಖಂಡರಾದ ಪ್ರತಾಪ್ ಸಿಂಹ, ಬಿ ಎನ್ ಮಂಜುನಾಥ್, ಗೌರಮ್ಮ, ಗೋಪಾಲಗೌಡ ಮತ್ತು ಮುನಿರಾಜು ಹಾಗೂ ಸದಸ್ಯರು ಹಾಗೂ ಬೆಂಬಲಿಗರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಮೀನಾಕ್ಷಿಸುಂದರಂ ಅವರು ನಂಜೇಗೌಡ ಅವರಿಗೆ ಬಿ ಫಾರಂ ಅನ್ನು ಔಪಚಾರಿಕವಾಗಿ ಪುಟ 10 ಕ್ಕೆ


ಬಾಗೇಪಲ್ಲಿ ರ್ಯಾಲಿ–ನಾಮಪತ್ರ ಸಲ್ಲಿಕೆಯ ಬಳಿಕ

ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ನಾಮಪತ್ರ ಸಲ್ಲಿಕೆ ಬಿಜೆಪಿ ದುರಾಡಳಿತದ ವಿರುದ್ಧ ಯೆಚೂರಿ ವಾಗ್ದಾಳಿ





ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರಶ್ನಿಸುವ ಪ್ರತಿಪಕ್ಷಗಳ ನಾಯಕರ ವಿರುದ್ದ ಕೇಂದ್ರ ಬಿಜೆಪಿ ಸರ್ಕಾರ ಸಿ.ಬಿ.ಐ, ಇ.ಡಿ ದಾಳಿ ಬೆದರಿಕೆ ಹಾಕುವ ಮೂಲಕ ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿರುವ ಸಿಪಿಐ(ಎಂ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತರಾಂ ಯಚೂರಿ, ಮೋದಿ ನೇತೃತ್ವದ ಕೇಂದ್ರ ಬಿಜೆಪಿ ದುರಾಡಳಿತದ ವಿರುದ್ದ ವಾಗ್ದಾಳಿ ನಡೆಸಿದರು.

ಬಾಗೇಪಲ್ಲಿ ಪಟ್ಟಣದ ಹೊರವಲಯದ ಕೆಹೆಚ್‌ಬಿ ಲೇಔಟ್‌ನಲ್ಲಿ ಸಿಪಿಐ(ಎಂ) ವತಿಯಿಂದ ಏಪ್ರಿಲ್ 15ರ ಶನಿವಾರ ಆಯೋಜಿಸಲಾಗಿದ್ದ ನಾಮಪತ್ರ ಸಲ್ಲಿಕೆ ಹಾಗೂ ಬೃಹತ್ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಜಾಪ್ರಭುತ್ವದ ಹಕ್ಕುಗಳ ಮೇಲೆ ನಿರಂತರವಾಗಿ ದಾಳಿಗೆ ಇಳಿದಿದೆ. ಇ.ಡಿ., ಸಿಬಿಐ ಇತ್ಯಾಧಿಗಳನ್ನು ಬಳಕೆ ಮಾಡಿಕೊಂಡು ದೇಶದ ಎಲ್ಲಾ ಪ್ರತಿಪಕ್ಷ ನಾಯಕರ ವಿರುದ್ದ ಕೇಸುಗಳನ್ನು ದಾಖಲಿಸಿ, ಕೆಲವರನ್ನು ಜೈಲಿಗೆ ಕಳುಹಿಸುವುದು ಸೇರಿದಂತೆ, ದೊಡ್ಡ ರೀತಿಯಲ್ಲಿ ಹಿಂಸೆ ನೀಡುವಂತಹ ಪರಿಸ್ಥಿತಿ ದೇಶದಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಮೂಲಕ ಪ್ರತಿಪಕ್ಷದವರನ್ನು ತಮಗೆ ತಕ್ಕಂತೆ ಬದಲಿಸಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದ ಯಾವುದೇ ರಾಜ್ಯದಲ್ಲಿ ಬಿಜೆಪಿ ಪಕ್ಷ ಸೋತರೂ ಸಹ, ಇ.ಡಿ., ಸಿಬಿಐ ದಾಳಿ ಬೆದರಿಕೆ ಹಾಕಿ, ಇಲ್ಲವೆ ಅಪರೇಷನ್ ಕಮಲದ ಮೂಲಕ, ಕಾಂಗ್ರೆಸ್ ಸೇರಿದಂತೆ ನಾನಾ ರಾಜಕೀಯ ಪಕ್ಷಗಳ ಶಾಸಕರಿಂದ ಪಕ್ಷಕ್ಕೆ ಬೆಂಬಲ ಪಡೆದು ಅಧಿಕಾರದ ಚುಕ್ಕಾಣಿ ಹಿಡಿಯುವಂತಹ ಹೀನಾಯ ಸ್ಥಿತಿಗೆ ಬಿಜೆಪಿ ಬಂದು ತಲುಪಿದೆ. ಈ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದೇಶದಿಂದ ತೊಲಗಿಸುವ ಪ್ರಯತ್ನಕ್ಕೆ ಬಿಜೆಪಿ ಕೈಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಂ ಸಮುದಾಯಕ್ಕೆ ಇತರೆ ಹಿಂದುಳಿದ ವರ್ಗಗಳ ಕೋಟಾದಡಿ ನೀಡಲಾಗಿದ್ದ ಶೇ 4 ಮೀಸಲಾತಿಯನ್ನು ರದ್ದು ಪಡಿಸಿದ್ದ ರಾಜ್ಯ ಬಿಜೆಪಿ ಸರಕಾರದ ಕ್ರಮಕ್ಕೆ ಸುಪ್ರಿಂ ಕೋರ್ಟ್ ಸರಿಯಾಗಿ ಏಟು ಕೊಟ್ಟಿದೆ ಎಂದು ಯೆಚೂರಿಯವರು ಹೇಳಿದರು.

ಮೋದಿಯವರ ಕಳೆದ ಏಳು ವರ್ಷಗಳ ಆಡಳಿತದಲ್ಲಿ ಅದಾನಿ, ಅಂಬಾನಿ ಮೊದಲಾದ ದೊಡ್ಡ ಉದ್ಯಮಿಗಳ ಸುಮಾರು 11 ಲಕ್ಷ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ. ಆದರೆ, ಬಡವರ, ರೈತರ ಹತ್ತು ಸಾವಿರ, ಇಪ್ಪತ್ತು ಸಾವಿರ ಸಾಲ ಮನ್ನಾ ಮಾಡಿ ಎಂದರೆ ಇದರಿಂದ ಆರ್ಥಿಕ ಹೊರೆ ಹೆಚ್ಚಾಗುತ್ತದೆ ಎಂದು ಹೇಳಿ, ಬಡವರ ಸಾಲ ಮನ್ನಾ ಮಾಡಲು ನಿರಾಕರಿಸುತ್ತಾರೆ ಎಂದು ಅವರು ಆರೋಪಿಸಿದರು.

ಖಾಸಗೀಕರಣದ ಹೆಸರಿನಲ್ಲಿ ಸರ್ಕಾರಿ ಸೌಮ್ಯದ ಆಸ್ತಿಯನ್ನು ಮಾರಾಟ ಮಾಡಿ, ತನ್ನ ಮಿತ್ರರಾದ ಅಧಾನಿಯವರಿಗೆ ನೀಡುತ್ತಿದ್ದಾರೆ. ಕೃಷಿ ಸಾಲ ತೀರಿಸಲಾಗದೆ ದೇಶದಲ್ಲಿ ಲಕ್ಷಾಂತರ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆದರೆ ಕೋಟ್ಯಾಂತರ ರೂ.ಗಳ ಸಾಲ ಮಾಡಿ ದೇಶದಿಂದ ಪರಾರಿಯಾಗುವ ಶ್ರೀಮಂತರ ಸಾಲ ಮನ್ನಾ ಮಾಡುವ ಕೇಂದ್ರ ಸರ್ಕಾರ, ಬಡವರ ಹಾಗೂ ರೈತರ ಸಾಲ ಮನ್ನಾ ಮಾಡಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಮೋದಿ ಸರ್ಕಾರವನ್ನು ಪ್ರಶ್ನಿಸಿದರು.

ಪೆಟ್ರೋಲ್, ಡೀಸಲ್ ದರ ಹೆಚ್ಚಳದಿಂದ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿಕೆಯಾಗಿ ದೇಶದ ಬಡವರು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಲ್ಲದೆ, ಆರ್ಥಿಕ ಪರಿಸ್ಥಿತಿ ಕುಂಠಿತಗೊಳ್ಳುತ್ತಿದೆ ಎಂದ ಅವರು, ಇದರಿಂದ ಶ್ರೀಮಂತರು ಶ್ರೀಮಂತರಾಗಿ, ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ ಎಂದರು.

ರಾಜ್ಯದ ಬಡವರ, ಕೂಲಿ ಕಾರ್ಮಿಕರ, ದಲಿತ ಹಿಂದುಳಿದವರ ಸಮಸ್ಯೆಗಳ ಪರವಾಗಿ ವಿಧಾನ ಸಭೆ ಮತ್ತು ಲೋಕಸಭೆಯಲ್ಲಿ ಧ್ವನಿ ಎತ್ತುವ ಏಕೈಕ ಪಕ್ಷ ಸಿಪಿಐ(ಎಂ). ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾದರೆ ಕೇವಲ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರವಲ್ಲದೆ, ಇಡೀ ರಾಜ್ಯದ ಬಡವರ ಕೃಷಿ ಕೂಲಿಕಾರ್ಮಿಕರ, ದಲಿತರ ಸಮಸ್ಯೆಗಳ ಪರಿಹಾರಕ್ಕೆ ಧ್ವನಿ ಎತ್ತಲಿದ್ದಾರೆ ಎಂದ ಅವರು, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿರುವ ಡಾ. ಅನಿಲಕುಮಾರ್ ರವರನ್ನು ಆಯ್ಕೆ ಮಾಡುವಂತೆ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದರು.



ಸಿಪಿಐ(ಎಂ) ಅಭ್ಯರ್ಥಿ ಡಾ. ಅನಿಲ್ ಕುಮಾರ್ ಮಾತನಾಡಿ, ಸಿಪಿಐ(ಎಂ) ಶಾಸಕರಾಗಿ ಆಯ್ಕೆಯಾಗಿದ್ದ ಜಿ.ವಿ. ಶ್ರೀರಾಮರೆಡ್ಡಿ ಅವಧಿಯಲ್ಲಿ ನಡೆದಿರುವ ಅಭಿವೃದ್ಧಿ ಹೊರತುಪಡಿಸಿ, ಎರಡು ಭಾರಿ ಶಾಸಕರಾಗಿರುವ ಕಾಂಗ್ರೆಸ್ ಶಾಸಕರು ಈ ಕ್ಷೇತ್ರದ ಅಭಿವೃದ್ಧಿಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಹೊರಗಿನವರು ಧರ್ಮಸ್ಥಳ ಪ್ರವಾಸ, ಉಡುಗರೆಗಳೂ ಸೇರಿದಂತೆ ಆಸೆ ಆಮಿಷಗಳನ್ನು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವಂತೆ ಮನವಿ ಮಾಡಿದರು.



ಇದಕ್ಕೂ ಮುನ್ನ ಸಿಪಿಐ(ಎಂ) ಪಕ್ಷದ ಸಾವಿರಾರು ಕಾರ್ಯಕರ್ತರೊಂದಿಗೆ ಪಕ್ಷದ ಅಭ್ಯರ್ಥಿ ಡಾ. ಅನಿಲ್ ಕುಮಾರ್ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ನಂತರ ಪಟ್ಟಣದ ಮುಖ್ಯ ರಸ್ತೆಯಲ್ಲಿ ಮರೆವಣಿಗೆ ನಡೆಸಿ ಬಹಿರಂಗ ಸಭೆಯಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ)ನ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು, ಮುಖಂಡರಾದ ವರಲಕ್ಷ್ಮೀ ಹಾಗೂ ಜೆಡಿಎಸ್ ಪಕ್ಷದ ಮುಖಂಡರಾದ ನೂರುಲ್ಲಾ, ಲಕ್ಷ್ಮೀನಾರಾಯಣ, ರೈತ ಸಂಘಟನೆಗಳ ಮುಖಂಡರು ಇದ್ದರು.

ಕೆಜಿಎಫ್: ಸಿಪಿಐ(ಎಂ) ಅಭ್ಯರ್ಥಿಯಾಗಿ ಪಿ. ತಂಗರಾಜ್ ನಾಮಪತ್ರ

ತಂಗರಾಜ್ ಅವರು ಏಪ್ರಿಲ್ 15ರಂದು ನಾಮಪತ್ರ ಸಲ್ಲಿಸುವ ಮುನ್ನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಸೂರಜ್ ಮಹಲ್ ಚೌಕದಿಂದ, ಕೆಂಪು ಅಂಗಿ ತೊಟ್ಟು, ಕೆಂಬಾವುಟ ಹಿಡಿದ ಪಕ್ಷದ ಸಾವಿರಾರು ಕಾರ್ಯಕರ್ತರು ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಈ ಸಂದರ್ಭದಲ್ಲಿ ಪಕ್ಷದ ರಾಜ್ಯ ಮುಖಂಡರಾದ ಮೀನಾಕ್ಷಿ ಸುಂದರಂ, ಜಿಲ್ಲಾ ಮುಖಂಡರಾದ ಎ. ಆರ್. ಬಾಬು ಸೇರಿದಂತೆ ಹಲವು ಮುಖಂಡರು ಭಾಗಿಯಾಗಿದ್ದರು.

ಸಿಪಿಐ(ಎಂ) ನ ಕೋಲಾರ ಜಿಲ್ಲಾ ಸಮಿತಿ ಸದಸ್ಯರಾದ ಪಿ. ತಂಗರಾಜ್ ಅವರು ಕೆಜಿಎಫ್ ನಗರಸಭೆಯ ಸದಸ್ಯರಾಗಿದ್ದರು.



ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಪಿ. ತಂಗರಾಜ್ ಅವರು ಕೋಲಾರ ಜಿಲ್ಲೆಯ ಕೆಜಿಎಫ್ ವಿಧಾನಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ್ದಾರೆ.

ಕೆ.ಜಿ.ಎಫ್.–ಎಸ್.ಸಿ. ಮೀಸಲು ಕ್ಷೇತ್ರ



ಪರ್ಯಾಯ ನೀತಿಗಳಿಗಾಗಿ ಎಡ ಸ್ಪರ್ಧೆ......

ಪುಟ 8 ರಿಂದ

ಪರಿಗಣಿಸಲಾಯಿತು ಮತ್ತು ಚಿನ್ನದ ಗಣಿ ಕಾರ್ಮಿಕರಲ್ಲಿ ಬಲವಾದ ನೆಲೆಯನ್ನು ಹೊಂದಿತ್ತು. ಅವಿಭಜಿತ ಸಿಪಿಐ ಈ ಸ್ಥಾನವನ್ನು ಮೊದಲ ಚುನಾವಣೆಯಲ್ಲಿಯೇ (1952) ಗೆದ್ದು 1957 ಮತ್ತು 1962 ರಲ್ಲಿ ಉಳಿಸಿಕೊಂಡಿತು. ಕರ್ನಾಟಕದ ಮೊದಲ ಕಮ್ಯುನಿಸ್ಟ್ ಶಾಸಕ ಕಾಂ. ಕೆ.ಎಸ್. ವಾಸನ್ ಅವರನ್ನು ಆಯ್ಕೆ ಮಾಡಿದ ಹೆಗ್ಗಳಿಕೆಯನ್ನು ಕೆಜಿಎಫ್ ಹೊಂದಿದೆ. ಸಿಪಿಐ(ಎಂ) ರಚನೆಯಾದ ನಂತರ ಚಿನ್ನದ ಗಣಿ ಕಾರ್ಮಿಕ ಮತ್ತು ಯೂನಿಯನ್ ನಾಯಕರಾಗಿದ್ದ ಕಾಂ. ಟಿ.ಎಸ್. ಮಣಿ 1985 ರಲ್ಲಿ ಸ್ಥಾನವನ್ನು ಗೆದ್ದರು ಮತ್ತು 1983 ಮತ್ತು 1989 ರಲ್ಲಿ ಎರಡನೇ ಸ್ಥಾನದಲ್ಲಿದ್ದರು. ಕಾಂ ಪಿ ತಂಗರಾಜ್ ಅಭ್ಯರ್ಥಿಯಾಗಿದ್ದು, ಅವರು 2008ರ ಚುನಾವಣೆಯಿಂದ ಸ್ಪರ್ಧಿಸುತ್ತಿದ್ದಾರೆ. ಅವರು ಯುವ ಚಳವಳಿಯಲ್ಲಿ ಸಕ್ರಿಯರಾಗಿದ್ದರು ಮತ್ತು ಕೋಲಾರ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು.

ಕಲ್ಬುರ್ಗಿ ಗ್ರಾಮಾಂತರ (ಎಸ್ಸಿ) ಸಿಪಿಐ(ಎಂ) ದೀರ್ಘಕಾಲದಿಂದ ಸ್ಪರ್ಧಿಸುತ್ತಿರುವ ಮತ್ತೊಂದು ಸ್ಥಾನ. ಇದನ್ನು ಕಮಲಾಪುರ ಎಂದು ಕರೆಯಲಾಗುತ್ತಿತ್ತು ಮತ್ತು 2008 ರ ಚುನಾವಣೆಗಾಗಿ ಮರುಸಂಘಟಿಸಲಾಯಿತು. ಕಾಂ ಮಾರುತಿ ಮಾನ್ಪಡೆ, ಹಿರಿಯ ಸಿಪಿಐ(ಎಂ) ಮತ್ತು ರೈತ ಮುಖಂಡ ಕೋವಿಡ್ ಸಾಂಕ್ರಾಮಿಕದಲ್ಲಿ ನಿಧನರಾಗುವವರೆಗೂ ಈ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದರು. ಕಾಂ ಪಾಂಡುರಂಗ ಮಾವಿನಕರ್ ಈ ಬಾರಿ ಅಭ್ಯರ್ಥಿಯಾಗಲಿದ್ದಾರೆ.

ಬೆಂಗಳೂರು ನಗರದ ಪೂರ್ವ ಕೈಗಾರಿಕಾ ಉಪನಗರ ಕೆಆರ್ ಪುರಂ ಕ್ಷೇತ್ರದಲ್ಲೂ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. 'ಆಪರೇಷನ್ ಕಮಲ'ದ ಭಾಗವಾಗಿ ಬಿಜೆಪಿಗೆ ಪಕ್ಷಾಂತರಗೊಂಡು ಸ್ಥಾನಕ್ಕೆ ರಾಜೀನಾಮೆ ನೀಡಿದ 19 ಶಾಸಕರಲ್ಲಿ ಒಬ್ಬರಾಗಿದ್ದ ಬೈರತಿ ಬಸವರಾಜು ಅವರನ್ನು ಆರಿಸಿದ ಕುಖ್ಯಾತಿಯ ಕ್ಷೇತ್ರವಿದು. 2019 ರ ಉಪ ಚುನಾವಣೆಯಲ್ಲಿ ಅವರು ಮರು ಆಯ್ಕೆಯಾದರು. ಈ ಕ್ಷೇತ್ರವು 25,000+ಕಾರ್ಮಿಕರು ಕೆಲಸ ಮಾಡುತ್ತಿದ್ದ ಪ್ರಸಿದ್ಧ ಸಾರ್ವಜನಿಕ ವಲಯದ ದೈತ್ಯ ಐಟಿಐ ಇದ್ದ ಮತ್ತು ಕಾರ್ಮಿಕರ ಕೇಂದ್ರವಾಗಿದ್ದ ಕ್ಷೇತ್ರ. ಈಗ ಐಟಿಐ ಯನ್ನು ಬಹುತೇಕ ಮುಚ್ಚಲಾಗಿದೆ. ಕಾಂ ನಂಜೇಗೌಡ ಅವರು ಐಟಿಐ ಗುತ್ತಿಗೆ ಕಾರ್ಮಿಕರ ಚಳವಳಿಯಲ್ಲಿ ಸಕ್ರಿಯರಾಗಿದ್ದರು ಮತ್ತು ಈಗ ಕಟ್ಟಡ ಕಾರ್ಮಿಕರ ಸಂಘದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದಾರೆ.

ಎಲ್ಲಾ ಅಭ್ಯರ್ಥಿಗಳು 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎಂಬುದನ್ನು ಗಮನಿಸಬಹುದು.

ಇತರ ಪಕ್ಷಗಳ ಸ್ಪರ್ಧೆ

7 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿಪಿಐ ಮುಂದಾಗಿದೆ. ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿಗೆ ಮತ್ತು ಮೇಲುಕೋಟೆಯಲ್ಲಿ ಸರ್ವೋದಯ ಅಭ್ಯರ್ಥಿಗೆ ಬೆಂಬಲ ಘೋಷಿಸಿದ್ದು, ಉಳಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ಘೋಷಿಸಿದೆ. ಸಿಪಿಐ(ಎಂಎಲ್–ಲಿಬರೇಷನ್) 2 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮುಂದಾಗಿದೆ. ಎಸ್ಯುಸಿಐ 13 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಫಾರ್ವರ್ಡ್ ಬ್ಲಾಕ್ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತಿಲ್ಲ.

ಸರ್ವೋದಯ ಪಕ್ಷವು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕೆಲವು ದಲಿತ ಗುಂಪುಗಳ ರಾಜಕೀಯ ವೇದಿಕೆಯಾಗಿ ರೂಪುಗೊಂಡಿತು ಮತ್ತು ಪ್ರಸಿದ್ಧ ಲೇಖಕ ದೇವನೂರ ಮಹಾದೇವ ಸೇರಿದಂತೆ ಕೆಲವು ದಲಿತ ಮತ್ತು ಪ್ರಗತಿಪರ ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು ಅದನ್ನು ಬೆಂಬಲಿಸಿದರು. ಇದು ಮೊದಲು ಸ್ವರಾಜ್ ಇಂಡಿಯಾದೊಂದಿಗೆ ವಿಲೀನಗೊಂಡಿತ್ತು. ಸ್ವರಾಜ್ ಇಂಡಿಯಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ ನಂತರ ಅದು ತನ್ನ ಮೂಲ ಗುರುತನ್ನು ಪುನರುಜ್ಜೀವನಗೊಳಿಸಲು ನಿರ್ಧರಿಸಿತು. ರೈತ ನಾಯಕ ಪುಟ್ಟಣ್ಣಯ್ಯ ಅವರು ಅದರ ಜನಪ್ರಿಯ ನಾಯಕರಾಗಿದ್ದರು ಮತ್ತು 1994 ರಲ್ಲಿ ಪಕ್ಷೇತರರಾಗಿ ಮೇಲುಕೋಟೆ ಕ್ಷೇತ್ರವನ್ನು ಗೆದ್ದಿದ್ದರು. ಅವರು ಸತತವಾಗಿ ಆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದು, 2013 ರಲ್ಲಿ ಆಯ್ಕೆಯಾಗಿದ್ದರು. ಅವರು ಚುನಾವಣೆಗೆ ಮುನ್ನ 2018 ರಲ್ಲಿ ನಿಧನರಾದರು. 2018ರಲ್ಲಿ ಮೇಲುಕೋಟೆಯಲ್ಲಿ ಪುಟ್ಟಣ್ಣಯ್ಯನವರ ಪುತ್ರ ದರ್ಶನ್ ಅವರನ್ನು ಸರ್ವೋದಯ ಕಣಕ್ಕಿಳಿಸಿ ಎರಡನೇ ಸ್ಥಾನ ಪಡೆದಿದ್ದರು. ಅವರನ್ನು ಮತ್ತೆ ಕಣಕ್ಕಿಳಿಸಲಾಗುತ್ತಿದ್ದು, ಈ ಸ್ಥಾನಕ್ಕೆ ಸ್ಪರ್ಧಿಸದಿರಲು ಕಾಂಗ್ರೆಸ್ ನಿರ್ಧರಿಸಿದೆ. ಸರ್ವೋದಯ ಒಟ್ಟು 25 ಸ್ಥಾನಗಳಲ್ಲಿ ಸ್ಪರ್ಧಿಸಲು ಮುಂದಾಗಿದೆ. ಮೋಹನರಾಜ್ ನೇತೃತ್ವದ ಆರ್‌ಪಿಐ 20 ಸ್ಥಾನಗಳಲ್ಲಿ ಸ್ಪರ್ಧಿಸಲು ಮುಂದಾಗಿದೆ.

ಇತರ ಗಮನಾರ್ಹ ಸ್ಪರ್ಧೆಗಳು

ಈಗ ರಾಷ್ಟ್ರೀಯ ಪಕ್ಷವಾಗಿ ಮಾನ್ಯತೆ ಪಡೆದಿರುವ ಆಮ್ ಆದ್ಮಿ ಪಕ್ಷ (ಎಎಪಿ) ಎಲ್ಲಾ 224 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಎಎಪಿ ತನ್ನ 'ಭ್ರಷ್ಟಾಚಾರ–ವಿರೋಧಿ ಮತ್ತು ಉತ್ತಮ ಆಡಳಿತದ' ವೇದಿಕೆಯೊಂದಿಗೆ ತನ್ನ ಅಭಿಯಾನವನ್ನು ಸಾಕಷ್ಟು ಮುಂಚೆಯೇ ಪ್ರಾರಂಭಿಸಿತು. ಮಾಜಿ ಎಡಿಜಿಪಿ ಭಾಸ್ಕರ ರಾವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಅದು ಬಿಂಬಿಸಿತು. ಆದರೆ ನಂತರ ಅವರು ಎಎಪಿಗೆ ರಾಜೀನಾಮೆ ನೀಡಿ, ಬಿಜೆಪಿ ಸೇರಿದರು ಮತ್ತು ಬಿಜೆಪಿ ಟಿಕೆಟ್ ಕೂಡ ಪಡೆದರು! ಎಎಪಿ ಕೆಲವು ನಗರ ಕ್ಷೇತ್ರಗಳಲ್ಲಿ ಒಂದಷ್ಟು ಛಾಪು ಮೂಡಿಸುವ ಸಾಧ್ಯತೆಯಿದೆ.

ಬಿ.ಎಸ್.ಪಿ. 2018 ರ ಚುನಾವಣೆಯಲ್ಲಿ ಎಆ–ಖ ನೊಂದಿಗೆ ಮೈತ್ರಿ ಮಾಡಿಕೊಂಡು 18 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು ಮತ್ತು ಗೆಲುವು ಸಾಧಿಸಿದ ಒಬ್ಬರೇ ಶಾಸಕ ನಂತರ ಬಿಜೆಪಿಗೆ ಸೇರಿದರು. ಇದು ಇನ್ನೂ ತನ್ನ ಯೋಜನೆಯನ್ನು ಅಂತಿಮಗೊಳಿಸಿಲ್ಲ. 2018ರಲ್ಲಿ 3 ಕ್ಷೇತ್ರಗಳಲ್ಲಿ ಎಸ್ಡಿಪಿಐ ಕಣಕ್ಕೆ ಇಳಿದಿದ್ದರೂ ಒಂದನ್ನೂ ಗೆಲ್ಲಲಾಗಲಿಲ್ಲ. ಆದಾಗ್ಯೂ ಅದು ಸ್ಪರ್ಧಿಸಿದ ಸ್ಥಳದಲ್ಲಿ 10.5% ಮತಗಳನ್ನು ಗಳಿಸಿತ್ತು. ಅಲ್ಪಸಂಖ್ಯಾತ ಕೋಮುವಾದವನ್ನು ಪ್ರತಿನಿಧಿಸುವ ಎಸ್ಡಿಪಿಐ ಪಕ್ಷವು ಕಳೆದ ಚುನಾವಣೆಗಳಿಂದ ತನ್ನ ನೆಲೆಯನ್ನು, ಸಂಘ ಬ್ರಿಗೇಡ್ ಮತ್ತು ಬಿಜೆಪಿ ಸರ್ಕಾರದ ಅವಿರತ ಕೋಮು ಧ್ರುವೀಕರಣ ಅಭಿಯಾನದ ಫಲವಾಗಿ, ಗಣನೀಯವಾಗಿ ವಿಸ್ತರಿಸಿದೆ. ಅದು ತನ್ನ ಸ್ಪರ್ಧೆಯನ್ನು ಅಂತಿಮಗೊಳಿಸದಿದ್ದರೂ, ಸಾಕಷ್ಟು ಮುಸ್ಲಿಂ ಜನಸಂಖ್ಯೆಯಿರುವ ಹೆಚ್ಚಿನ ಕ್ಷೇತ್ರಗಳಲ್ಲಿ ಅದು ಸ್ಪರ್ಧಿಸುತ್ತಿದೆ ಎಂದು ತಿಳಿದು ಬಂದಿದೆ. ಅದು ಸಂಭವಿಸಿದಲ್ಲಿ, ಫಲಿತಾಂಶಗಳ ಮೇಲೆ ಗಣನೀಯ ಪರಿಣಾಮ ಬೀರುವ ಸಾಧ್ಯತೆಯಿದೆ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಹೊಸ ಪಕ್ಷವಾಗಿದೆ. ಇದು ಇತ್ತೀಚೆಗೆ ಗಣಿ ಧಣಿ, ಮೊದಲ 'ಆಪರೇಷನ್ ಕಮಲ'ದ ರೂವಾರಿಯಲ್ಲೊಬ್ಬ ಮತ್ತು ಅನೇಕ ಭ್ರಷ್ಟಾಚಾರ ಪ್ರಕರಣಗಳು ಮತ್ತು ಹಗರಣಗಳೊಂದಿಗೆ ಬಿಜೆಪಿಯ ಪ್ರಭಾವಿ ಮಾಜಿ ಸಚಿವ ಜನಾರ್ದನ ರೆಡ್ಡಿ ಅವರು ಸ್ಥಾಪಿಸಿದ ಪಕ್ಷ.. ಬಳ್ಳಾರಿ, ಕೊಪ್ಪಳ, ರಾಯಚೂರು, ವಿಜಯನಗರ ಮುಂತಾದ ನಾಲ್ಕು ಜಿಲ್ಲೆಗಳಲ್ಲಿ ಅವರ ಪ್ರಭಾವ ಆಳವಾಗಿಯೇ ಇದೆ. ಅವರ ಉದ್ದೇಶಗಳು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ತನ್ನ ರಾಜಕೀಯ ಬೆಂಬಲವನ್ನು ಪ್ರದರ್ಶಿಸಿ ಕನಿಷ್ಠ ಕಿಂಗ್ ಮೇಕರ್ ಆಗಿ ರಾಜಕೀಯ ಮರುಪ್ರವೇಶ ಮಾಡುವುದು ಅವರ ಉದ್ದೇಶವಿದ್ದಂತಿದೆ. ಅವರು ತಮ್ಮ ಪಕ್ಷದ ಸ್ಪರ್ಧೆಯನ್ನೂ ಇನ್ನೂ ಅಂತಿಮಗೊಳಿಸಿಲ್ಲ. ಆದರೆ ಅವರ ಪಕ್ಷದ ಸ್ಪರ್ಧೆಯು ಈ ನಾಲ್ಕು ಜಿಲ್ಲೆಗಳ ಫಲಿತಾಂಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

ಎಎಪಿ ತೊರೆದ ಕಾರ್ಯಕರ್ತನಿಂದ ಆರಂಭವಾದ ಕರ್ನಾಟಕ ರಾಷ್ಟ್ರ ಸಮಿತಿ ಮತ್ತೊಂದು ಹೊಸ ಪಕ್ಷವಾಗಿದ್ದು, ಭ್ರಷ್ಟಾಚಾರ ವಿರೋಧ ವನ್ನು ತನ್ನ ಪ್ರಮುಖ ಗುರಿಯಾಗಿಟ್ಟುಕೊಂಡು ಸ್ಪರ್ಧೆಗೆ ಇಳಿದಿದೆ. ಇದು ಆಗಲೇ 110 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ!

ಎಲ್ಲವೂ ಪ್ರಧಾನಿ ಕೇಂದ್ರಿತ

ಅಭಿವೃದ್ಧಿ ಯೋಜನೆಗಳ ಉದ್ಘಾಟನೆ: ಪ್ರಧಾನಿ (ಯೋಜನಾ ಮಂತ್ರಿ ಇಲ್ಲ)
ರೈಲು ಯೋಜನೆಗಳ ಉದ್ಘಾಟನೆ: ಪ್ರಧಾನಿ (ರೈಲು ಮಂತ್ರಿ ಇಲ್ಲ)
ಹುಲಿಗಣತಿ ಬಿಡುಗಡೆ: ಪ್ರಧಾನಿ–(ಪರಿಸರ ಮಂತ್ರಿ ಇಲ್ಲ)
ಹೆದ್ದಾರಿ ಉದ್ಘಾಟನೆ: ಪ್ರಧಾನಿ (ಸಾರಿಗೆ ಮಂತ್ರಿ ಇಲ್ಲ)
ವಿಮಾನ ನಿಲ್ದಾಣ ಉದ್ಘಾಟನೆ: ಪ್ರಧಾನಿ (ವಿಮಾನ ಮಂತ್ರಿ ಇಲ್ಲ)
ಉದ್ಯೋಗ ಮೇಳ ಉದ್ಘಾಟನೆ: ಪ್ರಧಾನಿ
ಏರೋ ಇಂಡಿಯಾ ಉದ್ಘಾಟನೆ: ಪ್ರಧಾನಿ
ಎಕ್ಸಪ್ರೆಸ್ ರಸ್ತೆ ಉದ್ಘಾಟನೆ: ಪ್ರಧಾನಿ
ಹೊಸ ಕ್ಯಾಂಪಸ್ ಉದ್ಘಾಟನೆ: ಪ್ರಧಾನಿ (ಶಿಕ್ಷಣ ಮಂತ್ರಿ ಇಲ್ಲ)
ಗ್ಲೋಬಲ್ ಇನವೆಸ್ಟರ್ಸ್ ಮೀಟ್ ಉದ್ಘಾಟನೆ: ಪ್ರಧಾನಿ
ಎಚ್.ಎ.ಎಲ್. ಹೆಲಿಕಾಪ್ಟರ್ ಉದ್ಘಾಟನೆ : ಪ್ರಧಾನಿ
ಇಂಡಿಯಾ ಎನರ್ಜಿ ವೀಕ್ ಉದ್ಘಾಟನೆ: ಪ್ರಧಾನಿ
ಆಟೋಟಗಳ ಉದ್ಘಾಟನೆ : ಪ್ರಧಾನಿ
ಉದ್ಯೋಗ ಪತ್ರ ವಿತರಣೆ : ಪ್ರಧಾನಿ
ರಾಷ್ಟ್ರೀಯ ಯುವ ಮಹೋತ್ಸವ ಉದ್ಘಾಟನೆ: ಪ್ರಧಾನಿ

ಇವೆಲ್ಲವುಗಳ ಜೊತೆಗೆ–

ಪ್ರಧಾನ ಮಂತ್ರಿ ಆವಾಸ್ ಯೋಜನಾ
ಪ್ರಧಾನ ಮಂತ್ರಿ ಸುರಕ್ಷಾ ಯೋಜನಾ
ಪ್ರಧಾನ ಮಂತ್ರಿ ಪೋಷಣ್ ಯೋಜನಾ
ಪ್ರಧಾನ ಮಂತ್ರಿ ಮತ್ಸ್ಯ ಸಂಪದಾ ಯೋಜನ
ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ ನಿಧಿ ಯೋಜನಾ
ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಮಹಾಭಿಯಾನ್
ಪ್ರಧಾನ ಮಂತ್ರಿ ಶ್ರಮ ಯೋಗಿ ಯೋಜನ
ಪ್ರಧಾನ ಮಂತ್ರಿ ಅನ್ನದಾತಾ ಸಂರಕ್ಷಣಾ ಅಭಿಯಾನ
ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಯೋಜನಾ
ಪ್ರಧಾನ ಮಂತ್ರಿ ಜನವಿಕಾಸ ಯೋಜನಾ
ಪ್ರಧಾನ ಮಂತ್ರಿ ಮಾತೃತ್ವ ವಂದನಾ ಯೋಜನಾ
ಪ್ರಧಾನ ಮಂತ್ರಿ ಉಜ್ವಲಾ ಯೋಜನ
ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನಾ
ಪ್ರಧಾನ ಮಂತ್ರಿ ಕೃಷಿ ಸಿಂಚೈ ಯೋಜನಾ
ಪ್ರಧಾನ ಮಂತ್ರಿ ಮುದ್ರಾ ಯೋಜನ
ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನಾ
ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ ಯೋಜನ
ಪ್ರಧಾನ ಮಂತ್ರಿ ಜನ ಧನ್ ಯೋಜನಾ ಇತ್ಯಾದಿ

ದೇಶಕ್ಕೆ ಪ್ರಧಾನಿಯೊಬ್ಬರು ಇದ್ದರೆ ಸಾಕು, ಉಳಿದ ಮಂತ್ರಿಗಳು ಯಾಕೆ ಬೇಕು? ಇದು ನಮ್ಮ ಪ್ರಜಾಪ್ರಭುತ್ವದ ಕತೆ!

(ಸಾಮಾಜಿಕ ಮಾಧ್ಯಮ ದಿಂದ)

ಕೆ.ಆರ್.ಪುರಂ: ಸಿಪಿಐ(ಎಂ)ನಿಂದ ಚುನಾವಣಾ ಪ್ರಚಾರದ ಉದ್ಘಾಟನೆ...

ಪುಟ 8 ರಿಂದ

ಹಸ್ತಾಂತರಿಸಿದರು.

ಅಭಿಯಾನದ ಉದ್ಘಾಟನೆಗೂ ಮುನ್ನ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಸಿಪಿಐ–ಎಂ ಸ್ಪರ್ಧಿಸುತ್ತಿರುವ ನಾಲ್ಕು ಕ್ಷೇತ್ರಗಳಲ್ಲಿ ಕೆಆರ್ ಪುರಂ ಒಂದಾಗಿದೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಹಿಂದಿನಿಂದಲೂ ಸ್ಪರ್ಧಿಸುತ್ತಿದೆ. ಈ ಕ್ಷೇತ್ರವು ಬೆಂಗಳೂರು ನಗರದ ಪೂರ್ವ ಕೈಗಾರಿಕಾ ಉಪನಗರವನ್ನು ಒಳಗೊಂಡಿದೆ. ಅಭ್ಯರ್ಥಿ ನಂಜೇಗೌಡ ಅವರು ಐಟಿಐ ಗುತ್ತಿಗೆ ಕಾರ್ಮಿಕರ ಚಳವಳಿಯಲ್ಲಿ ಸಕ್ರಿಯರಾಗಿದ್ದರು ಮತ್ತು ಈಗ ಕಟ್ಟಡ ಕಾರ್ಮಿಕರ ಸಂಘದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದಾರೆ.





ಸಂಸತ್ತು ಕಣ್ಮರೆಯಾಗುವ ಅಪಾಯ

'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ, ಎಂದು ಕರೆಯಲ್ಪಡುವ ಸಂಸತ್ತು ಭಾರತದಲ್ಲಿ ಸರ್ವೋಚ್ಚ ಶಾಸಕಾಂಗ ಸಂಸ್ಥೆಯಾಗಿದೆ. ಬಹುಮತ ಹೊಂದಿರುವ ಆಡಳಿತ ಪಕ್ಷ (ಅಥವಾ ರಂಗ) ತನಗೆ ಬೇಕಾದ ನಿರ್ಧಾರಗಳನ್ನು ಮಾಡಬಹುದಾದರೂ, ಭಾರತೀಯ ಸಂಸದೀಯ ವ್ಯವಸ್ಥೆಯು ವಿರೋಧದ ಧ್ವನಿಗಳಿಗೆ ಅವಕಾಶಗಳನ್ನು ಖಾತ್ರಿಪಡಿಸುವ ನಿಯಮಗಳೊಂದಿಗೆ ರೂಪಿಸಲಾಗಿದೆ. ದೈತ್ಯಾಕಾರದ ಶಕ್ತಿಗಳು ಎಂದು ಕರೆಯಲ್ಪಡುವ ಮೂಲಕ ಸ್ಥಾಪಿಸಲಾದ ಆಡಳಿತಗಳು ಸಹ, ಸ್ವತಂತ್ರ ಭಾರತದ ಮೊದಲ 40–45 ವರ್ಷಗಳಲ್ಲಿ ಸಂಸತ್ತಿನಲ್ಲಿ ಪ್ರತಿಪಕ್ಷಗಳ ಧ್ವನಿಯನ್ನು ಹತ್ತಿಕ್ಕುವ ಘಟನೆಗಳು ಅಪರೂಪ. ಆದರೆ, ಬಾಬರಿ ಮಸೀದಿ ಬಿಕ್ಕಟ್ಟಿನ ನಂತರ, ಸದನದ ಕಲಾಪಗಳನ್ನು ಸ್ಥಗಿತಗೊಳಿಸುವ ಪದ್ಧತಿಯನ್ನು ಅನುಸರಿಸುತ್ತಿರುವ ಪಕ್ಷ ಭಾರತೀಯ ಜನತಾ ಪಕ್ಷವಾಗಿದೆ. ಕಲಾಪವನ್ನು ತಡೆದದ್ದು ವಿರೋಧ ಪಕ್ಷವಾದ್ದರಿಂದ, ಆಡಳಿತ ಪಕ್ಷ ಏನು ಮಾಡಲಿದೆ ಎಂಬ ನಿರೀಕ್ಷೆ ಆರಂಭದಲ್ಲಿತ್ತು. ಆದರೆ ಅಧಿಕಾರದಲ್ಲಿದ್ದರೂ, ಇಲ್ಲದಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಸಂಸದೀಯ ಪ್ರಜಾಸತ್ತೆಯನ್ನು ಸ್ತಬ್ಧಗೊಳಿಸುವ ಪರಿಪಾಠವನ್ನು ಬಿಜೆಪಿ ಮುಂದುವರಿಸಿದೆ. ಆ ಪಕ್ಷದ ನೇತೃತ್ವದ ಸರ್ಕಾರ ನಡೆಯುತ್ತಿರುವ 16 ಮತ್ತು 17ನೇ ಸಂಸತ್ತಿನ ಚಟುವಟಿಕೆಗಳ ಅಂಕಿಅಂಶಗಳು ಅದನ್ನು ಸಾಬೀತುಪಡಿಸುತ್ತಿವೆ. ಆ ಅನುಕ್ರಮದಲ್ಲಿ ಸಂಸತ್ತಿನ ಕೊನೆಯ ಬಜೆಟ್ ಅಧಿವೇಶನದ ಬಗ್ಗೆ ಕೆಲವು ಮಾಹಿತಿಗಳು, ಸಂಸದೀಯ ಪ್ರಜಾಪ್ರಭುತ್ವವನ್ನು ಅತಂತ್ರ ಸ್ಥಿತಿಯಲ್ಲಿ ಇಡಲು, ಬಿಜೆಪಿಯವರು ತಮ್ಮ ಇಚ್ಛೆಯಂತೆ ಸರ್ಕಾರ ನಡೆಸುವಲ್ಲಿ ಎಷ್ಟರಮಟ್ಟಿಗೆ ಮುಂದೆ ಹೋಗಿದ್ದಾರೆ ಎಂಬುದು ಇದರಿಂದ ತಿಳಿಯುತ್ತದೆ.

ಬಜೆಟ್ ಅಧಿವೇಶನದ ನಿಗದಿತ ಸಮಯದಲ್ಲಿ ಲೋಕಸಭೆಯ ಶೇ.33, ರಾಜ್ಯಸಭೆಯ ಶೇ. 24 ಮಾತ್ರ ಕಾರ್ಯನಿರ್ವಹಿಸಿವೆ. ಇದಲ್ಲದೆ, ಎರಡನೇ ಅಧಿವೇಶನದ 15 ದಿನಗಳಲ್ಲಿ ಲೋಕಸಭೆಯಲ್ಲಿ ಶೇ. 5 ಮತ್ತು ರಾಜ್ಯಸಭೆಯ ಶೇ.6 ಮಾತ್ರ ಕಾರ್ಯನಿರ್ವಹಿಸಿವೆ. ಹಣಕಾಸು ಮಸೂದೆಗಳನ್ನು ಹೊರತುಪಡಿಸಿ ಇಡೀ ಅಧಿವೇಶನದಲ್ಲಿ ಕೇವಲ ಒಂದು ಮಸೂದೆಯನ್ನು ಅಂಗೀಕರಿಸಲಾಯಿತು. 3 ಮಸೂದೆಗಳನ್ನು ಮಂಡಿಸಲಾಯಿತು. ಈ ಬಗ್ಗೆ ಯಾವುದೇ ಚರ್ಚೆ ಇಲ್ಲ, ಶಾಸ್ತ್ರೋಕ್ತವಾಗಿ ಸಂಸತ್ತಿನ ಸಭೆ ನಡೆದರೂ ಅದು ಪರೋಕ್ಷವಾಗಿ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ಕಾರ್ಯವಾಗಿದೆ.

ಶೇ. 79ರಷ್ಟು ಮಸೂದೆಗಳು ಚರ್ಚೆಯಿಲ್ಲದೆ ಅಂಗೀಕಾರ

ಮೋದಿಯವರ 9 ವರ್ಷಗಳ ಅಧಿಕಾರದಲ್ಲಿ, ಕಳೆದ 7 ವರ್ಷಗಳಲ್ಲಿ ಬಜೆಟ್ ಗೆ ಸಂಬಂಧಿಸಿದ ಶೇ. 79ರಷ್ಟು ಮಸೂದೆಗಳು ಚರ್ಚೆಯಿಲ್ಲದೇ ಅಂಗೀಕಾರಗೊಂಡಿವೆ. ಈ ಸಭೆಗಳ ಸರಣಿಯಲ್ಲಿ ಎಲ್ಲಾ ಸಚಿವಾಲಯಗಳ 42 ಲಕ್ಷ ಕೋಟಿ ರೂಪಾಯಿಗಳ ವೆಚ್ಚವನ್ನು ನಿರ್ಧರಿಸುವ ಮಸೂದೆಗಳು ಚರ್ಚೆಯಿಲ್ಲದೆ ಅಂಗೀಕರಿಸಲ್ಪಟ್ಟವು. ಲೋಕಸಭೆಯಲ್ಲಿ ಏಳು ಸಚಿವಾಲಯಗಳ ಕಾರ್ಯಕ್ಷಮತೆ ಕುರಿತು ಚರ್ಚಿಸಲು ಸಭೆ ನಿಗದಿಯಾಗಿತ್ತು. ಆದರೆ ಯಾವುದನ್ನೂ ಚರ್ಚಿಸಿಲ್ಲ. ಈ ಅಧಿವೇಶನದಲ್ಲಿ ಅಧ್ಯಕ್ಷರ ಭಾಷಣಕ್ಕೆ ಧನ್ಯವಾದ ನಿರ್ಣಯದ ಬಗ್ಗೆ ಮಾತ್ರ ಚರ್ಚೆಯಾಗಿದೆ.

ಕಾರ್ಯವಿಧಾನಗಳಲ್ಲಿ ಮುಂದೂಡಿಕೆ ನಿರ್ಣಯವು ಯೋಜಿತ ಕೆಲಸವನ್ನು ಮುಂದೂಡುವ ಮತ್ತು ತುರ್ತು ವಿಷಯವನ್ನು ಚರ್ಚಿಸುವ ಒಂದು ಮಾರ್ಗವಾಗಿದೆ. ಸಣ್ಣ ಚರ್ಚೆಯು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯವನ್ನು ಚರ್ಚಿಸುವ ಒಂದು ವಿಧಾನವಾಗಿದೆ. ಲೋಕಸಭೆಯಲ್ಲಿ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಕುರಿತು ಹೆಚ್ಚಿನ ವಿವರಗಳನ್ನು ಪಡೆಯಲು ಸ್ಥಾಪಿಸಲಾದ ಅಭ್ಯಾಸವು ಅರ್ಧ ಗಂಟೆ ಚರ್ಚೆಯಾಗಿದೆ. ನೀಡಿದ ಉತ್ತರಗಳ ಕುರಿತು ಹೆಚ್ಚಿನ ವಿವರಗಳನ್ನು ಪಡೆಯಲು ಸ್ಥಾಪಿಸಲಾದ ಕಾರ್ಯವಿಧಾನವಾಗಿದೆ. ಈ ಸಂಸತ್ ಅಧಿವೇಶನದ ಸರಣಿಯಲ್ಲಿ ಇವರನ್ನು ಯಾರೂ ಗೌರವಿಸಲಿಲ್ಲ. ಈ ಲೋಕಸಭೆಯಲ್ಲಿ, ಅಂದರೆ 4 ವರ್ಷಗಳಲ್ಲಿ ಕೇವಲ 11 ಸಣ್ಣ ಚರ್ಚೆಗಳು ಮತ್ತು ಕೇವಲ ಒಂದು ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಿರುವುದು, ಸಂಸತ್ತು ನಿರ್ಧಾರ ಕೈಗೊಳ್ಳುವ ಸ್ಥಳವಲ್ಲ, ಬೇರೆಡೆ (ನಾಗ್ಪುರ?) ಮಾಡಿದ ನಿರ್ಧಾರಗಳನ್ನು ಕಾನೂನುಬದ್ಧವಾಗಿಸುವ ಸ್ಥಳವಾಗಿ ಬಳಸಲಾಗುತ್ತದೆ ಎಂದು ಇದು ತಿಳಿಸುತ್ತದೆ. ಈ ಮುಂದೂಡಿಕೆ ನಿರ್ಣಯಕ್ಕೆ ಸಮಾನಾಂತರವಾಗಿ, ರಾಜ್ಯಸಭೆಯು ಸ್ಪೀಕರ್ ಅನುಮತಿಯೊಂದಿಗೆ ನಿಯಮ ಸಂಖ್ಯೆ 267 ರ ಪ್ರಕಾರ ನಿಗದಿತ ಸಭೆಗಳ ನಡುವೆ ಪ್ರಮುಖ ವಿಷಯಗಳನ್ನು ಚರ್ಚಿಸಬಹುದು. ಈ ಅಧಿವೇಶನದಲ್ಲಿಯೇ 150ಕ್ಕೂ ಹೆಚ್ಚು ಬೇಡಿಕೆಗಳನ್ನು ಮುಂದಿಟ್ಟರೂ ಯಾವುದಕ್ಕೂ ಅವಕಾಶ ನೀಡಿಲ್ಲ.

ಲೋಕಸಭೆಯು ಪ್ರಶ್ನೋತ್ತರ ಸಮಯಕ್ಕೆ ನಿಗದಿಪಡಿಸಿದ ಶೇ. 19 ರಷ್ಟು ಮತ್ತು ರಾಜ್ಯಸಭೆ ಕೇವಲ ಶೇ. 9ರಷ್ಟು ಸಮಯವನ್ನು ಬಳಸಿಕೊಂಡಿದೆ. ಸಂಸತ್ತಿನಲ್ಲಿ ಎತ್ತಲಾದ ಪ್ರಶ್ನೆಗಳಲ್ಲಿ ನಕ್ಷತ್ರ ಚಿಹ್ನೆಯಿಂದ ಗುರುತಿಸಲಾದ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಬಹುದು. ನಕ್ಷತ್ರ ಚಿಹ್ನೆಯಿಂದ ಗುರುತಿಸದ ಪ್ರಶ್ನೆಗಳಿಗೆ ಮಾತ್ರ ಲಿಖಿತ ಉತ್ತರಗಳನ್ನು ನೀಡಲಾಗುವುದು. ಆದಾಗ್ಯೂ, ನಕ್ಷತ್ರ ಚಿಹ್ನೆಯಿಂದ ಗುರುತಿಸಲಾದ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಬಹುದು ಮತ್ತು ಹೆಚ್ಚಿನ ಸ್ಪಷ್ಟೀಕರಣಗಳನ್ನು ಪಡೆಯಬಹುದು. ಅಂತಹ ಸದಸ್ಯರಿಗೂ ಸಚಿವರು ಉತ್ತರ ನೀಡಬೇಕು. ಈ ಅಧಿವೇಶನದಲ್ಲಿ ಶೇ. 7ರಷ್ಟು ಪ್ರಶ್ನೆಗಳಿಗೆ ಮಾತ್ರ ಉತ್ತರ ಸಿಕ್ಕಿರುವುದು ಸದಸ್ಯರಿಗೆ ಸಮಜಾಯಿಷಿ ನೀಡಲು ಸರ್ಕಾರ ಭಯಪಡುತ್ತಿದೆ ಎಂಬುದನ್ನು ತೋರಿಸುತ್ತದೆ.

ಇವುಗಳ ಹೊರತಾಗಿ, ಈ ಆಡಳಿತವು ಸಾಧ್ಯವಾದಷ್ಟು ಪರ್ಯಾಯ ಪಕ್ಷಗಳಿಗೆ ಸ್ಥಾನಗಳನ್ನು ನೀಡುವ ಸಂಪ್ರದಾಯಗಳನ್ನು ಅನುಸರಿಸಲು ನಿರಾಕರಿಸುತ್ತದೆ. ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಅನ್ನು ಸಾಮಾನ್ಯವಾಗಿ ಆಡಳಿತ ಪಕ್ಷದ ಹೊರಗಿನವರು (ಸಾಮಾನ್ಯವಾಗಿ ವಿರೋಧ ಪಕ್ಷದಿಂದ) ಆಯ್ಕೆ ಮಾಡುತ್ತಾರೆ. ಈ ಲೋಕಸಭೆಯ 5 ವರ್ಷಗಳ ಅವಧಿಯ ನಾಲ್ಕು ವರ್ಷಗಳು ಪೂರ್ಣಗೊಂಡಿದ್ದರೂ, ಇಲ್ಲಿಯವರೆಗೆ ಉಪಾಧ್ಯಕ್ಷರ ಆಯ್ಕೆಯಾಗಿಲ್ಲ. ಸುಪ್ರೀಂ ಕೋರ್ಟ್ ಈ ವರ್ಷದ ಫೆಬ್ರವರಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸ್ವೀಕರಿಸಿತು ಮತ್ತು ಭಾರತ ಸರ್ಕಾರಕ್ಕೆ ವಿವರಣೆಯನ್ನು ಕೇಳಿ, ಎರಡು ವಾರಗಳ ಕಾಲಾವಕಾಶ ನೀಡಿತು. ಆದರೆ ಇಲ್ಲಿಯವರೆಗೆ ಅದು ಹಾಗೆಯೇ ಬಾಕಿ ಉಳಿದಿದೆ. ಈ ಹಿಂದೆ 12ನೇ ಲೋಕಸಭೆಯಲ್ಲಿ ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಆಯ್ಕೆಯನ್ನು ಬಹಳ ಕಾಲ ತಪ್ಪಿಸಲಾಗಿತ್ತು. ಅದೂ ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾರದಲ್ಲಿ. ಕಾಂಗ್ರೆಸ್ನ ಪಿಎಂ ಸಯೀದ್ ಅವರು ಮಾರ್ಚ್ 10, 1998 ರಿಂದ ಏಪ್ರಿಲ್ 26, 1999 ರವರೆಗೆ ಲೋಕಸಭೆಯ ಉಪ ಸ್ಪೀಕರ್ ಆಗಿ ಆಯ್ಕೆಯಾದರು, ಒಂಬತ್ತು ತಿಂಗಳ ನಂತರ ಆಯ್ಕೆಯಾದ ಅವರು ಸರಿಸುಮಾರು ಹದಿಮೂರೂವರೆ ತಿಂಗಳ ಕಾಲ ಸೇವೆ ಸಲ್ಲಿಸಿದರು.

ಐದು ವರ್ಷಗಳಲ್ಲಿ ಕೇವಲ 331 ದಿನಗಳ ಕಲಾಪ

ಮೋದಿಯವರ ಮೊದಲ 5 ವರ್ಷಗಳ ಆಡಳಿತದ 16 ನೇ ಲೋಕಸಭೆಯು, ಭಾರತೀಯ ಇತಿಹಾಸದಲ್ಲಿ ಪೂರ್ಣ 5 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಲೋಕಸಭೆಗಳಲ್ಲಿ ಅತ್ಯಂತ ಕಡಿಮೆ ಅಧಿವೇಶನದ ದಿನಗಳನ್ನು ಹೊಂದಿತ್ತು. 5 ವರ್ಷಗಳಲ್ಲಿ ಇದು ಕೇವಲ 331 ದಿನಗಳನ್ನು ಸಂಗ್ರಹಿಸಿದೆ. ಆದರೆ, ಪ್ರಸ್ತುತ 17ನೇ ಲೋಕಸಭೆಯು 4 ವರ್ಷಗಳ ಅವಧಿಯನ್ನು ಪೂರ್ಣಗೊಳಿಸುವ ಹಂತದಲ್ಲಿದ್ದರೂ, ಇದುವರೆಗೆ 230 ದಿನಗಳ ಕಾಲ ಮಾತ್ರ ಅಧಿವೇಶನ ನಡೆಸಿದೆ. ಇದು ವರ್ಷಕ್ಕೆ ಸರಾಸರಿ 58 ದಿನಗಳು ಆಗಿರುವುದರಿಂದ, ಇನ್ನುಳಿದ ಒಂದು ವರ್ಷವೂ ಇಷ್ಟೇ ಪ್ರಮಾಣದಲ್ಲಿ ಅಧಿವೇಶನ ಸೇರಿದರೂ 290 ದಿನಗಳನ್ನು ದಾಟುವುದು ಕಷ್ಟ. ಹಾಗಾಗಿ ಈ ಲೋಕಸಭೆ ಭಾರತದ ಇತಿಹಾಸದಲ್ಲೇ ಅತ್ಯಂತ ಕಡಿಮೆ ದಿನಗಳನ್ನು ಹೊಂದಿರುವ ಕುಖ್ಯಾತಿ ಪಡೆಯಲಿದೆ. ಅದೇನೆಂದರೆ, ರಾಷ್ಟ್ರೀಯ ಅಧಿವೇಶನ ಸೇರಿದರೆ, ವಿರೋಧ ಪಕ್ಷಗಳಿಗೆ ಅಲ್ಲಿ ಮಾತನಾಡಲು ಅವಕಾಶ ನೀಡುವುದೇ? ಮೋದಿಯವರು ಮಾಧ್ಯಮದವರನ್ನು ಭೇಟಿಯಾಗುವುದನ್ನು ತಪ್ಪಿಸಿದಂತೆಯೇ, ಸಂಸತ್ತಿನ ಅಧಿವೇಶನದ ದಿನಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, ಸಂಸತ್ ಸದಸ್ಯರ–ಅಂದರೆ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳುವುದು ಎಂದರ್ಥ. ವಿರೋಧ ಪಕ್ಷವಾಗಿದ್ದಾಗ, ಜನಕಲ್ಯಾಣಕ್ಕೆ ಸಂಬಂಧಪಡದ ಬಾಬರಿ ಮಸೀದಿಯಂತಹ ಸುದ್ದಿಗಳನ್ನು ಚರ್ಚಿಸಲು ಕೇಳಿ, ಬಿಜೆಪಿಯವರು ಸದನಕ್ಕೆ ತಡೆ ಒಡ್ಡಿದರು. ಅಧಿಕಾರಕ್ಕೆ ಬಂದ ನಂತರ, ಜನರ ಸಮಸ್ಯೆಗಳನ್ನು ಚರ್ಚಿಸುವ ಸದಸ್ಯರ ವಿನಂತಿಗಳನ್ನು ಸ್ವೀಕರಿಸಲು ನಿರಾಕರಿಸುವುದು, ಅದಕ್ಕಾಗಿ ಧ್ವನಿ ಎತ್ತುವವರನ್ನು 'ಅಧಿವೇಶನ ನಡೆಯಲು ಬಿಡುತ್ತಿಲ್ಲ' ಎಂದು ಆರೋಪಿಸುವುದು, ಈ ಎರಡೂ ಮಾರ್ಗಗಳು ಜನರ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುವುದನ್ನು ತಪ್ಪಿಸುತ್ತವೆ, ಅವರನ್ನು ನಿರ್ಬಂಧಿಸುವ ಮೂಲಕ, ಇದು ಉದ್ದೇಶಪೂರ್ವಕವಾಗಿ ತಮ್ಮ ಅಥವಾ ಕೆಲವು ಖಾಸಗಿ ಉದ್ಯೋಗದಾತರ ಅನುಕೂಲಕ್ಕಾಗಿ ಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ, ಬಂಡವಾಳಶಾಹಿಗಳ ಲಾಭಕ್ಕಾಗಿ ತಂತ್ರಗಳನ್ನು ಚಾತುರ್ಯದಿಂದ ಜಾರಿಗೊಳಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಭಾರತೀಯ ಪ್ರಜಾಪ್ರಭುತ್ವದ ಅತ್ಯುನ್ನತ ಆಶಾಕಿರಣವಾಗಿರುವ ಸಂಸತ್ತು ಕಣ್ಮರೆಯಾಗುವ ಅಪಾಯದಲ್ಲಿದೆ ಎಂಬುದನ್ನು ಮನಗಾಣಬೇಕಿದೆ.

ಕೊಡುಗೆ–ತೀಕದೀರ್

ಅನು–ಸಿಚಿ

ಕರ್ನಾಟಕದ ಆರ್ಥಿಕತೆ: ಜನಗಳ ಹಕ್ಕೊತ್ತಾಯಗಳೇನು... ಪುಟ 6 ರಿಂದ

ಪ್ರಧಾನವಾಗಿಯೇ ನಡೆದಿದೆ. ಪ್ರಜ್ಞಾಪೂರ್ವಕವಾಗಿ ಇದನ್ನು ಮಹಿಳಾ ಸಂದಿಯನ್ನಾಗಿ ಮಾಡಬೇಕು. ಇದೇ ರೀತಿಯಲ್ಲಿ ದಲಿತ–ಆದಿವಾಸಿಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಬೇಕು. ರಾಜ್ಯದಲ್ಲಿನ ಒಟ್ಟು ದುಡಿಮೆಗಾರರಲ್ಲಿ (278.72 ಲಕ್ಷ) ಭೂರಹಿತರ ಪ್ರಮಾಣ ಶೇ. 25. ಆದರೆ, ದಲಿತರು ಮತ್ತು ಆದಿವಾಸಿಗಳಲ್ಲಿ ಇವರ ಪ್ರಮಾಣ ಶೇ. 40ಕ್ಕಿಂತ ಅಧಿಕವಾಗಿದೆ.


ಸಕಾರಾತ್ಮಕ ತಾರತಮ್ಯ ನೀತಿಯ ಮೂಲಕ ಚಾರಿತ್ರಿಕ ಪ್ರತ್ಯೇಕೀಕರಣವನ್ನು ಎದುರಿಸುತ್ತಿರುವ ಜನವರ್ಗವು ಅಭಿವೃದ್ಧಿಯ ತಿರುಳಾಗಬೇಕು.

(7). ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ನಮಗೆ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವುದು ಸಾಧ್ಯವಾಗಿಲ್ಲ. ಇಂದಿಗೂ ರಾಜ್ಯದಲ್ಲಿ ಶೇ. 40ರಿಂದ 50ರಷ್ಟು ಜನರು ವಸತಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಶೌಚಾಲಯಗಳನ್ನು ವ್ಯವಸ್ಥಿತವಾಗಿ ನೀಡುವುದು ಸಾಧ್ಯವಾಗಿಲ್ಲ. ರಾಜ್ಯದಲ್ಲಿ ಎಲ್ಲ ಪ್ರೌಢಶಾಲೆಗಳಲ್ಲಿ ಬಾಲಕಿಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ನೀಡಬೇಕು.

ಕೊನೆಯದಾಗಿ ಅಭಿವೃದ್ಧಿ ಎಂದರೆ ಬಂಡವಾಳ ಹೂಡಿಕೆ ಮಾತ್ರವಲ್ಲ. ಎಕ್ಸ್‌ಪ್ರೆಸ್ ಹೈವೇಗಳು ಮಾತ್ರವೇ ಅಥವಾ ಇನ್‌ಫ್ರಾಸ್ಟ್ರಕ್ಚರ್ ಎನ್ನುವುದೇ ಅಭಿವೃದ್ಧಿಯಲ್ಲ. ಅಭಿವೃದ್ಧಿ ಎನ್ನುವುದು ಜನರ ಸಮೃದ್ಧ, ಸಮಾನ, ನ್ಯಾಯಯುತ ಬದುಕಿಗೆ ಸಂಬಂಧಿಸಿದ ಸಂಗತಿ. ಅಸಮಾನತೆಯು ದೈತ್ಯಾಕಾರವಾಗಿ ಬೆಳೆಯುತ್ತಿರುವುದನ್ನು ಆಕ್ಸ್‌ಫಾಮ್ ವರದಿಗಳು ಬಿಚ್ಚಿತೋರಿಸುತ್ತಿವೆ. ನಮ್ಮ ಸಂವಿಧಾನದ ಅನುಚ್ಛೇದ 38(2)ರಲ್ಲಿ ವರಮಾನದ ಕೇಂದ್ರೀಕರಣವನ್ನು ತಡೆಯಬೇಕು, ವರಮಾನ ಅಸಮಾನತೆಯನ್ನು ತಗ್ಗಿಸಬೇಕು ಎಂಬ ನಿರ್ದೇಶನವಿದೆ. ಇದನ್ನು ಇಂದು ಸರ್ಕಾರ ಪಾಲಿಸುತ್ತಿಲ್ಲ. ಅಭಿವೃದ್ಧಿಯಲ್ಲಿ ವರಮಾನದ ಏರಿಕೆ ಎಷ್ಟು ಮುಖ್ಯವೋ ವರಮಾನದ ಹಂಚಿಕೆಯೂ ಅಷ್ಟೇ, ಅಥವಾ ಅದಕ್ಕಿಂತ ಒಂದು ತೂಕ ಹೆಚ್ಚು ಮುಖ್ಯ. ಮುಂದಿನ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ನಮ್ಮ ಪ್ರಣಾಳಿಕೆಯಲ್ಲಿನ ಅಂಶಗಳಿಗೆ ಗಮನ ನೀಡಬೇಕು ಎಂದು 'ಕರ್ನಾಟಕ ಆರ್ಥಿಕತೆ: ನಮ್ಮ ಪ್ರಣಾಳಿಕೆ' ಮೂಲಕ ಒತ್ತಾಯಿಸುತ್ತೇವೆ.

ಎನ್‌ಸಿಇಆರ್‌ಟಿ 'ಹಗುರ'ಗೊಳಿಸಿದ್ದು ವಿದ್ಯಾರ್ಥಿಗಳ ಪಾಠಗಳ ಹೊರೆಯನ್ನೋ ಅಥವ ಆಳುವವರ ಪಾಪಪ್ರಜ್ಞೆಯ ಹೊರೆಯನ್ನೋ

ಅಮೃತ ಕಾಲದಲ್ಲಿ ಎನ್‌ಸಿಇಆರ್‌ಟಿ ತುರ್ತು ನಿರ್ಗಮನ



ತುರ್ತು ಪರಿಸ್ಥಿತಿ! ಗಾಂಧೀಜಿಯ ನಂತರ, ಮೌಲಾನಾ ಆಝಾದ್.. ಎನ್‌ಸಿಇಆರ್‌ಟಿ ಪಠ್ಯದಿಂದ ಹೊರಗೆ: ವ್ಯಂಗ್ಯಚಿತ್ರ: ಇರ್ಫಾನ್, ನ್ಯುಸ್‌ಕ್ಲಿಕ್

“ಹಿಂದೂಗಳು ಪ್ರತೀಕಾರಕ್ಕಿಳಿಯಬೇಕು ಎಂದು ಬಯಸುವವರು, ವಿಶೇಷವಾಗಿ ಮುಸ್ಲಿಮರಿಗೆ ಪಾಕಿಸ್ತಾನ ಇರುವಂತೆ ಭಾರತ ಹಿಂದೂಗಳ ದೇಶವಾಗಬೇಕು ಎನ್ನುವವರು ಇದನ್ನು(ಗಾಂಧೀಜಿ ನಿಲುವನ್ನು) ಇಷ್ಟಪಡಲಿಲ್ಲ. ಅವರು ಗಾಂಧೀಜಿ ಮುಸ್ಲಿಮರು ಮತ್ತು ಪಾಕಿಸ್ತಾನದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಆಪಾದಿಸಿದರು. ಈ ಜನ ತಪ್ಪುದಾರಿಯತ್ತ ನಿರ್ದೇಶಿಸಲ್ಪಟ್ಟವರು ಎಂದು ಗಾಂಧೀಜಿ ಯೋಚಿಸಿದರು. ಭಾರತವನ್ನು ಹಿಂದೂಗಳಿಗೆ ಮಾತ್ರ ಎಂದು ಮಾಡುವ ಯಾವುದೇ ಪ್ರಯತ್ನ ಭಾರತವನ್ನು ಧ್ವಂಸ ಮಾಡುತ್ತದೆ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಹಿಂದೂ–ಮುಸ್ಲಿಂ ಐಕ್ಯತೆಗೆ ಅವರ ಅಚಲ ಬದ್ಧತೆ ಹಿಂದೂ ಉಗ್ರಗಾಮಿಗಳನ್ನು ಎಷ್ಟೊಂದು ಉದ್ರೇಕಿಸಿತೆಂದರೆ, ಗಾಂಧೀಜಿಯ ಹತ್ಯೆಗೆ ಅವರು ಹಲವು ಪ್ರಯತ್ನಗಳನ್ನು ಮಾಡಿದರು.”

ಇದು ಎನ್‌ಸಿಇಆರ್‌ಟಿ(ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ) ಪ್ರಕಟಿಸಿದ್ದ 12ನೇ ತರಗತಿಯ ರಾಜಕೀಯಶಾಸ್ತ್ರ ಪಠ್ಯದಲ್ಲಿ “ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ರಾಜಕೀಯ” ಎಂಬ ಅಧ್ಯಾಯದಲ್ಲಿ ಇದ್ದ ವಾಕ್ಯ. ಈ ಪಠ್ಯಪುಸ್ತಕದ ಈ ವರ್ಷದ ಆವೃತ್ತಿಯಲ್ಲಿ ಇದು ಕಾಣೆಯಾಗಿದೆ.

ಅದೇ ಪಠ್ಯಪುಸ್ತಕದಲ್ಲಿ ಕಿತ್ತುಹಾಕಲ್ಪಟ್ಟಿರುವ ಇನ್ನೊಂದು ಪರಿಚ್ಛೇದವನ್ನು ನೋಡಿ:

“ಗಾಂಧೀಜಿಯ ಸಾವು ದೇಶದಲ್ಲಿನ ಕೋಮು ಪರಿಸ್ಥಿತಿಯ ಮೇಲೆ ಸುಮಾರಾಗಿ ಜಾದೂವಿನಂತಹ ಪರಿಣಾಮ ಬೀರಿತು. ದೇಶ ವಿಭಜನೆಗೆ ಸಂಬಂಧಪಟ್ಟ ಕ್ರೋಧ ಮತ್ತು ಹಿಂಸಾಚಾರ ಇದ್ದಕ್ಕಿದ್ದಂತೆ ಇಳಿಯಿತು. ಸರಕಾರ ಕೋಮುವಾದಿ ದ್ವೇಷವನ್ನು ಹರಡುವ ಸಂಘಟನೆಗಳ ಮೇಲೆ ಕಠಿಣ ಕ್ರಮಗಳಿಗಿಳಿಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ ಸಂಘಟನೆಗಳನ್ನು ಸ್ವಲ್ಪ ಸಮಯದ ವರೆಗೆ ನಿಷೇಧಿಸಲಾಯಿತು. ಕೋಮುವಾದಿ ರಾಜಕೀಯ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳಲಾರಂಭಿಸಿತು. ...”(ಒತ್ತು ನಮ್ಮದು).

ಕಳೆದ ವರ್ಷ, ಕೊವಿಡ್ ಕಾಲದಲ್ಲಿ ಮಕ್ಕಳ ಶಿಕ್ಷಣಕ್ಕೆ ಬಂದ ಕಂಟಕದ ಹಿನ್ನೆಲೆಯಲ್ಲಿ ಕೋವಿಡೋತ್ತರ ಕಾಲದಲ್ಲಿ ಮಕ್ಕಳ ಓದಿನ ಹೊರೆಯನ್ನು ಹಗುರಗೊಳಿಸಲೆಂದು ಮತ್ತು 'ತರ್ಕಬದ್ಧ' (ಸಿಲಬಸ್ ರೇಶನಲೈಸೇಷನ್)ಗೊಳಿಸಲೆಂದು ಎನ್‌ಸಿಇಆರ್‌ಟಿ ಶಾಲಾ ಪಠ್ಯಗಳಲ್ಲಿ ಕೆಲವನ್ನು ಕೈಬಿಡುವ ಯೋಜನೆಯನ್ನು ಪ್ರಕಟಿಸಿತ್ತು. ಅದರಲ್ಲಿ ಮೊಗಲ್ ದರ್ಬಾರಿನ ವೃತ್ತಾಂತಗಳು, ಕೈಗಾರಿಕಾ ಕ್ರಾಂತಿ, ಶೀತಲ ಸಮರ ಮತ್ತು ಗುಜರಾತಿನ 2002ರ ಹಿಂಸಾಚಾರಗಳ ಬಗ್ಗೆ ಉಲ್ಲೇಖಗಳನ್ನು ತೆಗೆದು ಹಾಕುವುದಾಗಿ ಪ್ರಕಟಿಸಲಾಗಿತ್ತು.

ಆದರೆ ಈಗ ಮುದ್ರಣಗೊಂಡು ಬಂದಿರುವ ಪುಸ್ತಕಗಳಲ್ಲಿ ಇವಲ್ಲದೆ, ಇನ್ನೂ ಹಲವಾರು ಅಂಶಗಳನ್ನು ಕೈಬಿಡಲಾಗಿದೆ ಎಂದು ಎಪ್ರಿಲ್ 5ರಂದು ಇಂಡಿಯನ್ ಎಕ್ಸ್ ಪ್ರೆಸ್ ಪ್ರಕಟಿಸಿದೆ. ಆಗ ಗಮನಕ್ಕೆ ಬಂದಿರುವ ಇಂತಹ ಕೈಬಿಟ್ಟಿರುವ ಅಂಶಗಳ ಪಟ್ಟಿ ಹೀಗಿದೆ:

- 'ಭಾರತದ ಇತಿಹಾಸದ ವಿಷಯಗಳು–ಭಾಗ 2' ರಲ್ಲಿ “ರಾಜರುಗಳು ಮತ್ತು ರಾಜವೃತ್ತಾಂತಗಳು; ಮೊಗಲ್ ದರ್ಬಾರುಗಳು(ಕ್ರಿಶ. 16–17ನೇ ಶತಮಾನ)” ಎಂಬ ಅಧ್ಯಾಯವನ್ನು 12ನೇ ತರಗತಿ ಪಠ್ಯದಿಂದ ತೆಗೆಯಲಾಗಿದೆ.
- ಅದೇ ತರಗತಿಯ “ಸಮಕಾಲೀನ ವಿಶ್ವರಾಜಕೀಯ”ದಲ್ಲಿ “ಶೀತಲ ಸಮರದ ಯುಗ” ಮತ್ತು “ವಿಶ್ವ ರಾಜಕೀಯದಲ್ಲಿ ಅಮೆರಿಕಾದ ಪ್ರಾಬಲ್ಯ” ಎಂಬ ಅಧ್ಯಾಯಗಳನ್ನು ತೆಗೆಯಲಾಗಿದೆ.
- “ಭಾರತದಲ್ಲಿ ಸ್ವಾತಂತ್ರ್ಯಾನಂತರದ ರಾಜಕೀಯ”ದಲ್ಲಿ “ ತುರ್ತು ಪರಿಸ್ಥಿತಿ ಕುರಿತ ವಿವಾದಗಳು” ಮತ್ತು “ಗುಜರಾತ್ ಗಲಭೆಗಳು” ಅಧ್ಯಾಯಗಳನ್ನು ತೆಗೆಯಲಾಗಿದೆ.
- 11ನೇ ತರಗತಿಯ”ಜಾಗತಿಕ ಇತಿಹಾಸದ ವಿಷಯಗಳು” ಪುಸ್ತಕದ “ಮಧ್ಯ ಇಸ್ಲಾಮಿನ ನಾಡುಗಳು”, “ಸಂಸ್ಕೃತಿಗಳ ಮುಖಾಮುಖಿ” ಅಧ್ಯಾಯಗಳನ್ನು ತೆಗೆಯಲಾಗಿದೆ.
- 8ನೇ ತರಗತಿಯ ಪಠ್ಯಕ್ರಮದಲ್ಲಿ “ಸ್ವಾತಂತ್ರ್ಯಾನಂತರದ ಭಾರತ” ಅಧ್ಯಾಯವನ್ನು ತೆಗೆಯಲಾಗಿದೆ.
- 10ನೇ ತರಗತಿಗೆ, “ಪ್ರಜಾಪ್ರಭುತ್ವ ಮತ್ತು ವೈವಿಧ್ಯತೆ”, “ಜನಪ್ರಿಯ ಹೋರಾಟಗಳು ಮತ್ತು ಆಂದೋಲನಗಳು” ಹಾಗೂ “ಪ್ರಜಾಪ್ರಭುತ್ವದ ಸವಾಲುಗಳು” ಅಧ್ಯಾಯಗಳನ್ನು ತೆಗೆಯಲಾಗಿದೆ.
- 7ನೇ ತರಗತಿಯ ಪಠ್ಯಪುಸ್ತಕದಲ್ಲಿ “ನಮ್ಮ ಹಿಂದಿನ ಕಾಲಗಳು–2”ರಲ್ಲಿದ್ದ ಹುಮಾಯೂನ್, ಶಾಹಜಹಾನ್, ಅಕ್ಬರ್, ಜಹಾಂಗೀರ್ ಮತ್ತು ಔರಂಗಜೇಬ ಈ ಮೊಗಲ ಸಾಮ್ರಾಟರ ಸಾಧನೆಗಳನ್ನು ಉಲ್ಲೇಖಿಸುವ ಎರಡು ಪುಟಗಳ ತಖ್ತೆಯನ್ನು ತೆಗೆಯಲಾಗಿದೆ.
- 6ನೇ ತರಗತಿ “ರಾಜಮನೆತನಗಳು, ರಾಜರುಗಳು ಮತ್ತು ಆರಂಭಿಕ ಗಣತಂತ್ರ” ಎಂಬ ಅಧ್ಯಾಯದಲ್ಲಿ ವರ್ಣಗಳ ಆನುವಂಶಿಕ ಸ್ವರೂಪ, ಅಸ್ಪೃಶ್ಯರೆಂದು ಜನಗಳ ವರ್ಗೀಕರಣ ಮತ್ತು ವರ್ಣ ವ್ಯವಸ್ಥೆಗೆ ತಿರಸ್ಕಾರ ಕುರಿತ ವಾಕ್ಯಗಳನ್ನು ತೆಗೆಯಲಾಗಿದೆ.

('ಐತಿಹಾಸಿಕ” ಬದಲಾವಣೆಗಳು– ಎನ್‌ಸಿಇಆರ್‌ಟಿ ಕೈಬಿಟ್ಟಿರುವುದೇನು? ಬಿಸಿನೆಸ್ ಸ್ಟಾಂಡರ್ಡ್, ಎಪ್ರಿಲ್ 5)

ಹೀಗೆ 'ಹಗುರ'ಗೊಂಡಿರುವ ಇತಿಹಾಸ ಪುಸ್ತಕಗಳನ್ನು ಓದಿ ಈಗಿನ ಹುಡುಗರು– ಮೊಗಲರು ಎನ್ನುವವರು ಇರಲೇ ಇಲ್ಲ, ಆರೆಸ್ಸೆಸ್ ನಿಷೇಧಕ್ಕೆ ಒಳಗಾಗಲೇ ಇಲ್ಲ, ಗುಜರಾತಿನಲ್ಲಿ 2002ರಲ್ಲಿ ಏನೂ ಆಗಿರಲಿಲ್ಲ ಎಂದೆಲ್ಲ ನಂಬಿಕೊಂಡೇ ಬೆಳೆಯುತ್ತಾರೆ ಎಂದಿದ್ದಾರೆ ಒಬ್ಬ ಪತ್ರಕರ್ತರು. (ಲೀಫ್‌ಲೆಟ್, ಎಪ್ರಿಲ್ 5).

'ಇವೆಲ್ಲ “ಮತ್ತೆ–ಮತ್ತೆ ಬರುವ”, “ಅಪ್ರಸ್ತುತ”ವಾದ ವಿಷಯಗಳು, ಆದ್ದರಿಂದಾಗಿ ಕೈಬಿಡಲಾಗಿದೆ, ಇವನ್ನೆಲ್ಲ ಕಳೆದ ವರ್ಷವೇ ಪ್ರಕಟಿಸಿದ್ದೇವೆ, ಈಗೇಕೆ ಗದ್ದಲ' ಎಂದು ಈ ಬಗ್ಗೆ ಕೇಳಿದಾಗ ಎನ್‌ಸಿಇಆರ್‌ಟಿ ನಿರ್ದೇಶಕರು ಹೇಳಿದ್ದಾರಂತೆ. ಅಲ್ಲಿ ಘೋಷಿಸಿರದಿರುವ ಅಂಶಗಳನ್ನು ಕೈಬಿಟ್ಟಿರುವದರ ಬಗ್ಗೆ ಕೇಳಿದಾಗ ಕಣ್ತಪ್ಪಿನಿಂದ ಇರಬಹುದು ಎಂದರಂತೆ.

ಇದಾದ ಮೇಲೆ ಮಾಧ್ಯಮಗಳಲ್ಲಿ ಹೀಗೆ 'ಕಣ್ತಪ್ಪಿನಿಂದ' ಕೈಬಿಟ್ಟ ಅಂಶಗಳ ಬಗ್ಗೆ ಇನ್ನಷ್ಟು ಸುದ್ದಿಗಳು ಪ್ರಕಟವಾಗಿವೆ.

ಭಾರವೆನಿಸಿದ 'ಆಝಾದ್' ಹೆಸರು

ಇವುಗಳಲ್ಲಿ ಇತ್ತೀಚಿನದ್ದೆಂದರೆ, ಭಾರತದ ಮೊದಲ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಮ್ ಆಝಾದ್‌ರವರ ಹೆಸರನ್ನು ಕೈಬಿಟ್ಟಿರುವುದು ಮತ್ತು ಜಮ್ಮು–ಕಾಶ್ಮೀರ ಸ್ವಾಯತ್ತತೆಯ ಆಶ್ವಾಸನೆಯ ಮೇಲೆ ಭಾರತಕ್ಕೆ ಸೇರ್ಪಡೆಯಾದ ಅಂಶವನ್ನು 11ನೇ ತರಗತಿಯ ರಾಜಕೀಯಶಾಸ್ತ್ರ ಪಠ್ಯದಿಂದ ತೆಗೆದು ಹಾಕಿರುವುದು (ದಿ ಹಿಂದು, ಎಪ್ರಿಲ್ 13).

ಈ ಪುಸ್ತಕದ ಹಿಂದಿನ ಆವೃತ್ತಿಯಲ್ಲಿ ಮೊದಲ ಅಧ್ಯಾಯದಲ್ಲಿ ಹೀಗಿತ್ತು–

“ಸಂವಿಧಾನಸಭೆ ವಿವಿಧ ವಿಷಯಗಳ ಮೇಲೆ ಎಂಟು ಪ್ರಮುಖ ಸಮಿತಿಗಳನ್ನು ಹೊಂದಿತ್ತು. ಸಾಮಾನ್ಯವಾಗಿ, ಈ ಸಮಿತಿಗಳ ಅಧ್ಯಕ್ಷತೆಯನ್ನು ಜವಹರಲಾಲ್ ನೆಹರು, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಮೌಲಾನಾ ಆಝಾದ್ ಅಥವಾ ಅಂಬೇಡ್ಕರ್ ವಹಿಸುತ್ತಿದ್ದರು. ಇವರುಗಳು ಹಲವಾರು ವಿಷಯಗಳ ಬಗ್ಗೆ ಪರಸ್ಪರ ಒಮ್ಮತವಿದ್ದ ವ್ಯಕ್ತಿಗಳೇನೂ ಆಗಿರಲಿಲ್ಲ. ಅಂಬೇಡ್ಕರ್ ಕಾಂಗ್ರೆಸ್ ಮತ್ತು ಗಾಂಧಿಯ ಕಟು ವಿಮರ್ಶಕರಾಗಿದ್ದರು, ಅವರು ಪರಿಶಿಷ್ಟ ಜಾತಿಗಳ ಉದ್ಧಾರಕ್ಕೆ ಸಾಕಷ್ಟು ಮಾಡಿಲ್ಲ ಎಂದು ಆಪಾದಿಸುತ್ತಿದ್ದರು. ಪಟೇಲ್ ಮತ್ತು ನೆಹರು ಹಲವು ವಿಷಯಗಳ ಬಗ್ಗೆ ಪರಸ್ಪರ ಭಿನ್ನಮತ ಹೊಂದಿದ್ದರು. ಆದರೂ ಅವರೆಲ್ಲರೂ ಒಟ್ಟಾಗಿ ಕೆಲಸ ಮಾಡಿದರು.”

ಈಗ ಪ್ರಕಟವಾಗಿರುವ 'ಹಗುರ' ಆವೃತ್ತಿಯಲ್ಲಿ ಆಝಾದ್‌ರವರ ಹೆಸರು ಕಾಣೆಯಾಗಿದೆ, 'ಸಾಮಾನ್ಯವಾಗಿ, ಈ ಸಮಿತಿಗಳ ಅಧ್ಯಕ್ಷತೆಯನ್ನು ಜವಹರಲಾಲ್ ನೆಹರು, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಅಥವಾ ಅಂಬೇಡ್ಕರ್ ವಹಿಸುತ್ತಿದ್ದರು' ಎಂದಿದೆ!

ಈ ಪಠ್ಯಪುಸ್ತಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಕಳೆದ ವರ್ಷದ ಪ್ರಕಟಣೆಯಲ್ಲಿ ಹೇಳಲಾಗಿತ್ತು. ಆದರೆ ನಂತರ ಆಝಾದ್‌ರವರ ಹೆಸರು ಬಹಳ ಭಾರವಾಗಿ ಕಂಡಿರಬೇಕು!

ಆಝಾದ್ ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತು ಸ್ವತಂತ್ರ ಭಾರತದ ಆರಂಭದ ಅಡಿಪಾಯ ಹಾಕುವಲ್ಲಿ ಮಹತ್ವದ ಪಾತ್ರ ವಹಿಸಿದವರು. ಮೊದಲ ಶಿಕ್ಷಣ ಮಂತ್ರಿಯಾಗಿ 14 ವರ್ಷದ ವರೆಗಿನ ಮಕ್ಕಳಿಗೆ ಪುಕ್ಕಟೆ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮುಂತಾದ ಪ್ರಮುಖ ಪರಿಕಲ್ಪನೆಗಳನ್ನು ರೂಪಿಸುವಲ್ಲಿ ಮಾತ್ರವಲ್ಲ, ಐಐಟಿಗಳು, ಐಐಎಸ್‌ಸಿ ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿಯೂ ಪ್ರಧಾನ ಪಾತ್ರ ವಹಿಸಿದವರು, ಆದರೆ ಸ್ವಾತಂತ್ರ್ಯ ಆಂದೋಲನದಿಂದ ದೂರ ನಿಂತಿದ್ದ ಈಗಿನ ಆಳುವ ಮಂದಿ ಅವರನ್ನು ರಾಜಕೀಯ ಕಥನಗಳಿಂದ ಹೊರಹಾಕಲು ಪ್ರಯತ್ನ ನಡೆಸುತ್ತಲೇ ಬಂದಿದ್ದಾರೆ ಎನ್ನುತ್ತಾರೆ ಇತ್ತೀಚೆಗೆ ಅವರ ಜೀವನ ವೃತ್ತಾಂತವನ್ನು ರಚಿಸಿರುವ ಇತಿಹಾಸತಜ್ಞ ಎಸ್. ಇರ್ಫಾನ್ ಹಬೀಬ್.

ಇದೇ ಪಠ್ಯಪುಸ್ತಕದ 10ನೇ ಅಧ್ಯಾಯ “ಸಂವಿಧಾನದ ತಾತ್ವಿಕತೆ”ಯಲ್ಲಿ “ಭಾರತ ಒಕ್ಕೂಟಕ್ಕೆ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆ ಕಲಮು 370ರ ಅಡಿಯಲ್ಲಿ ಅದರ ಸ್ವಾಯತ್ತತೆಯನ್ನು ಸುರಕ್ಷಿತಗೊಳಿಸುವ ಬದ್ಧತೆಯನ್ನು ಆಧರಿಸಿತ್ತು” ಎಂದಿದ್ದ ಪರಿಚ್ಛೇದವನ್ನು ಕೈಬಿಡಲಾಗಿದೆ ಎಂದು ಈ ಸುದ್ದಿ ಹೇಳಿದೆ.

ಇತಿಹಾಸಕ್ಕಷ್ಟೇ ಸೀಮಿತವಾಗಿಲ್ಲ

ಶಾಲಾಮಕ್ಕಳ ಓದನ್ನು 'ಹಗುರ'ಗೊಳಿಸುವ ಹೆಸರಿನ ಈ ನಡೆ ಇತಿಹಾಸಕ್ಕಷ್ಟೇ ಸೀಮಿತವಾಗಿಲ್ಲ. ಕರ್ನಾಟಕದಲ್ಲಿ ಪಿಯು–1 ಮತ್ತು ಪಿಯು–2ರ ವಿಜ್ಞಾನ ಮತ್ತು ವಾಣಿಜ್ಯ ಕೋರ್ಸ್‌ಗಳಿಗೆ ಎನ್‌ಸಿಇಆರ್‌ಟಿಯ ಪಠ್ಯಕ್ರಮವನ್ನೇ ಅಳವಡಿಸಿಕೊಂಡಿರುವ ಪ್ರಿ–ಯೂನಿವರ್ಸಿಟಿ ಶಿಕ್ಷಣ ಇಲಾಖೆ, 2023–24ರಲ್ಲಿ ಮೊದಲ ಪಿಯು(ಅರ್ಥಶಾಸ್ತ್ರ)ದ ಅಭಿವೃದ್ಧಿ ಅರ್ಥಶಾಸ್ತ್ರದ ಪಠ್ಯದಲ್ಲಿ 'ಬಡತನ' ಮತ್ತು 'ಮೂಲರಚನೆ'ಯ ಅಧ್ಯಾಯಗಳನ್ನು ಕೈಬಿಟ್ಟಿದೆಯಂತೆ(ದಿ ಹಿಂದು, ಎಪ್ರಿಲ್ 7).

ಬಡತನ ಮತ್ತು ಮೂಲರಚನೆಯಂತ ಅಧ್ಯಾಯಗಳು ಭಾರತದ ಅರ್ಥವ್ಯವಸ್ಥೆಯನ್ನು ತಿಳಿಯಲು ಅತ್ಯಗತ್ಯವಾದ ವಿಷಯಗಳು. ಅವು ದೇಶದ ಭವಿಷ್ಯ ರೂಪಿಸಲಿರುವ ವಿದ್ಯಾರ್ಥಿಗಳು ತಿಳಿದಿರಬೇಕಾದ ವಿಷಯಗಳು. ಇವನ್ನು ಮುಚ್ಚಿಡುವ ಅಗತ್ಯವಾದರೂ ಏನು ಎಂದು ಹಲವು ಅಧ್ಯಾಪಕರುಗಳು ಪ್ರಶ್ನಿಸಿರುವುದಾಗಿಯೂ ಈ ಸುದ್ದಿ ಹೇಳುತ್ತದೆ.

ಇದೇ ಪತ್ರಿಕೆಯಲ್ಲಿ ಎಪ್ರಿಲ್ 9ರಂದು ಪ್ರಕಟವಾಗಿರುವ ಮತ್ತೊಂದು ಸುದ್ದಿಯ ಪ್ರಕಾರ 11ನೇ ತರಗತಿಯ ಸಮಾಜಶಾಸ್ತ್ರ ಪಠ್ಯಪುಸ್ತಕದಲ್ಲಿಯೂ ನಮ್ಮ ಸಮಾಜದ ಕಟು ವಾಸ್ತವತೆಗಳನ್ನು ತಿಳಿಸುವ ಅಂಶಗಳನ್ನು ಕೈಬಿಡಲಾಗಿದೆ.

“ಸಮಾಜವನ್ನು ಅರ್ಥಮಾಡಿಕೊಳ್ಳುವುದು” ಎಂಬ ಪುಸ್ತಕದಲ್ಲಿ ಹಲವು ವಿಷಯಗಳನ್ನು ಕೈಬಿಡಲಾಗಿದೆ. ಇವು ಕೂಡ ಎನ್‌ಸಿಇಆರ್‌ಟಿ ಕಳೆದ ವರ್ಷ ಪ್ರಕಟಿಸಿದ ಪಟ್ಟಿಯಲ್ಲಿ ಇರಲಿಲ್ಲ. ಅವುಗಳಲ್ಲಿ ಬಹು ಗಹನವಾದ ಎರಡು ಉದಾಹರಣೆಗಳನ್ನು ಈ ಸುದ್ದಿ–ವಿಶ್ಲೇಷಣೆಯಲ್ಲಿ ಕಾಣಬಹುದು.

ಈ ಪುಸ್ತಕದ ಅಧ್ಯಾಯ 3 “ಪರಿಸರ ಮತ್ತು ಸಮಾಜ'ದಲ್ಲಿ “ಪರಿಸರ ಪ್ರಶ್ನೆಗಳು ಸಾಮಾಜಿಕ ಪ್ರಶ್ನೆಗಳೂ ಕೂಡ ಏಕಾಗಿವೆ?' ಎಂಬ ಶಿರೋನಾಮೆಯ ಅಡಿಯಲ್ಲಿ ಮೂರು ಪುಟಗಳನ್ನು ಸಾರಾ ಸಗಟಾಗಿ ಕೈಬಿಡಲಾಗಿದೆ. ನೀರಿನ ಹಾಹಾಕಾರವಿರುವ ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ ಹೇಗೆ ವಾಟರ್ ಪಾರ್ಕ್‌ಗಳು ಮತ್ತು ಅಮ್ಯೂಸ್‌ಮೆಂಟ್ ಸೆಂಟರ್‌ಗಳು ಹೆಚ್ಚುತ್ತಿವೆ ಎಂಬ ವಿರೋಧಾಭಾಸದ ಕುರಿತ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್‌ರವರ ಲೇಖನದ ಭಾಗಗಳನ್ನು ತೆಗೆಯಲಾಗಿದೆ ಮತ್ತು 'ನಗರೀಯ ಪರಿಸರ–ಎರಡು ನಗರಗಳ ಕತೆ' ಎಂಬ ಉಪ ಶಿರೋನಾಮೆಯ ಅಡಿಯಲ್ಲಿದ್ದ ಇಡೀ ಭಾಗವನ್ನು ಕತ್ತರಿಸಲಾಗಿದೆ. ಇದು ಉತ್ತರ ದಿಲ್ಲಿಯ ಅಶೋಕ ವಿಹಾರ ಎಂಬ ಪ್ರದೇಶದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ತಿಕ್ಕಾಟಗಳನ್ನು ಕುರಿತಾದ ವಿಶ್ಲೇಷಣೆಯ ಒಂದು ಭಾಗ. ಪಕ್ಕದ ವಾಝಿರ್ ಪುರ್ 'ಜುಗ್ಗಿ'ಯ 18 ವರ್ಷದ ಒಬ್ಬ ಶ್ರಮಿಕ ಹುಡುಗನ ಕೊಲೆ ಮತ್ತು ಅದನ್ನು ಪ್ರತಿಭಟಿಸಲು ಬಂದ ಜುಗ್ಗಿ ನಿವಾಸಿಗಳ ಮೇಲೆ ಪೋಲಿಸ್ ಗೋಲೀಬಾರಿನಲ್ಲಿ ಇನ್ನೂ ನಾಲ್ವರ ಸಾವಿನ ಕುರಿತಾದ ವಾಕ್ಯಗಳನ್ನು ಕೈಬಿಡಲಾಗಿದೆ.


ಅದೇ ಅಧ್ಯಾಯದಲ್ಲಿ ಭಾರತದಲ್ಲಿ ಮನೆಯೊಳಗಿನ ವಾಯುಮಾಲಿನ್ಯದಿಂದ, ಅಂದರೆ ಅಡುಗೆಯ ಬೆಂಕಿಗಳಿಗೆ ಸಂಬಂಧಪಟ್ಟಂತೆ ಸಂಭವಿಸುವ ಸಾವುಗಳ ಅಂಕಿ–ಅಂಶಗಳನ್ನು ತೆಗೆದು ಹಾಕಿ ಜಾಗತಿಕ ಅಂಕಿ–ಅಂಶಗಳನ್ನು ಹಾಕಲಾಗಿದೆ!

ಹಿಂದಿನ ಪಠ್ಯಪುಸ್ತಕದಲ್ಲಿ ವಿದ್ಯಾರ್ಥಿಗಳು ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಬರುವ ಕುತ್ತುಗಳನ್ನು ಕುರಿತಾದ ವರದಿಗಳನ್ನು ಓದಿ ಚರ್ಚಿಸಬೇಕಾಗಿತ್ತು ಎಂದು ಶಿಕ್ಷಣ ತಜ್ಞರು ನೆನಪಿಸುತ್ತಾರೆ

ಹೀಗೆ ಎನ್‌ಸಿಇಆರ್‌ಟಿ ಘೋಷಿತಕ್ಕಿಂತ ಹೆಚ್ಚಾಗಿ ಅಘೋಷಿತ ಅಂಶಗಳನ್ನು ಕೈಬಿಟ್ಟಿರುವುದು ಅವು “ಮತ್ತೆ–ಮತ್ತೆ ಬರುವ”, “ಅಪ್ರಸ್ತುತ”ವಾದ ವಿಷಯಗಳು ಎಂಬ ಕಾರಣಕ್ಕೂ ಅಲ್ಲ, ಕಣ್ತಪ್ಪಿನಿಂದಲೂ ಅಲ್ಲ, ವಿದ್ಯಾರ್ಥಿಗಳಿಗೆ ಕಲಿಕೆಯ ಹೊರೆಯನ್ನು ಹಗುರಗೊಳಿಸಲಂತೂ ಅಲ್ಲವೇ ಅಲ್ಲ, ಕೋಮುವಾದಿ–ಕಾರ್ಪೊರೇಟ್ ನಂಟಿನ ಆಳ್ವಿಕೆಗೆ ಅನುಗುಣವಾಗಿರುವಂತೆ ಮಾಡಿರುವ ಬದಲಾವಣೆಗಳು ಎಂಬುದು ಕೈಬಿಟ್ಟಿರುವ ಅಂಶಗಳಲ್ಲಿ ಎದ್ದು ಕಾಣುತ್ತದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

–ವೇದರಾಜ್ ಎನ್.ಕೆ.

ರಬ್ಬರ್ ಮಾರುಕಟ್ಟೆಯಲ್ಲಿ ತಮ್ಮ ಸರ್ಕಾರವು ಹಸ್ತಕ್ಷೇಪ ಮಾಡದಿರುವ ಕ್ರಮವನ್ನು ಸಮರ್ಥಿಸಿಕೊಳ್ಳಲು ಕೇಂದ್ರ ಸರ್ಕಾರದ ಹಿರಿಯ ಸಚಿವರೊಬ್ಬರು ಅಸಂಬದ್ಧ ಹೇಳಿಕೆಗಳನ್ನು ನೀಡಿದ್ದಾರೆ. ಏಕೆ? ಏಕೆಂದರೆ ಕಾರ್ಪೊರೇಟ್–ಹಿಂದುತ್ವ ಮೈತ್ರಿಯನ್ನು ಅವಲಂಬಿಸಿರುವ ಈ ಸರ್ಕಾರವು, ತನ್ನ ವರ್ಗಗುಣಕ್ಕೆ ಅನುಗುಣವಾಗಿ ರೈತ–ಕೃಷಿಯನ್ನು ದುರ್ಬಲಗೊಳಿಸಿ ಅದನ್ನು ಕೃಷಿ–ಕಾರ್ಪೊರೇಟ್‌ಗಳಿಗೆ ಅಧೀನಗೊಳಿಸಲು ಉತ್ಸುಕವಾಗಿದೆ. ಆಹಾರ ಧಾನ್ಯಗಳಿಗೆ ಕನಿಷ್ಟ ಬೆಂಬಲ ಬೆಲೆ ಅಗತ್ಯದ ಬಗ್ಗೆ ಈಗ ಮಾತನಾಡುತ್ತಿರುವ ಈ ಸರ್ಕಾರವೇ ಕೆಲವು ತಿಂಗಳ ಹಿಂದಷ್ಟೇ ಕುಖ್ಯಾತ ಮೂರು ಕೃಷಿ ಕಾನೂನುಗಳ ಮೂಲಕ ಆಹಾರ ಧಾನ್ಯಗಳಿಗೂ ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆಯನ್ನು ರದ್ದುಪಡಿಸಲು ಯೋಜಿಸುತ್ತಿತ್ತು. ಆ ಕಾನೂನುಗಳನ್ನು ಹಿಂಪಡೆಯುವವರೆಗೂ ರೈತರು ಇಡೀ ವರ್ಷ ಪೂರ್ತಿ ಹೋರಾಟ ಮಾಡಿದರು. ಈಗ ಅದೇ ಮಂದಿ ವಾಣಿಜ್ಯ ಬೆಳೆಗಳಿಗೆ ಅದರ ಅಗತ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಇತ್ತ ಕೇರಳದ ಎಲ್‌ಡಿಎಫ್ ಸರಕಾರ ಕಿಲೋಗೆ 170 ರೂ.ಗಳ ಕನಿಷ್ಟ ಬೆಲೆಯನ್ನು ನಿಗದಿಪಡಿಸಿ ರಬ್ಬರ್ ಬೆಳೆಗಾರರಿಗೆ ಪರಿಹಾರ ಪ್ರಕಟಿಸಿದೆ.



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಕನಿಷ್ಟ ಬೆಂಬಲ ಬೆಲೆ: ಕೇಂದ್ರ ಸಚಿವರ ವಿಲಕ್ಷಣ ತರ್ಕ ಮತ್ತು ರೈತ ಕೃಷಿಯನ್ನು ದುರ್ಬಲಗೊಳಿಸುವ ಧೋರಣೆ

ಕೊರೊನಾ ಸಾಂಕ್ರಾಮಿಕದ ಕಾಲದಲ್ಲಿ ರಬ್ಬರ್ ಬೆಲೆಗಳು ಕುಸಿದಿದ್ದವು. ನಂತರ ಸ್ವಲ್ಪ ಏರಿದವು. ಈಗ ಮತ್ತೆ ಕುಸಿದಿವೆ. ದೇಶದಲ್ಲಿ ಶೇ. 80ರಷ್ಟು ರಬ್ಬರ್ ಅನ್ನು ಬೆಳೆಯುವ ಕೇರಳದ ರೈತರು, ಬೆಲೆ ಕುಸಿತದಿಂದಾಗಿ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ರಬ್ಬರ್ ಬೆಳೆಗಾರರಿಗೆ ಸಹಾಯ ಮಾಡಲು ಕೇಂದ್ರ ಸರ್ಕಾರವು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದೆ. ಈ ನಿರಾಕರಣೆಯನ್ನು ಸಮರ್ಥಿಸಲು ಅದು ಮುಂದಿಡುವ ವಾದಗಳನ್ನು ಒಪ್ಪಲಾಗದು.

ರಬ್ಬರ್ ಬೆಲೆಗಳ ಕುಸಿತದ ಸಂಬಂಧವಾಗಿ ಸಿಪಿಐ(ಎಂ) ಸಂಸದರು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯೆಲ್ ಅವರನ್ನು ಬೆಳೆಗಾರರ ಪರವಾಗಿ ಭೇಟಿ ಮಾಡಿ, ರಬ್ಬರ್ ಗೆ ಕನಿಷ್ಟ ಬೆಂಬಲ ಬೆಲೆಯನ್ನು ವ್ಯವಸ್ಥಾಪಿಸುವಂತೆ ಕೋರಿದರು. ಈ ಕೋರಿಕೆಯನ್ನು ಸಚಿವರು ಸಾರಾಸಗಟಾಗಿ ತಿರಸ್ಕರಿಸಿದರು. ವಾಣಿಜ್ಯ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ನಿಗದಿಪಡಿಸುವುದು ಕೇಂದ್ರದ ನೀತಿಯಲ್ಲ ಎಂಬುದು ಅವರ ವಾದ. ತಮ್ಮ ವಾದವನ್ನು ಸಚಿವರು ಹೀಗೆ ವಿವರಿಸಿದರು (ನ್ಯೂಸ್ ಕ್ಲಿಕ್ ಮಾರ್ಚ್ 28): "ಕನಿಷ್ಟ ಬೆಂಬಲ ಬೆಲೆ ಪದ್ಧತಿಯ ಅಡಿಯಲ್ಲಿ ಸಾಮಾನ್ಯವಾಗಿ ವ್ಯಾಪಕವಾಗಿ ಬೆಳೆಯುವ ಮತ್ತು ಆಹಾರ ಭದ್ರತೆಗೆ ಅವಶ್ಯಕವಾಗಿರುವ ಮತ್ತು ಹೆಚ್ಚು ಹೆಚ್ಚು ಜನರು ಬಳಸುವ ಮತ್ತು ಸಾಕಷ್ಟು ದೀರ್ಘ ಬಾಳಿಕೆ ಬರುವ ಬೆಳೆಗಳನ್ನು ಮಾತ್ರ ಪರಿಗಣಿಸಲಾಗುವುದು". ವಾಣಿಜ್ಯ ಬೆಳೆಗಳು ಈ ಮಾನದಂಡಗಳಿಗೆ ಒಳಪಡುವುದಿಲ್ಲ ಎಂದು ಅವರು ಹೇಳಿದರು.

ಎಂಎಸ್‌ಪಿಯ ಆವಶ್ಯಕತೆ

ಸಚಿವರ ಈ ಹೇಳಿಕೆಯು ಒಂದು ವಿಲಕ್ಷಣ ತರ್ಕವೇ ಸರಿ. ಕನಿಷ್ಟ ಬೆಂಬಲ ಬೆಲೆ ಪದ್ಧತಿಯನ್ನು ಜಾರಿಗೊಳಿಸಿದ ಹಿನ್ನೆಲೆ ಮತ್ತು ಅದರ ಅವಶ್ಯಕತೆ ಈಗಲೂ ಇದೆ, ಏಕೆ ಎಂಬುದು ಸಚಿವರಿಗೆ ತಿಳಿದಿಲ್ಲ. ಒಂದು ಸರಕಿನ ಬೆಲೆಯು ಬಹಳ ದಿನಗಳ ಕಾಲ ಹೆಚ್ಚು ಕಡಿಮೆ ಸ್ಥಿರವಾಗಿ ಉಳಿದರೆ, ಆಗ ಕನಿಷ್ಟ ಬೆಂಬಲ ಬೆಲೆಯ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆದರೆ, ಒಂದು ನಿರ್ದಿಷ್ಟ ಬೆಳೆಯ ಬೆಲೆಯು ಆಗಾಗ ಏರಿಳಿತಗಳಿಗೆ ಒಳಗಾಗುತ್ತಲೇ ಇದ್ದರೆ, ಆ ನಿರ್ದಿಷ್ಟ ಬೆಳೆಗೆ ನಿರ್ದಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಅವಶ್ಯಕತೆ ಉದ್ಭವಿಸುತ್ತದೆ. ಏಕೆಂದರೆ, ಈ ಏರಿಳಿತಗಳಿಂದಾಗಿ ರೈತರಿಗೆ ಹೆಚ್ಚಿನ ತೊಂದರೆಗಳನ್ನು ಉಂಟುಮಾಡುವ ಬೆಲೆ ಕುಸಿತವನ್ನು ತಪ್ಪಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಬೆಲೆಗಳ ಏರಿಳಿತಗಳು ರೈತರಿಗೆ ಉಂಟುಮಾಡುವ ತೊಂದರೆಗಳಿಂದ ಅವರನ್ನು ರಕ್ಷಿಸುವ ಸಲುವಾಗಿ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕಾದ ಅವಶ್ಯಕತೆ ಇದೆಯೇ ವಿನಃ, ಯಾವುದೇ ಒಂದು ಬೆಳೆಯನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆಯೇ ಅಥವಾ ಇಲ್ಲವೇ ಎಂಬುದಕ್ಕೂ ಮತ್ತು ಕನಿಷ್ಟ ಬೆಂಬಲ ಬೆಲೆಗೂ ಯಾವ ಸಂಬಂಧವೂ ಇಲ್ಲ. ಮತ್ತು ವಾಣಿಜ್ಯ ಬೆಳೆಗಳ ಬೆಲೆ ಏರಿಳಿತಗಳ ಸಾಧ್ಯತೆ–ಸಂದರ್ಭಗಳು ಸಾಮಾನ್ಯವಾಗಿ ಆಹಾರ ಧಾನ್ಯಗಳಿಗಿಂತಲೂ ಹೆಚ್ಚಿಗೆ ಇರುತ್ತವೆ.

ಬೆಲೆ ಕುಸಿತದ ಕಾರಣವನ್ನು ಹೀಗೆ ವಿವರಿಸಬಹುದು: ಕನಿಷ್ಟ ಬೆಂಬಲ ಬೆಲೆಯ ರೂಪದಲ್ಲಿ ಒಂದು ವೇಳೆ ಸರ್ಕಾರದ ಬೆಂಬಲವಿಲ್ಲದಿದ್ದರೆ, ಆಗ ಒಂದು ಅಧಿಕ ಪೂರೈಕೆಯ ಪರಿಸ್ಥಿತಿಯಲ್ಲಿ ಆ ಬೆಳೆಯ ಬೆಲೆ ಕುಸಿಯುತ್ತಲೇ ಹೋಗುತ್ತದೆ. ಎಲ್ಲಿಯವರೆಗೆ ಬೆಲೆಗಳು ಕುಸಿಯುತ್ತವೆ ಎಂದರೆ, ಯಾವ ನಿರ್ದಿಷ್ಟ ಬೆಲೆ ಮಟ್ಟದಲ್ಲಿ ಮಾರುಕಟ್ಟೆಯಲ್ಲಿರುವ ಅಧಿಕ ಪೂರೈಕೆಯ ದಾಸ್ತಾನನ್ನು, ಖಾಸಗಿ ದಾಸ್ತಾನುದಾರರು ಹಿಡಿದಿಟ್ಟುಕೊಳ್ಳುವುದು ಲಾಭದಾಯಕವೆಂದು ಕಂಡುಕೊಳ್ಳುವ ಮಟ್ಟವನ್ನು ತಲುಪುವವರೆಗೆ. ಈ ಮಟ್ಟವು, ಭವಿಷ್ಯದಲ್ಲಿ ಅದರ ಬೆಲೆಯು ಅದರ ಪ್ರಸ್ತುತ ಬೆಲೆಗಿಂತ ಎಷ್ಟು ಪಟ್ಟು ಹೆಚ್ಚು ಇರಬೇಕೆಂದು ಖಾಸಗಿ ದಾಸ್ತಾನುದಾರರು ನಿರೀಕ್ಷಿಸುತ್ತಾರೋ, ಅದನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಬೆಲೆಯು ಕುಸಿಯುತ್ತಿರುವಾಗ, ಅದು ಯಾವ ಮಟ್ಟದಲ್ಲಿ ನಿಲ್ಲಬಹುದೆಂದು ಇಟ್ಟುಕೊಂಡ ನಿರೀಕ್ಷೆಯ ಮಟ್ಟದಲ್ಲಿ (ಅಥವಾ ಅದಕ್ಕಿಂತಲೂ ಕೆಳಗಿನ ಮಟ್ಟದಲ್ಲಿ) ಮಾತ್ರ, ಅವರು ಹೆಚ್ಚು ದಾಸ್ತಾನುಗಳನ್ನು ಹಿಡಿದಿಟ್ಟುಕೊಳ್ಳಲು ಮುಂದಾಗುತ್ತಾರೆ. ಆಗ, ಪ್ರಸ್ತುತ ಬೆಲೆಯ ಕುಸಿತವು ನಿಲ್ಲುತ್ತದೆ. ಹಾಗಾಗಿ, ಕುಸಿತದ ನಂತರದ ಬೆಲೆಯ ನಿರೀಕ್ಷೆಯು ಎಷ್ಟು ಜಿಗುಟಾಗಿರುತ್ತದೆಯೋ ಅಷ್ಟು ಮಟ್ಟಿಗೆ ಪ್ರಸ್ತುತ ಬೆಲೆ ಕುಸಿತವು ಕಡಿಮೆಯಾಗುತ್ತದೆ.

ಬಹುಪಾಲು ಜನರಿಗೆ ಜೀವನಾಶ್ಯಕವಾಗಿರುವ ಬೆಳೆಗಳ ವಿಷಯದಲ್ಲಿ, ಅಂದರೆ, ಪಿಯೂಷ್ ಗೋಯೆಲ್ ಉಲ್ಲೇಖಿಸಿದ ಗುಣಲಕ್ಷಣಗಳನ್ನು ಹೊಂದಿರುವ ಬೆಳೆಗಳ ವಿಷಯದಲ್ಲಿ, ಬೆಲೆ ನಿರೀಕ್ಷೆಯು ಹೆಚ್ಚು ಜಿಗುಟಾಗಿರುತ್ತದೆ. ಏಕೆಂದರೆ, ಅಂತಹ ಅಗತ್ಯ ಸರಕುಗಳಿಗೆ ಒಂದು ವೇಳೆ ಕನಿಷ್ಟ ಬೆಂಬಲ ಬೆಲೆ ಇಲ್ಲದಿದ್ದರೂ ಸಹ, ಬಹುಶಃ ನಿರ್ದಯ ವಸಾಹತುಶಾಹಿಯನ್ನು ಹೊರತುಪಡಿಸಿದರೆ, ಯಾವ ಸಮಾಜವೂ ಅತಿಯಾದ ಬೆಲೆ ಏರಿಳಿತಗಳನ್ನು ಸಹಿಸುವುದಿಲ್ಲ. ಆದರೆ ರಫ್ತಾಗುವ ಅಥವಾ ಕಡಿಮೆ ಅವಶ್ಯಕವೆನಿಸಿದ ಮತ್ತು ಅವುಗಳ ಮೇಲಿನ ಬೇಡಿಕೆಯೇ ಏರು–ಪೇರಾಗುವ ಹಾಗೂ ಸರಕುಗಳ ಉತ್ಪಾದನೆಯಲ್ಲಿ ಆಂತರಿಕ ಲಾಗುವಾಡುಗಳಾಗಿ ಬಳಕೆಯಾಗುವ ವಾಣಿಜ್ಯ ಬೆಳೆಗಳ ವಿಷಯದಲ್ಲಿ, ಬೆಲೆ ನಿರೀಕ್ಷೆಯ ಸಮಸ್ಯೆಯು ಜಿಗುಟಾಗಿರುವುದಿಲ್ಲ. ವಾಣಿಜ್ಯ ಬೆಳೆಗಳ ಬೆಲೆಗಳು ಆಹಾರ ಧಾನ್ಯಗಳ ಬೆಲೆಗಳಿಗಿಂತಲೂ ಹೆಚ್ಚು ವ್ಯಾಪಕ ಏರಿಳಿತಗಳಿಗೆ ಒಳಗಾಗಲು ಇದು ಒಂದು ಕಾರಣವಾಗಿದೆ.



ಈ ಅಂಶವು ರಬ್ಬರ್ ಬೆಲೆಗಳಿಗೆ ಸಂಬಂಧಿಸಿದ ದತ್ತಾಂಶಗಳಿಂದ ಸ್ಪಷ್ಟವಾಗುತ್ತದೆ. 2014ರಲ್ಲಿ ಒಂದು ಕಿಲೋ ನೈಸರ್ಗಿಕ ರಬ್ಬರ್‌ನ ಬೆಲೆಯು ಶೇ. 70ರಷ್ಟು ಇಳಿಕೆಯಾಗಿತ್ತು. 245 ರೂ. ಗಳಿಂದ 77 ರೂ. ಗಳಿಗೆ ಇಳಿದಿತ್ತು. ಅದೊಂದು ದುರಂತಮಯ ಇಳಿಕೆಯಾಗಿತ್ತು. ಇತ್ತೀಚೆಗೆ ಕೂಡ ಬೆಲೆಗಳು ಇಳಿದಿವೆ. 2021ರ ನವೆಂಬರ್‌ನಲ್ಲಿ ಸುಮಾರು 200 ರೂ.ಗಳ ಮಟ್ಟದಲ್ಲಿದ್ದ ಪ್ರತಿ ಕಿಲೋ ನೈಸರ್ಗಿಕ ರಬ್ಬರ್‌ನ ಬೆಲೆಯು ಈಗ 120 ರೂ.ಗೆ ಅಥವಾ ಶೇ. 40 ರಷ್ಟು ಇಳಿದಿದೆ. ಏರಿಳಿತಗಳು ಇಂತಹ ಹುಚ್ಚಾಬಟ್ಟೆ ಮಟ್ಟದಲ್ಲಿದ್ದಾಗ ಕನಿಷ್ಟ ಬೆಂಬಲ ಬೆಲೆಯ ರೂಪದಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡುವ ಅಗತ್ಯವಿರುತ್ತದೆ. ಏಕೆಂದರೆ ಈ ಕ್ರಮವು ಬೆಲೆ ಕುಸಿತಕ್ಕೆ ಒಂದು ಮಿತಿ ಹಾಕುವುದು ಮಾತ್ರವಲ್ಲದೆ, ಬೆಲೆ ಏರಿಳಿತಗಳ ಹರವಿಗೂ ಒಂದು ಮಿತಿ ಹಾಕುತ್ತದೆ.

ಸರಕು ಮಂಡಳಿಗಳು ಮತ್ತು ಬೆಲೆ ಸ್ಥಿರೀಕರಣ

ನಿಯಂತ್ರಣಗಳ (ಡಿರಿಜಿಸ್ಟ್) ವ್ಯವಸ್ಥೆಯಿದ್ದ ಅವಧಿಯಲ್ಲಿ ವಿವಿಧ ಸರಕು ಮಂಡಳಿಗಳು ನಿಜಕ್ಕೂ ಈ ಕಾರ್ಯವನ್ನೇ ನಿರ್ವಹಿಸುತ್ತಿದ್ದವು. ಒಂದು ನಿಗದಿಪಡಿಸಿದ ಕನಿಷ್ಟ ಬೆಲೆಯಲ್ಲಿ ಈ ಮಂಡಳಿಗಳು ವಾಣಿಜ್ಯ ಬೆಳೆಗಳನ್ನು ಸಂಗ್ರಹಿಸುತ್ತಿದ್ದವು ಮತ್ತು ಬೆಲೆ ಕುಸಿತದ ಸಾಧ್ಯತೆ ಇದ್ದಾಗಲೆಲ್ಲಾ ಜೋರಾಗಿ ಮಧ್ಯಪ್ರವೇಶ ಮಾಡುತ್ತಿದ್ದವು. ಆ ಮೂಲಕ ಆಂತರಿಕ ಬೆಲೆ ಏರಿಳಿತಗಳ ವ್ಯಾಪ್ತಿಯನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡಿದವು. ಆದರೆ ನವ ಉದಾರವಾದಿ ಆಳ್ವಿಕೆಯ ಜಾರಿಯೊಂದಿಗೆ, ಈ ಮಂಡಳಿಗಳು ಅಸ್ತಿತ್ವದಲ್ಲಿವೆಯಾದರೂ, ಅವುಗಳ ಸಂಗ್ರಹಣಾ ಮತ್ತು ಮಾರಾಟದ ಕಾರ್ಯವನ್ನು ಕೊನೆಗೊಳಿಸಲಾಗಿದೆ. ಇದರರ್ಥವೆಂದರೆ, ಬೆಲೆಗಳನ್ನು ಸ್ಥಿರಗೊಳಿಸಲು ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ಮಾಡುವ ಆದೇಶವನ್ನು ಈ ಮಂಡಳಿಗಳು ಈಗ ಹೊಂದಿಲ್ಲ.

ಈಗ, ಪಿಯೂಷ್ ಗೋಯೆಲ್ ಅವರು ಉಲ್ಲೇಖಿಸಿದ ಎರಡನೇ ಅಂಶವನ್ನು ನೋಡೋಣ. ಆಹಾರ ಧಾನ್ಯಗಳ ಬೆಲೆಗಳ ಸ್ಥಿರತೆಯು ಆಹಾರ ಭದ್ರತೆಯ ದೃಷ್ಟಿಯಲ್ಲಿ ಅತ್ಯಗತ್ಯ ಎಂದು ಅವರು ಹೇಳುತ್ತಾರೆ. ಆದರೆ ವಾಣಿಜ್ಯ ಬೆಳೆಗಳ ಬೆಲೆಗಳ ಸ್ಥಿರತೆಯು ಆಹಾರ ಭದ್ರತೆಯ ದೃಷ್ಟಿಯಲ್ಲಿ ಅಪ್ರಸ್ತುತವೆಂದು ಅವರು ಹೇಳುತ್ತಾರೆ. ಅವರ ಈ ವಾದವೂ ಅಸಂಬದ್ಧವೇ. ಆಹಾರ ಭದ್ರತೆಗಾಗಿ ಆಹಾರ ಧಾನ್ಯಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡುವುದು ಅವಶ್ಯಕ ಎಂಬ ಅಂಶದ ಬಗ್ಗೆ ಎರಡು ಮಾತಿಲ್ಲ. ಆದರೆ ಒಟ್ಟು ಬೇಡಿಕೆಯನ್ನು ಹೆಚ್ಚಿಸುವ ಸಲುವಾಗಿ ವಾಣಿಜ್ಯ ಬೆಳೆಗಳಿಗೂ ಕನಿಷ್ಟ ಬೆಂಬಲ ಬೆಲೆ ನೀಡಬೇಕಾದುದೂ ಅಷ್ಟೇ ಮುಖ್ಯವಾಗುತ್ತದೆ. ಏಕೆಂದರೆ, ರಬ್ಬರ್‌ನಂತಹ ಒಂದು ವಾಣಿಜ್ಯ ಬೆಳೆಯ ಬೆಲೆ ಕುಸಿತವು ರಬ್ಬರ್ ಬೆಳೆಗಾರರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡುತ್ತದೆ. ಅಂದರೆ, ಆಹಾರ ಧಾನ್ಯಗಳ ಬೆಲೆಗಳು ಸರಾಸರಿ ಲೆಕ್ಕದಲ್ಲಿ ಬದಲಾಗದಿದ್ದರೂ ಸಹ ಅವರು ಸಾಮಾನ್ಯವಾಗಿ ಕೊಳ್ಳುತ್ತಿದ್ದ ಪ್ರಮಾಣದ ಆಹಾರ ಧಾನ್ಯಗಳನ್ನು ರಬ್ಬರ್ ಬೆಲೆಗಳು ಕುಸಿದ ನಂತರ ಕೊಳ್ಳುವುದು ಅವರಿಗೆ ಸಾಧ್ಯವಾಗುವುದಿಲ್ಲ.

ವಿಷಯ ಅದಷ್ಟೇ ಅಲ್ಲ. ವಾಣಿಜ್ಯ ಬೆಳೆಗಳ ಬೆಲೆ ಕುಸಿತದ ಹೊರತಾಗಿಯೂ, ಬೆಳೆಗಾರರು ಸಾಮಾನ್ಯವಾಗಿ ಕೊಳ್ಳುವ ಅದೇ ಪ್ರಮಾಣದ ಆಹಾರ ಧಾನ್ಯಗಳನ್ನು ಖರೀದಿಸುತ್ತಾರೆ ಎಂದು ಒಂದು ಕ್ಷಣ ಊಹಿಸಿಕೊಳ್ಳೋಣ. ಇದರ ಅರ್ಥವೆಂದರೆ, ಅವರು ಆಹಾರ ಧಾನ್ಯಗಳನ್ನು ಹೊರತುಪಡಿಸಿ ಇತರ ಕೆಲವು ಸರಕುಗಳ ಖರೀದಿಯನ್ನು ಇಳಿಕೆ ಮಾಡಬೇಕಾಗುತ್ತದೆ. ಇದರ ಅರ್ಥವೆಂದರೆ, ಈ ಕೆಲವು ಸರಕುಗಳ ಉತ್ಪಾದಕರು ಬೆಲೆ ಕುಸಿತವಾಗುವ ಮೊದಲು ಎಷ್ಟು ಕೊಳ್ಳುವ ಶಕ್ತಿಯನ್ನು ಹೊಂದಿದ್ದರೋ, ಅದಕ್ಕಿಂತಲೂ ಕಡಿಮೆ ಕೊಳ್ಳುವ ಶಕ್ತಿಯನ್ನು ಈಗ ಹೊಂದಿದವರಾಗುತ್ತಾರೆ. ಅವರ ಕೊಳ್ಳುವ ಶಕ್ತಿಯ ಈ ಇಳಿಕೆಯು ಅವರು ಆಹಾರ ಧಾನ್ಯಗಳನ್ನು ಕೊಳ್ಳುವಾಗ ಅವರನ್ನು ಕೈ ಬಿಗಿ ಹಿಡಿಯುವಂತೆ ಮಾಡುತ್ತದೆ. (ಅಥವಾ ಅವರು ಹಾಗೆ ಕೈ ಬಿಗಿ ಹಿಡಿಯದಿದ್ದರೆ, ಅವರು ಕೊಳ್ಳುವ ಇತರ ಸರಕುಗಳ ಮೇಲಿನ ಖರ್ಚನ್ನು ಕಡಿಮೆ ಮಾಡಬೇಕಾಗುತ್ತದೆ. ಅದರಿಂದಾಗಿ ಆ ಇತರ ಸರಕುಗಳನ್ನು ಮಾರುವ ಜನರು ತಮ್ಮ ಆಹಾರ ಧಾನ್ಯಗಳ ಖರೀದಿಯನ್ನು ಇಳಿಕೆ ಮಾಡಬೇಕಾಗುತ್ತದೆ. ಈ ಸರಣಿಯು ಹೀಗೆ ಸಾಗುತ್ತದೆ).

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಆಹಾರ ಭದ್ರತೆಗಾಗಿ ಸಾಕಷ್ಟು ಆಹಾರದ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮಾತ್ರವಲ್ಲದೆ, ಆಹಾರ ಧಾನ್ಯಗಳಿಗೆ ಸಾಕಷ್ಟು ಬೇಡಿಕೆ ಇರುವಂತಾಗಲು ಜನರ ಕೈಯಲ್ಲಿ ಸಾಕಷ್ಟು ಕೊಳ್ಳುವ ಶಕ್ತಿ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗುತ್ತದೆ. ಹಾಗಾಗಿ, ವಾಣಿಜ್ಯ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಒದಗಿಸುವ ಕ್ರಮವೂ ಸಹ ಜನರ ಬಳಿ ಸಾಕಷ್ಟು ಕೊಳ್ಳುವ ಶಕ್ತಿ ಪುಟ 15 ಕ್ಕೆ

ಫ್ಯಾಸಿಸ್ಟ್ ಮಾದರಿಯ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರದಂತೆ... ಪುಟ 16 ರಿಂದ

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಮಾನತೆ ಆಶಯದ ಯುಗ ಪ್ರವೇಶ ಸಾಧ್ಯವಾಗಿಲ್ಲ. ಪ್ರಜಾಪ್ರಭುತ್ವ ಉಳಿಯಬೇಕು ಮತ್ತು ಗಟ್ಟಿಯಾಗಬೇಕೆಂದರೆ, ಕೇವಲ ರಾಜಕೀಯ ಸಮಾನತೆಯಿಂದ ಮಾತ್ರ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಹೇಳಿದ್ದರು.

ಸಾಮಾಜಿಕ ನ್ಯಾಯ ಎಂಬುದು ಕೇವಲ ಬಡತನ ಹೋಗಲಾಡಿಸಲು ಇರುವ ಕಾರ್ಯಕ್ರಮವಲ್ಲ. ಮೀಸಲಾತಿ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ನ್ಯಾಯ, ಪ್ರಾತಿನಿಧ್ಯ, ಪಾಲುದಾರಿಕೆ ಇವುಗಳನ್ನು ಒದಗಿಸಿಕೊಡಬೇಕು. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಮಾನದಂಡವಾಗಿ ಆಧರಿಸಿ ಸಾಮಾಜಿಕ ನ್ಯಾಯದ ಆಶಯವನ್ನು ಕೊಡಲಾಗಿದೆ. ಪ್ರಜಾಪ್ರಭುತ್ವದ ದೊಡ್ಡ ಹೇಳಿಕೆ ಏನೆಂದರೆ, ಎಲ್ಲರಿಗೂ ಸಮಾನ ಅವಕಾಶ, ಸಮಾನವಾದ ಸವಲತ್ತುಗಳು ಇರಬೇಕು. ಆದರೆ, ಕೆಲವರಿಗೆ ವಿಷೇಶವಾದ ಅವಕಾಶಗಳಿರಬೇಕು. ಇದು ನಮ್ಮ ಸಂವಿಧಾನದ ಕರ್ತೃಗಳ ಆಶಯ. ಅಂತಹ ವಿಷೇಶವಾದ ಅವಕಾಶಗಳನ್ನು ಕಲ್ಪಿಸದಿದ್ದರೆ, ಭಾರತದಲ್ಲಿರುವ ಬಹಳಷ್ಟು ಸಮುದಾಯ ಮತ್ತು ಜಾತಿಗಳಿಗೆ ಸಮಾನವಾದ ಅವಕಾಶಗಳನ್ನು ಪಡೆಯಲು ಸಾಧ್ಯವಾಗದಿರಬಹುದು.

ಇಂದು ಜಾತಿವಾದಿ ಮನಸ್ಥಿತಿಯನ್ನು ಬೆಂಬಲಿಸುವ, ಸಾಮಾಜಿಕ ನ್ಯಾಯವನ್ನು ಅಲುಗಾಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಇವರು ಪಿಸುಮಾತಿನ ಪ್ರಚಾರದ ಮೂಲಕ ಮೀಸಲಾತಿ ವಿರೋಧಿಸಿದವರು. ಇಂದು ವೇದಿಕೆಗಳಲ್ಲಿ ಬಹಿರಂಗವಾಗಿ ಮೀಸಲಾತಿಯನ್ನು ವಿರೋಧಿಸುತ್ತಿದ್ದಾರೆ. ಮೀಸಲಾತಿ ವ್ಯವಸ್ಥೆಯನ್ನು ಮುಕ್ಕುಗೊಳಿಸಲು ಅಥವಾ ನಾಶಮಾಡಲು ಹೊರಟಿದ್ದಾರೆ. ಮುಸ್ಲೀ ಸಮುದಾಯದ ಶೇ. 4 ಮೀಸಲಾತಿ ಕಿತ್ತು ಎರಡು ಜಾತಿಗೆ ಹಂಚಿಕೆ ಜನರನ್ನು ಎತ್ತಿಕಟ್ಟುವ, ಕೋಮು ದ್ವೇಷ ಬಿತ್ತುವ ಪ್ರಯತ್ನವಾಗಿದೆ. ರಾಜ್ಯದ ಪ್ರಭುದ್ದ ಜನರು ಇವರ ತಂತ್ರಗಳಿಗೆ ಬಲಿಯಾಗಲಿಲ್ಲ. ಬ್ರಾಹ್ಮಣವಾದಿ ಹಿಂದೂ ಸಮಾಜ ನಿರ್ಮಾಣ ಮತ್ತು ಪರೋಕ್ಷ ರಾಜಶಾಹಿ ಆಡಳಿತ ನಿರ್ಮಾಣ ಮಾಡಲು ಹೊರಟಿದ್ದಾರೆ. ಇದನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಎದುರಿಸುವ ಮೂಲಕ ಸಾಮಾಜಿಕ ನ್ಯಾಯವನ್ನು, ಪ್ರಜಾಪ್ರಭುತ್ವವನ್ನು ಉಳಿಸಬೇಕಾಗಿದೆ ಎಂದು ಡಾ. ಬಂಜಗೆರೆ ಜಯಪ್ರಕಾಶ್ ಹೇಳಿದರು.

ನಮ್ಮದು ಸಮಾಜವಾದಿ ಪರಂಪರೆ:

ಸಾಂಸ್ಕೃತಿಕ ರಾಜಕಾರಣದ ಕುರಿತು ಹಿರಿಯ ರಂಗಕರ್ಮಿ ಪ್ರಸನ್ನ ಅವರು, 'ಕೆಲವು ವರ್ಷಗಳಿಂದ ನಮ್ಮನ್ನಾಳುತ್ತಿರುವ ಪಕ್ಷವನ್ನು ಕಿತ್ತೊಗೆಯುವುದು ಸಾಂಸ್ಕೃತಿಕ ಕಾರಣಗಳಿಗಾಗಿಯೇ ಅನಿವಾರ್ಯವಾಗಿದೆ ಎನ್ನುತ್ತ ತಮ್ಮ ಮಾತುಗಳನ್ನು ಪ್ರಾರಂಭಿಸಿದರು. ಸಂಸ್ಕೃತಿ ಬೇರೆ, ಸಾಂಸ್ಕೃತಿಕ ರಾಜಕಾರಣ ಬೇರೆ. ಧರ್ಮ ಬೇರೆ, ಧಾರ್ಮಿಕ ರಾಜಕಾರಣ ಬೇರೆ. ಸಂಸ್ಕೃತಿಯನ್ನು ಆಯಾ ಸಮುದಾಯಗಳು ಕಟ್ಟುತ್ತವೆ. ಆದರೆ, ಸಾಂಸ್ಕೃತಿಕ ರಾಜಕಾರಣವನ್ನು ಕಟ್ಟುವವರು ಅದಾನಿಯಂತವರನ್ನು ಬೆಳೆಸಲಿಕ್ಕಾಗಿ ಸಂಸ್ಕೃತಿಯನ್ನು ದುರ್ಬಳಕೆ ಮಾಡುತ್ತಾರೆ. ಇವೆರಡರ ನಡುವಿನ ವ್ಯತ್ಯಾಸವನ್ನು ನಾವು ಜನರಿಗೆ ತಿಳಿಸಬೇಕಿದೆ. ನಾನೊಬ್ಬ ಧಾರ್ಮಿಕ ಮನುಷ್ಯ. ನನ್ನ ಧರ್ಮಕ್ಕೆ ದೊಡ್ಡ ಪರಂಪರೆ ಇದೆ. ಅದನ್ನು ನಾವು ಸಂತ ಪರಂಪರೆ ಎಂದು ಕರೆಯುತ್ತೇವೆ. ಅದನ್ನೇ ಆಧುನಿಕ ಭಾಷೆಯಲ್ಲಿ ಹೇಳುವುದಾದರೆ, ಸಮಾಜವಾದಿ ಪರಂಪರೆ, ಸಮತಾವಾದಿ ಪರಂಪರೆ ಎಂದೂ ಕರೆಯಬಹುದು. ಬಸವಣ್ಣ, ಕಬೀರ, ಅಲ್ಲಮ, ಮಂಟೇಸ್ವಾಮಿ ಇವರ ಕಾಲದಲ್ಲಿ ಯಂತ್ರಗಳಿರಲಿಲ್ಲ. ಯಂತ್ರ ಬಂದ ನಂತರ ಆ ಎಲ್ಲ ವಿಚಾರಗಳನ್ನೂ ಹೊಸ ರೀತಿಯಲ್ಲಿ ಹೇಳುವ ಅಗತ್ಯ ಬಂದಿರುವುದರಿಂದ ಸಮಾಜವಾದ, ಸಮತಾವಾದ ಎಂದು ಹೊಸ ಶಬ್ದಗಳನ್ನು ಹುಟ್ಟಿಸುವುದು ಅನಿವಾರ್ಯವಾಯ್ತು. ಇಂತಹ ನನ್ನ ಪರಂಪರೆಯನ್ನು ಹಾಳುಗೆಡವಿ, ಪೂಜಾರಿ ಸಂಸ್ಕೃತಿಯನ್ನು, ಪುರೋಹಿತಶಾಹಿ ಸಂಸ್ಕೃತಿಯನ್ನು ಮತ್ತೆ ಜಾರಿಗೆ ತರುತ್ತಿರುವ, ಬಸವಣ್ಣನವರು ಒಂದು ಸಾವಿರ ವರ್ಷಗಳ ಹಿಂದೆ ಮಾಡಿದ ಕಾರ್ಯಗಳನ್ನು ಮಣ್ಣುಗೂಡಿಸುತ್ತಿರುವ ಈ ಸರ್ಕಾರವನ್ನು ಉರುಳಿಸಬೇಕಾಗಿದೆ. ಬಸವಣ್ಣನವರು ಜಂಗಮರನ್ನು ಬ್ರಾಹ್ಮಣರನ್ನಾಗಿ ಮಾಡಿದ್ದಲ್ಲ, ಜಂಗಮ ಎಂಬುದು ಸ್ಥಾವರಕ್ಕೆ ಪರ್ಯಾಯವಾಗಿ ನಿಂತ ತತ್ವ. ಸಾಂಸ್ಕೃತಿಕ ರಾಜಕಾರಣ ಎನ್ನುವುದು ಸ್ಥಾವರದ ರಾಜಕಾರಣ. ಅದು ಮಂದಿರ, ಮಸೀದಿ, ಚರ್ಚುಗಳನ್ನು ಕಟ್ಟುವ ರಾಜಕಾರಣ. ಆ ಮೂಲಕ ಜನರನ್ನು ದಾರಿ ತಪ್ಪಿಸುವ, ಸಾಂಸ್ಕೃತಿಕ ರಂಗವನ್ನೇ ಕುಗೆಡಿಸುವ ಕಾರ್ಯಕ್ರಮ ಅವರದ್ದಾಗಿದೆ. ಈ ಕಾರಣದಿಂದ, ಮುಂದಿನ ಚುನಾವಣೆಯಲ್ಲಿ ನಾವೆಲ್ಲರೂ ಒಂದಾಗಿ, ಈ ಪುರೋಹಿಶಾಹಿ ರಾಜಕಾರಣವನ್ನು, ಅದಾನಿ, ಅಂಬಾನಿಯವರನ್ನು ಮತ್ತಷ್ಟು ಬೆಳೆಸಲಿಕ್ಕಾಗಿ ಹೊರಟಿರುವ ರಾಜಕಾರಣವನ್ನು ಸೋಲಿಸಬೇಕಾಗಿದೆ. ನಮ್ಮ ನಡುವಿನ ಸಣ್ಣ ಪುಟ್ಟ ವೈಮನಸ್ಸು ಗಳನ್ನು ಮರೆತು ಒಂದಾಗಬೇಕಿದೆ ಎಂದು ಪ್ರಸನ್ನ ಕರೆ ಕೊಟ್ಟರು.

ಚಿಂತಕ ಹಾಗೂ ಪರ್ತಕರ್ತ ಬಿ.ಎಂ.ಹನೀಫ್ ಅವರು ಮಾತನಾಡಿ, ಫ್ಯಾಸಿಸ್ಟರು ಅಧಿಕಾರಕ್ಕೇರದಂತೆ ತಡೆಯುವ ಹೊಣೆ ನಾಡಿನ ಒಳಿತು ಬಯಸುವ ಸಾರ್ವಜನಿಕರದ್ದು. ಎರಡು ಅಲುಗಿನ ಕತ್ತಿಗಳನ್ನು ಹೊಂದಿದವರ ಸರಕಾರೀ ಅಧಿಕಾರವನ್ನು ಬಳಸುತ್ತಿರುವ ಕೋಮುವಾದಿ ಧ್ರುವೀಕರಣದ ವಿರುದ್ಧ ನಡೆಯುವ ಹೋರಾಟವಿದು. ಶತಮಾನಗಳಿಂದ ಕಟ್ಟಿದ ಸೌಹಾರ್ದ ಪರಂಪರೆಗೆ ಧಕ್ಕೆ ತರುವುದಕ್ಕಾಗಿಯೇ ಕೆಲವರಿಗೆ ಮೀಸಲಾತಿ ಹೆಚ್ಚಿಸಿ ಇನ್ನೂ ಕೆಲವರಿಗೆ ಇದ್ದ ಮೀಸಲಾತಿ ಕಳೆಯುವುದು ಹುನ್ನಾರದ ಭಾಗ. ಕೋಮುವಾದಕ್ಕೆ ಕೋಮವಾದವೇ ಎಂದಿಗೂ ಉತ್ತರವಲ್ಲ ಎಂದರು.

ಮುಚ್ಚಿದರೆ ಬಿಚ್ಚಿ ಅಂತಾರೆ, ಬಿಚ್ಚಿದರೆ ಮುಚ್ಚಿ ಅಂತಾರೆ.

ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷರಾದ ಡಾ.ಮೀನಾಕ್ಷಿ ಬಾಳಿ ಅವರು 'ಮಹಿಳೆಯ ಸಮಕಾಲೀನ ಸವಾಲುಗಳು' ಮಾತನಾಡುತ್ತ, ಹೆಣ್ಣು ಮಕ್ಕಳು ಈ ಸಮಾಜದಲ್ಲಿರುವ ತಮ್ಮ ವಿರೋಧಿ ಮೌಲ್ಯಗಳನ್ನೇ ಖರೆ ಎಂದು ಸುಖಿಸುವ ಪರಿಸ್ಥಿತಿ ನಿರ್ಮಿಸಿದ ಮನುವಾದಿ ತಂತ್ರ ಸೋಲಿಸೋಣ. ಈಗ ವಿಧಾನ ಸಭೆಯಲ್ಲಿ ಮಹಿಳೆಯರ ಸಂಖ್ಯೆ ಶೇ. 3ರಷ್ಟೂ ಇಲ್ಲ. ಒಬ್ಬರೇ ಮಂತ್ರಿ. ಮಹಿಳೆಯರ ಭಾಗಿದಾರಿಕೆ ಇಲ್ಲದ ವ್ಯವಸ್ಥೆ ಪ್ರಜಾತಂತ್ರ ಆಗಲು ಹೇಗೆ ಸಾಧ್ಯ? ಅಭಿವೃದ್ಧಿಯ ವಿನ್ಯಾಸಗಳಲ್ಲಿ ಮಹಿಳೆಗೆ ಇಲ್ಲದ ಸ್ಥಾನವನ್ನು ಚರ್ಚೆ ಮಾಡದ ಅಭಿವೃದ್ಧಿ ಯಾರ ಅಭಿವೃದ್ಧಿ ಎಂದು ಪ್ರಶ್ನಿಸಿದವರು.

ಪೌಷ್ಟಿಕತೆಯಲ್ಲಿ ಭಾರತ ಕೆಳಮಟ್ಟದಲ್ಲಿದೆ. ವರದಕ್ಷಿಣೆ ಸಾವು, ಅತ್ಯಾಚಾರ ಹೆಚ್ಚಾಗಿವೆ. ಕೊರೋನಾ ಅವಧಿಯಲ್ಲಿ ಶೇ. ಎಪ್ಪತ್ತರಷ್ಟು ಮಹಿಳೆಯರ ಉದ್ಯೋಗ ಕಳೆದುಕೊಂಡರು.

ಮಹಿಳೆಯರು ತಮ್ಮ ವಿರೋಧಿ ಮೌಲ್ಯಗಳನ್ನು ಸುಖಿಸುವಂತೆ ಪುರೋಹಿತಶಾಹಿಗಳು ಮಾಡಿದ್ದಾರೆ. ಧಾರ್ಮಿಕ ಯಾತ್ರೆಗೆ ಕರೆದೊಯ್ದು ಮಹಿಳೆಯರಿಂದ ಮತ ಪಡೆಯುವ ತಂತ್ರ ಮಾಡತೊಡಗಿದ್ದಾರೆ. ಕೋಮು ಸೌಹಾರ್ದದ ಹಬ್ಬಗಳನ್ನು ಕೋಮುವಾದಿಕರಣ ಮಾಡಲಾಗಿದೆ.

ಅತ್ಯಾಚಾರಿಗಳು ಮೇಲ್ಜಾತಿಗೆ ಸೇರಿದವರು ಎಂಬ ಕಾರಣಕ್ಕೆ ಅವರನ್ನು ಶಿಕ್ಷೆಯಿಂದ ತಪ್ಪಿಸಿ, ಅವರಿಗೆ ಸನ್ಮಾನ ಮಾಡಲಾಗುತ್ತಿದೆ. ಧಾರ್ಮಿಕ ಮುಖಂಡರಿಂದ ಮಹಿಳೆಯರಿಗೆ ಹೆಚ್ಚು ಅಪಾಯವಾಗುತ್ತಿದೆ. ಒಂದಡೆ, ತಲೆಗೆ ಬಟ್ಟೆ ಕಟ್ಟಿಕೊಂಡರೆ (ಹಿಜಾಬ್) ಬಟ್ಟೆ ತೆಗೆಯಿರಿ ಎನ್ನುತ್ತಾರೆ. ಮತ್ತೊಂದೆಡೆ, ಮಹಿಳೆಯರು ಮೈತುಂಬಾ ಬಟ್ಟೆ ಧರಿಸದ ಕಾರಣ ಅತ್ಯಾಚಾರ ಪ್ರಕರಣಗಳು ನಡೆಯುತ್ತಿವೆ ಎನ್ನುತ್ತಾರೆ. ಮುಚ್ಚಿದರೆ ಬಿಚ್ಚಿ ಎನ್ನುತ್ತಾರೆ, ಬಿಚ್ಚಿದರೆ ಮುಚ್ಚಿ ಎನ್ನುತ್ತಾರೆ. ಧರ್ಮಾಂಧತೆ ಹೆಚ್ಚಾಗಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೀಡುತ್ತಿದ್ದ ಅನುದಾನ ಮತ್ತು ನರೇಗಾ ಯೋಜನೆಯ ಅನುದಾನ ಕಡಿತ ಮಾಡಿದ್ದಾರೆ. ಸಬಲೀಕರಣ ಅಂಶಗಳ ಉದ್ದೇಶ ಪೂರ್ವಕವಾಗಿ ಕಡಿತ ಮಾಡಲಾಗುತ್ತಿದೆ. ಮಹಿಳೆಯರನ್ನು ನಾಶದ ಕಡೆಗೆ ನೂಕುತ್ತಿದ್ದಾರೆ.

ನಿಮ್ಮ ಸಂಕಷ್ಟಗಳಿಗೆ ಕಾರಣ ಏನು ಎಂಬುದನ್ನು ಅರಿಯಲು ಮುಂದಾಗಿ ಎಂದು ಮಹಿಳೆಯರಿಗೆ ಕರೆ ನೀಡಿದರು.

ಸಿಐಟಿಯು ಅ.ಭಾ, ಕಾರ್ಯದರ್ಶಿ ಕೆ.ಎನ್.ಉಮೇಶ್ ಮಾತನಾಡಿ, ಚುಚ್ಚುವ ಸಂಕಟಗಳು ಎಲ್ಲಾ ಜನವಿಭಾಗಗಳಿಗೆ ಎದುರಾಗಿವೆ. ಆದರೆ, ಸಂಕಟವನ್ನೇ ಸಂಭ್ರಮಿಸುವ ವ್ಯವಸ್ಥೆಯನ್ನು ಸೃಷ್ಟಿ ಮಾಡಲಾಗಿದೆ. ಮಾತ್ರವಲ್ಲ, ಸಂಕಷ್ಟದ ಪ್ರಮಾಣವನ್ನು ದಿನವೂ ಹೆಚ್ಚಿಸುವ ಸಲುವಾಗಿ ಕರ್ನಾಟಕದಲ್ಲಿ ಕಾರ್ಮಿಕರ ವೇತನ ಪ್ರಮಾಣ ಕಸಿದುಕೊಳ್ಳಲಾಗಿದೆ. ಕಾರ್ಮಿಕ ಕಾಯ್ದೆ ತೆಗೆದುಹಾಕಿ ಕಾರ್ಮಿಕ ಸಂಹಿತೆ ತರಲಾಗಿದೆ, ಮುಷ್ಕರ ಮಾಡುವಂತಿಲ್ಲ. ಹಕ್ಕು ಕೇಳುವಂತಿಲ್ಲ. ಶ್ರಮ ಮಾನದನ್ ಎಂಬ ಡಂಬಾಚಾರದ ಯೋಜನೆ ಕೊಟ್ಟು, ಶ್ರಮ ಏವ ಜಯತೆ ಎನ್ನುತ್ತಾರೆ. ಇಂಥವರನ್ನು ಈ ಚುನಾವಣೆಯಲ್ಲಿ ಅಧಿಕಾರದಲ್ಲಿ ಉಳಿಸಬೇಕಾ? ಎಂದು ಪ್ರಶ್ನಿಸುತ್ತ, ಬಿಜೆಪಿ 80 ಸೀಟು ದಾಟದಂತೆ ನೋಡಿಕೊಳ್ಳಬೇಕು ಎಂದರು.

'ಕೇಂದ್ರ' ಅಲ್ಲ 'ಒಕ್ಕೂಟ'

ಒಕ್ಕೂಟ ವ್ಯವಸ್ಥೆ ಕುರಿತು ಡಾ.ಟಿ.ಆರ್. ಚಂದ್ರಶೇಖರ್ ಅವರು, 'ಕೇಂದ್ರ' ಸರ್ಕಾರ ಎಂಬ ಪದ ಸಂವಿಧಾನದಲ್ಲಿ ಇಲ್ಲ. ಫೆಡರೇಷನ್ ಎಂಬ ಪದವೂ ಇಲ್ಲ. ಅನುಚ್ಛೇದ ಒಂದರಲ್ಲಿ ಯೂನಿಯನ್ ಎಂಬ ಪದ ಇದೆ. ಭಾರತ 28 ರಾಜ್ಯ 8 ಕೇಂದ್ರಾಡಳಿತ ಪ್ರದೇಶಗಳ ಒಕ್ಕೂಟ. ನಾವು ಕೇಂದ್ರ ಸರ್ಕಾರ ಪದ ಬಳಕೆ ಮಾಡದೆ, ಒಕ್ಕೂಟ ಸರಕಾರ ಎಂದೇ ಬಳಕೆ ಮಾಡುವಂತೆ ತಮಿಳು ನಾಡಿನ ಸರ್ಕಾರ ಆದೇಶ ಹೊರಡಿಸಿದೆ. 13 ನ್ಯಾಯಾಧೀಶರ ಪೀಠ ಮೂಲರಚನೆ ಬದಲಾವಣೆ ಮಾಡಲು ಅವಕಾಶ ಇಲ್ಲ ಎಂದು ಹೇಳಿದೆ. ಒಕ್ಕೂಟ ವ್ಯವಸ್ಥೆ ನಮ್ಮ ಪರಂಪರೆಯ ಭಾಗ. ಇದಕ್ಕೆ ಇಂದು ಅಪಾಯ ಎದುರಾಗಿದೆ. ಈಗ ಆಡಳಿತ ಮಾಡುವವರಿಗೆ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ. ಸಂವಿಧಾನವನ್ನು ಸಂಪೂರ್ಣ ಬದಲಾವಣೆ ಮಾಡಬೇಕು ಎಂದು ಆರ್.ಎಸ್.ಎಸ್. ಹೇಳುತ್ತದೆ.

ಜಿಎಸ್‌ಟಿ ಒಕ್ಕೂಟ ವ್ಯವಸ್ಥೆಗೆ ದಕ್ಕೆ ತಂದಿದೆ. ಇದು ರಾಜ್ಯಗಳ ಅಧಿಕಾರ ಕಸಿದುಕೊಂಡಿದೆ. ರಾಜ್ಯಗಳಿಗೆ ಬರುತ್ತಿದ್ದ ಆದಾಯ ಕಸಿದುಕೊಂಡಿರುವ ಒಕ್ಕೂಟ ಸರ್ಕಾರ ರಾಜ್ಯಗಳಿಗೆ ಸಾಲದ ರೂಪದಲ್ಲಿ ಸಹಾಯ ಮಾಡತೊಡಗಿದೆ. ರಾಜ್ಯ ಸರ್ಕಾರದ ತೆರಿಗೆ ಮೂಲ ದೊಡ್ಡ ಪ್ರಮಾಣದಲ್ಲಿ ಇಲ್ಲ. ಒಕ್ಕೂಟ ಸರಕಾರಕ್ಕೆ ಇಂತಹ ಅವಕಾಶ ಇದೆ. ರಾಜ್ಯಗಳ ತೆರಿಗೆ ಪಾಲನ್ನು ಶೇ.17ರಷ್ಟು ಮತ್ತು 15ನೇ ಹಣಕಾಸು ಆಯೋಗ 15ಕ್ಕೆ ಇಳಿಸಿದೆ. ಇದಕ್ಕೆ ಕಾರಣರಾದ ಬಿಜೆಪಿ ಪಕ್ಷವನ್ನು ಸೋಲಿಸಬೇಕಿದೆ ಎಂದು ಹೇಳಿದರು.

ಡಾ.ಕೆ. ಷರೀಫಾ ಸಾರ್ವಜನಿಕರಿಗೆ ಮನವಿಯನ್ನು ಮಂಡಿಸಿದರು. ಸಿಪಿಐ(ಎಂ) ಕಾರ್ಯದರ್ಶಿ ಯು.ಬಸವರಾಜ್, ದಲಿತ ಮುಖಂಡ ಮತ್ತು ಆರ್.ಪಿ.ಐ ನಾಯಕ ಮೋಹನರಾಜ್ ಮತ್ತು ಎ.ಐ.ಸಿ.ಸಿ.ಟಿ.ಯು ನಾಯಕ ಮಣಿ ಕ್ರಿಯಾತ್ಮಕ ಮಾತುಗಳನ್ನು ಆಡಿದರು.

ಚಿಂತನಾಗೋಷ್ಠಿಯಲ್ಲಿ ಅಂಗೀಕರಿಸಲಾದ ಜನತೆಗೆ ಮನವಿ

ನಾಗರೀಕ ಬಂದುಗಳೇ,

ಇದೀಗ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ನಮ್ಮೆದುರಿಗಿದೆ. ಭಾರತದ ಸಂವಿಧಾನ ತನ್ನ ಪ್ರಜೆಗಳಿಗೆ ಅಗತ್ಯವೆನಿಸಿದ ಸರ್ಕಾರವನ್ನು ಆರಿಸಿಕೊಳ್ಳುವ ಮಹತ್ತರ ಪ್ರಜಾಪ್ರಭುತ್ವದ ಹಕ್ಕನ್ನು ನೀಡಿದೆ. ಕಳೆದ ಐದು ವರ್ಷಗಳ ಆಡಳಿತವನ್ನು, ವಿಶೇಷವಾಗಿ ಕಳೆದ ನಾಲ್ಕು ವರ್ಷಗಳನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಿ ಮತದಾನ ಮಾಡಬೇಕಿದೆ. ಎಲ್ಲಾ ಮತದಾರರೂ ಮತದಾನವನ್ನು ಮಾಡುವ ಮೂಲಕ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು.

ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಮತ್ತು ರಾಷ್ಟ್ರದಲ್ಲಿ ಜರುಗುತ್ತಿರುವ ವಿದ್ಯಮಾನಗಳು ಆತಂಕ ಕ್ಕೆ ಕಾರಣವಾಗಿವೆ.

ನಿರುದ್ಯೋಗ, ಬಡತನ, ಹಸಿವು, ದುಬಾರಿ ಶಿಕ್ಷಣ, ವಸತಿಹೀನತೆ, ವಲಸೆ, ಜಾತೀಯತೆ, ಲಿಂಗತಾರತಮ್ಯ, ಮುಂತಾಗಿ ಬಹುವಾಗಿ ಕಾಡಿತು. ಭ್ರಷ್ಟಾಚಾರ, ಅನೈತಿಕ ಹಗರಣಗಳು ಸ್ಫೋಟಗೊಂಡವು. ಆರ್ಥಿಕ ಕೊರತೆ ಬಹುವಾಗಿ ಕಾಡಿತು. ದುಡಿಯುವವರ ಮೇಲಿನ ದಬ್ಬಾಳಿಕೆಗಳು, ಮಹಿಳೆ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳು ಹೊಸ ಸ್ವರೂಪ ಪಡೆದವು. ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದವರ ಮೇಲೆ, ಅವರ ಅಭಿವ್ಯಕ್ತಿ ಸ್ವಾತಂತ್ರವನ್ನು ದಮನ ಮಾಡುವ ಕ್ರಮಗಳು, ಜೀವ ಬೆದರಿಕೆಗಳು ನಡೆದವು. ಕಾನೂನು ಬದ್ಧ ಆಡಳಿತ ಕುಸಿತವಾಯಿತು. ಕನ್ನಡ ನಾಡಿನ ವೈವಿಧ್ಯ ಸಂಸ್ಕೃತಿ, ಅಸ್ಮಿತತೆಯನ್ನು ಇಲ್ಲವಾಗಿಸುವ ಯತ್ನಗಳು ನಡೆದವು.

ಮುಖ್ಯವಾಗಿ ಶಾಂತಿ, ಸಾಮರಸ್ಯ, ಸೌಹಾರ್ದತೆಯ ನಾಡು ಮತೀಯ ದ್ವೇಷದ ಕಿಚ್ಚಿನಿಂದ ದಹಿಸಲ್ಪಟ್ಟಿತು. ಅದನ್ನು ಮತ್ತಷ್ಟು ವಿಸ್ತರಿಸುವ ತೀವ್ರ ಪ್ರಯತ್ನಗಳಿವೆ. ಈಗಲೂ ಕಾರ್ಪೋರೇಟ್ ಮತ್ತು ಕೋಮುವಾದಿ ಶಕ್ತಿಗಳು ಅಧಿಕಾರ ಹಿಡಿಯಲು ಸರ್ವ ಪ್ರಯತ್ನ ಮಾಡುತ್ತಿವೆ. ಇಂತಹ ಸನ್ನಿವೇಶದಲ್ಲಿ ಕರ್ನಾಟಕದ ಸೌಹಾರ್ದ ಸಂಸ್ಕೃತಿಯನ್ನು, ಶಾಂತಿ ಸಾಮರಸ್ಯವನ್ನು, ಆರ್ಥಿಕ ಸ್ವಾವಲಂಬನೆಯನ್ನು ಸಂರಕ್ಷಿಸಿಕೊಳ್ಳ ಬೇಕಿದೆ. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಿದೆ.

ಈ ಹಿನ್ನೆಲೆಯಲ್ಲಿ ಜಾತ್ಯಾತೀತತೆ, ಪ್ರಜಾಪ್ರಭುತ್ವದ ಈ ಅವಕಾಶವನ್ನು ಸೂಕ್ತವಾಗಿ ಬಳಸಲು ಮನವಿ ಮಾಡುತ್ತೇವೆ.

ಸೌಹಾರ್ದ ಕರ್ನಾಟಕ
ಹಾಗೂ ವಿವಿಧ ಜನಪರ ಸಂಘಟನೆಗಳು

– ಮಂಡನೆ: ಡಾ.ಕೆ.ಷರೀಫಾ

ಎಲ್‌ಐಸಿ ಉಳಿಸಲು ಏಜೆಂಟರುಗಳ ದೃಢ ನಿರ್ಧಾರ



ಎಲ್‌ಐಸಿ ಸಂಸ್ಥೆಯು ವಿಶ್ವದ ಎತ್ತರದ ಶಿಖರಗಳನ್ನು ಮುಟ್ಟಿದ ದೊಡ್ಡ ಕೋಟೆಯಾಗಿ ಬೆಳೆದುನಿಂತಿದೆ. ಈ ಸಂಸ್ಥೆ ಇಷ್ಟು ಎತ್ತರಕ್ಕೆ ಬೆಳೆಯಲು ಕಲ್ಲುಗಳನ್ನು ಸಂಗ್ರಹಿಸಿದವರು, ಹೊತ್ತವರು, ಅವುಗಳನ್ನು ಜೋಡಿಸಿದವರು ಇದರ ಏಜೆಂಟ್ಗಳು. ಎಲ್ಲ ಎಲ್‌ಐಸಿ ಏಜೆಂಟರು ಬಸ್ಸುಗಳು ಹೋಗದ ರಸ್ತೆಗಳಲ್ಲಿ ನಡೆದು ಹೋಗುತ್ತಿದ್ದರು. ಸಂಪರ್ಕವೇ ಇಲ್ಲದ ಹಳ್ಳಿಗಳಿಗೂ ಏಜೆಂಟರು ಎಲ್‌ಐಸಿಯ ರಾಯಭಾರಿಗಳಾಗಿ ಹೋಗುತ್ತಿದ್ದರು. ಸಾರ್ವತ್ರಿಕ ವಿಮೆ ತಲುಪದ ಬಡವರ ಮನೆಗಳಿಗೆ ಇದು ಹರಡಿತು.

ಭಾರತದಲ್ಲಿ ಜೀವ ವಿಮೆ ಒಂದು ಸರಕಲ್ಲ. ಮಾರಾಟವಾಗುವ ವಸ್ತುವಾಗಿಯೇ ಇತ್ತು. ಇದೆ. ಯಾರೇ ಒಬ್ಬರನ್ನು ಪಾಲಿಸಿ ತೆಗೆದುಕೊಳ್ಳುವಂತೆ ಮಾಡುವುದು ಅಷ್ಟು ಸುಲಭವಲ್ಲ. ಒಬ್ಬ ಏಜೆಂಟ್ 10 ಜನರನ್ನು ಭೇಟಿ ಮಾಡಿದರೆ ಒಬ್ಬ ವ್ಯಕ್ತಿಯನ್ನು ಮಾತ್ರ ಪಾಲಿಸಿ ತೆಗೆದುಕೊಳ್ಳುವಂತೆ ಮಾಡಬಹುದು. ಇವರು ನಿಯಮಿತವಾಗಿ ಭೇಟಿಯಾದರೆ ಮಾತ್ರ ಇದು ಸಾಧ್ಯ. ಈ ಹಿನ್ನೆಲೆಯಲ್ಲಿ ಎಲ್‌ಐಸಿ ಏಜೆಂಟರಿಗೆ ಸಾಮಾಜಿಕ ಭದ್ರತೆ ಇಲ್ಲದ ವಾತಾವರಣದಲ್ಲಿ ಕೋಟ್ಯಂತರ ಜನರಿಗೆ ಸಾಮಾಜಿಕ ಭದ್ರತೆಯನ್ನು ಎಲ್‌ಐಸಿ ಖಾತ್ರಿಪಡಿಸಿದೆ. ಆದರೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಖಾಸಗಿ ಕಂಪನಿಗಳು ಕೋಟ್ಯಂತರ ಆದಾಯ ಹೊಂದಿರುವ ಕ್ಷೇತ್ರವನ್ನು ಬಿಡುತ್ತವೆಯೇ?

ಎಲ್‌ಐಸಿ ಮೇಲಿನ ಇವರ ದಾಳಿಗಳು 1983 ರಲ್ಲಿ ಪ್ರಾರಂಭವಾದವು. ಎಲ್‌ಐಸಿಯನ್ನು ಐದು ಘಟಕಗಳಾಗಿ ವಿಭಜಿಸುವ ಮಸೂದೆ, ಸೂಪರ್ 301, ಮಲ್ಹೋತ್ರಾ ಸಮಿತಿ ವರದಿ, ಖಾಸಗೀಕರಣ, ವಿದೇಶಿ ಹೂಡಿಕೆ ಹೆಚ್ಚಳ, ಷೇರು ಮಾರಾಟ ನಂತರದ ಬಾಣಗಳಾಗಿವೆ. ಎಲ್‌ಐಸಿ ಮೇಲೆ ದಾಳಿ ಮಾಡುವುದು ಎಂದರೆ ಏಜೆಂಟರ ಮೇಲೆ ದಾಳಿ ಮಾಡುವುದು. ಈಗ ಏಜೆಂಟರ ಮೇಲೂ ದಾಳಿ ಆರಂಭವಾಗಿದೆ.

ಏಜೆಂಟರ ಮೇಲೆ ದಾಳಿ:

2009 ರಲ್ಲಿ ಸರ್ಕಾರಿ ಪಿಂಚಣಿ ನಿಧಿ ಶಿಸ್ತಿನ ಅಭಿವೃದ್ಧಿ ಆಯೋಗದ ಅಧ್ಯಕ್ಷ ಡಿ. ಸ್ವರೂಪ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಕಮಿಷನ್ ಕಡಿತ ಮತ್ತು ನವೀಕರಣ ಕಮಿಷನ್ ಅನಗತ್ಯ ಎಂದು ಸ್ವರೂಪ್ ಸಮಿತಿಯು ಶಿಫಾರಸು ಮಾಡಿತು. ಇದು ಏಜೆಂಟರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ 'ಎಲ್‌ಐಸಿ ಏಜೆಂಟ್ಸ್ ಆರ್ಗನೈಸೇಸನ್ ಆಫ್ ಇಂಡಿಯಾ' (ಲಿಕಾಯ್–LICAOI) ಎಂಬ ಹೊಸ ಸಂಘಟನೆ ಹುಟ್ಟಿಕೊಂಡಿತು. ಈ ಸಂಘಟನೆಯು ವಿಶಾಲ ದೃಷ್ಟಿಯೊಂದಿಗೆ ಏಜೆಂಟರನ್ನು ಸಜ್ಜುಗೊಳಿಸಿತು. ಸ್ವರೂಪ್ ಸಮಿತಿಯ ಶಿಫಾರಸುಗಳ ವಿರುದ್ಧ ಲಿಕಾಯ್ ನಡೆಸಿದ ತೀವ್ರ ಪ್ರತಿಭಟನೆಗೆ ಪ್ರತಿಕ್ರಿಯೆಯಾಗಿ ಅಂದಿನ ಕೇಂದ್ರ ಸರ್ಕಾರವು ಈ ಶಿಫಾರಸನ್ನು ಕೈಬಿಟ್ಟಿತು. LICAOI ನ ಅಖಿಲ ಭಾರತ ಅಧ್ಯಕ್ಷರಾಗಿರುವ ಕಾಮ್ರೇಡ್ ಬಸುದೇವ್ ಆಚಾರ್ಯ ಅವರು ಸಂಸತ್ತಿನಲ್ಲಿ ಮೊದಲ ಬಾರಿಗೆ ಎಲ್‌ಐಸಿ ಏಜೆಂಟ್ಗಳಿಗಾಗಿ ವೈಯಕ್ತಿಕ ವೈಯಕ್ತಿಕ ಬಿಲ್ ತಂದು ಮಾತನಾಡಿದರು. ಅದರ ಆಧಾರದ ಮೇಲೆ, LICAOI ಪರವಾಗಿ, ರಾಷ್ಟ್ರೀಯ ಅಸೆಂಬ್ಲಿ ಸ್ಥಾಯಿ ಸಮಿತಿಯಲ್ಲಿ ಏಜೆಂಟರ ಸಮಸ್ಯೆಗಳನ್ನು ಎತ್ತುವ ಆಧಾರದ ಮೇಲೆ ಮುಟ್ಟುಗೋಲು ಹಾಕಿಕೊಳ್ಳಲಿರುವ ಏಜೆಂಟರ ಹಕ್ಕುಗಳನ್ನು ಕಾಪಾಡಿಕೊಳ್ಳಲಾಗಿದೆ.

ಎಲ್‌ಐಸಿ ಯ ಶೇ. 93 ವ್ಯವಹಾರವನ್ನು ವೈಯಕ್ತಿಕ ಏಜೆಂಟ್ಗಳಿಂದ ತರಲಾಗುತ್ತದೆ ಎಂಬುದೇ ಎಲ್‌ಐಸಿ ಏಜೆಂಟ್ಗಳ ವಿಶೇಷತೆ. ಖಾಸಗಿ ಎಲ್‌ಐಸಿ ಏಜೆಂಟರು ಸಂಗ್ರಹಿಸಿದ ಉಳಿತಾಯದ ಹಣವನ್ನು ಯೋಜನೆಗಳಿಗೆ ಹೂಡಿಕೆ ಮಾಡುವುದರಿಂದ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ. ಇದು ಕೂಡ ಎಲ್‌ಐಸಿ ಏಜೆಂಟರುಗಳು ಎಲ್‌ಐಸಿ ರಾಷ್ಟ್ರೀಯ ಆರ್ಥಿಕತೆಗೆ ನೀಡುವ ದೊಡ್ಡ ಕೊಡುಗೆಯಾಗಿದೆ. ಕರೋನಾ ಅವಧಿಯಲ್ಲಿ ಏಜೆಂಟ್ಗಳಿಗೆ ಯಾವುದೇ ಸುರಕ್ಷತಾ ಸಾಧನಗಳನ್ನು ಒದಗಿಸದ ವಾತಾವರಣದಲ್ಲಿ ಏಜೆಂಟ್‌ರು ತಮ್ಮ ಸೇವೆಗಳನ್ನು ಒದಗಿಸುವುದನ್ನು ಮುಂದುವರೆಸುವ ಮೂಲಕ ಹೊಸ ಪಾಲಿಸಿದಾರರನ್ನು ತಂದರು. ಈ ಸಂದರ್ಭದಲ್ಲಿ ವಿವಿಧ ಏಜೆಂಟರು ಸೋಂಕಿಗೆ ತುತ್ತಾಗಿ ಪರಿಹಾರ ಸಿಗದೆ ಸಾವನ್ನಪ್ಪಿರುವುದು ದೊಡ್ಡ ದುರಂತ.

ಎಲ್‌ಐಸಿ ಏಜೆಂಟರ ಮೇಲಿನ ದಾಳಿ ಮುಂದುವರಿದಿದೆ. ಎರಡು ತಿಂಗಳ ಹಿಂದೆಯೂ ವಿಮಾ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎ) ಭೀಮಾ ಸುಗಮ ಎಂಬ ಆ್ಯಪ್ ಬಿಡುಗಡೆ ಮಾಡುವುದಾಗಿ ಘೋಷಿಸಿತ್ತು. ಲಿಕಾಯ್ ತಕ್ಷಣವೇ ಇದನ್ನು ವಿರೋಧಿಸಿ ಹೈದರಾಬಾದ್ ಐಆರ್ಡಿಎ ಕಚೇರಿ ಎದುರು ತೀವ್ರ ಪ್ರತಿಭಟನೆ ನಡೆಸಿತ್ತು.

ಸಂಸತ್ತಿನಲ್ಲಿ ಪ್ರತಿಧ್ವನಿ:

ಅದೇ ಸಮಯದಲ್ಲಿ, ಏಜೆಂಟರ ಹಿತಾಸಕ್ತಿಗಳನ್ನು ರಕ್ಷಿಸಲು ಲಿಕಾಯ್ ಸಂಘಟನೆಯ ಬೇಡಿಕೆಗಳು ಮತ್ತು ದೃಷ್ಟಿಕೋನಗಳು ಸಂಸತ್ತಿನ ಸದಸ್ಯರ ಮೂಲಕ ದೆಹಲಿಯಲ್ಲಿ ಪ್ರತಿಧ್ವನಿಸಲ್ಪಟ್ಟವು. ತಮಿಳುನಾಡಿನ ಕೊಯಮತ್ತೂರು ಸಂಸದ ಬಿ.ಆರ್. ನಟರಾಜನ್ ಹಾಗೂ ಕಲ್ಲಕುರಿಚಿ ಕ್ಷೇತ್ರದ ಸಂಸದ ಡಾ. ಪೊನ್. ಗೌತಮ ಸಿಕಾಮಣಿ ಅವರು ಸಂಸತ್ತಿನಲ್ಲಿ ಇದರ ಕರಿತು ಸವಿಸ್ತಾರವಾಗಿ ಮಾತನಾಡಿದರು. ಹೈದರಾಬಾದ್ ಮುಷ್ಕರವು ಏಜೆಂಟರತ್ತ ಬಿಡುತ್ತಿರುವ ಬಾಣಕ್ಕೆ ತಾತ್ಕಾಲಿಕ ವಿರಾಮ ನೀಡಿದ್ದು, ಎಲ್‌ಐಸಿ ಏಜೆಂಟರ ಹಕ್ಕುಗಳನ್ನು ರಕ್ಷಿಸಲು ಮತ್ತು ಎಲ್‌ಐಸಿಯನ್ನು ಸರ್ಕಾರಿ ಸಂಸ್ಥೆಯಾಗಿ ಇರಿಸಲು ನಾವು ನಮ್ಮ ಹೋರಾಟವನ್ನು ಮುಂದುವರಿಸಬೇಕಾಗಿದೆ.

–ಎಸ್‌ಎ ಕಲಾಂ

ಕನಿಷ್ಟ ಬೆಂಬಲ ಬೆಲೆ: ಕೇಂದ್ರ ಸಚಿವರ ವಿಲಕ್ಷಣ ತರ್ಕ...

ಪುಟ 13 ರಿಂದ

ಇದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಒಂದು ಸಾಧನವಾಗುತ್ತದೆ. ಆಹಾರ ಭದ್ರತೆಯನ್ನು ಕೇವಲ ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯುವ ದೃಷ್ಟಿಯಲ್ಲಿ ನೋಡುವ ಕ್ರಮವು ಒಂದು ಅವಿವೇಕದ ಕೆಲಸವಾಗುತ್ತದೆ. ಆಹಾರ ಭದ್ರತೆ ಎಂದರೆ, ಆಹಾರ ಧಾನ್ಯಗಳಿಗೆ ಅರ್ಥವ್ಯವಸ್ಥೆಯಲ್ಲಿ ಸಾಕಷ್ಟು ಬೇಡಿಕೆ ಮತ್ತು ಸಾಕಷ್ಟು ಪೂರೈಕೆ ಇರುವಂತಹ ಪರಿಸ್ಥಿತಿಯೇ. ಅಂತಹ ಒಂದು ಪರಿಸ್ಥಿತಿಯನ್ನು, ಆಹಾರ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳು ಈ ಎರಡನ್ನೂ ಒಳಗೊಳ್ಳುವ ಕನಿಷ್ಟ ಬೆಂಬಲ ಬೆಲೆ ಆಳ್ವಿಕೆಯ ಮೂಲಕ ಮಾತ್ರ ಖಚಿತಪಡಿಸಿಕೊಳ್ಳಬಹುದು.

ಏಕೆ ಈ ಅಸಂಬದ್ಧ ತರ್ಕಗಳು?

ರಬ್ಬರ್ ಮಾರುಕಟ್ಟೆಯಲ್ಲಿ ತಮ್ಮ ಸರ್ಕಾರವು ಹಸ್ತಕ್ಷೇಪ ಮಾಡದಿರುವ ಕ್ರಮವನ್ನು ಸಮರ್ಥಿಸಿಕೊಳ್ಳಲು ಕೇಂದ್ರ ಸರ್ಕಾರದ ಹಿರಿಯ ಸಚಿವರೊಬ್ಬರು ಇಂತಹ ಅಸಂಬದ್ಧ ಹೇಳಿಕೆಗಳನ್ನು ಏಕೆ ನೀಡುತ್ತಾರೆ ಎಂದು ಕೇಳಬಹುದು. ಈ ಸರ್ಕಾರವು ಆಹಾರ ಧಾನ್ಯಗಳಿಗೆ ಕನಿಷ್ಟ ಬೆಂಬಲ ಬೆಲೆ ಅಗತ್ಯದ ಬಗ್ಗೆ ಈಗ ಮಾತನಾಡುತ್ತಿದೆ. ವಾಣಿಜ್ಯ ಬೆಳೆಗಳಿಗೆ ಅಗತ್ಯವಿಲ್ಲ ಎಂದು ಹೇಳುತ್ತಿದೆ. ಆದರೆ, ಕೆಲವು ತಿಂಗಳ ಹಿಂದಷ್ಟೇ ಕುಖ್ಯಾತ ಮೂರು ಕೃಷಿ ಕಾನೂನುಗಳ ಮೂಲಕ ಕನಿಷ್ಟ ಬೆಂಬಲ ಬೆಲೆ ಆಳ್ವಿಕೆಯನ್ನು ಆಹಾರ ಧಾನ್ಯಗಳಿಗೂ ರದ್ದುಪಡಿಸಲು ಯೋಜಿಸುತ್ತಿತ್ತು. ಆ ಕಾನೂನುಗಳನ್ನು ಹಿಂಪಡೆಯುವವರೆಗೂ ರೈತರು ಇಡೀ ವರ್ಷ ಪೂರ್ತಿ ಹೋರಾಟ ಮಾಡಿದರು ಎಂಬುದನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ.

ಕಾರ್ಪೊರೇಟ್–ಹಿಂದುತ್ವ ಮೈತ್ರಿಯನ್ನು ಅವಲಂಬಿಸಿರುವ ಈ ಸರ್ಕಾರವು ಕೃಷಿಯಲ್ಲಿ ಕಾರ್ಪೊರೇಟ್‌ಗಳ ಪ್ರವೇಶವನ್ನು ಉತ್ತೇಜಿಸಲು ಉತ್ಸುಕವಾಗಿದೆ. ಕಾರ್ಪೊರೇಟ್‌ಗಳು ರೈತರೊಂದಿಗೆ ನೇರ ಸಂಬಂಧವನ್ನು ಏರ್ಪಡಿಸಿಕೊಳ್ಳುವ ಮೂಲಕ ಕೃಷಿಯನ್ನು ಕಾರ್ಪೊರೇಟ್ ಬೇಡಿಕೆಗಳಿಗೆ ಅನುಗುಣವಾಗಿ ರೂಪಿಸಲಾಗುವುದು. ದೇಶೀಯ ಮತ್ತು ವಿದೇಶಿ ಕೃಷಿ–ವ್ಯವಹಾರೋದ್ಯಮಗಳಿಗೆ ರೈತಾಪಿಯು ಅಧೀನವಾಗಿರಬೇಕು ಎಂದು ನವ ಉದಾರವಾದಿ ಆಳ್ವಿಕೆಯು ಬಯಸುತ್ತದೆ. ಕೇಂದ್ರ ಸರ್ಕಾರವು "ರಾಷ್ಟ್ರದ" ಹಿತಾಸಕ್ತಿಗಳನ್ನು ಎತ್ತಿಹಿಡಿಯುವುದಾಗಿ ಎಷ್ಟೇ ಗಟ್ಟಿಯಾಗಿ ಹೇಳಿಕೊಳ್ಳುತ್ತಿದ್ದರೂ ಸಹ, ವಿಶ್ವ ವ್ಯಾಪಾರ ಸಂಘಟನೆಯ ಸೂಚನೆಯ ಅನುಸಾರವಾಗಿ ಅದು ಕೃಷಿ ವಲಯದಲ್ಲಿ ನವ ಉದಾರವಾದಿ ಕಾರ್ಯಸೂಚಿಯನ್ನು ಮುಂದುವರಿಸುತ್ತಿದೆ.

ವಿಶ್ವ ವ್ಯಾಪಾರ ಸಂಘಟನೆಯು(ಡಬ್ಲ್ಯುಟಿಒ) ಸರ್ಕಾರವು ಕೃಷಿಗೆ ಕೊಡುವ ಬೆಂಬಲದಲ್ಲಿ "ಮಾರುಕಟ್ಟೆ–ವಿರೂಪಗೊಳಿಸುವ" ಬೆಂಬಲ ಮತ್ತು "ಮಾರುಕಟ್ಟೆ–ವಿರೂಪಗೊಳಿಸದ" ಬೆಂಬಲ ಎಂಬ ಒಂದು ಅಸಂಬದ್ಧ ವ್ಯತ್ಯಾಸವನ್ನು ಮಾಡುತ್ತದೆ. ಕನಿಷ್ಟ ಬೆಂಬಲ ಬೆಲೆ ಮತ್ತು ಧಾನ್ಯಗಳ ಖರೀದಿಯನ್ನು ಒಳಗೊಂಡಿರುವ ಪದ್ಧತಿಯನ್ನು "ಮಾರುಕಟ್ಟೆ–ವಿರೂಪಗೊಳಿಸುವ" ಕ್ರಮವೆಂಬ ನೆಲೆಯಲ್ಲಿ ವಿರೋಧಿಸುತ್ತದೆ. ಆದರೆ ಅಮೆರಿಕದ ಮತ್ತು ಯೂರೋಪಿನ ಸರ್ಕಾರಗಳು ತಮ್ಮ ರೈತರಿಗೆ ನೀಡುವ ಬಿಲಿಯನ್ ಗಟ್ಟಲೆ ಡಾಲರ್‌ಗಳ ನೇರ ಆದಾಯ ಬೆಂಬಲವನ್ನು "ಮಾರುಕಟ್ಟೆಯೇತರ–ವಿರೂಪಗೊಳಿಸುವ" ಕ್ರಮ ಎಂಬ ನೆಲೆಯಲ್ಲಿ ಅನುಮತಿಸುತ್ತದೆ. ಒಂದು ಪರಿಪೂರ್ಣ ಸ್ಪರ್ಧಾತ್ಮಕ ಮಾರುಕಟ್ಟೆ ಇದ್ದಾಗ ಮಾತ್ರ "ಬೆಲೆ ವಿರೂಪಗಳು" "ದಕ್ಷತೆಯನ್ನು" ದುರ್ಬಲಗೊಳಿಸುತ್ತವೆ ಮತ್ತು ಅದಕ್ಕಾಗಿಯೇ ಅವುಗಳನ್ನು ದೂರವಿಡಲಾಗುತ್ತದೆ. ಆದರೆ, ಏಕಸ್ವಾಮ್ಯಗಳು ಮತ್ತು ಕೆಲ ಮಂದಿಯ ಒಡೆತನದ ಸಂಸ್ಥೆಗಳು (oligopoly) ಇವುಗಳ ಅಸ್ತಿತ್ವ ಇಂದಿನ ಜಗತ್ತಿನ ವಾಸ್ತವ ಲಕ್ಷಣ. ಇದರ ಪ್ರಮುಖ ಉದಾಹರಣೆಗಳೆಂದರೆ, ಕೃಷಿ–ಕಾರ್ಪೊರೇಟ್‌ಗಳೇ. ಹಾಗಾಗಿ, ಕೃಷಿಗೆ ಕೊಡುವ ಬೆಂಬಲವನ್ನು "ಮಾರುಕಟ್ಟೆ–ವಿರೂಪಗೊಳಿಸುವ" ಅಥವಾ "ಮಾರುಕಟ್ಟೆ–ವಿರೂಪಗೊಳಿಸದ" ಎಂಬುದಾಗಿ ವ್ಯತ್ಯಾಸಗೊಳಿಸುವ ಕ್ರಮವು ಅಸಂಬದ್ಧವಾಗುತ್ತದೆ.

ಪ್ರಸ್ತುತ ಸರ್ಕಾರವು ತನ್ನ ವರ್ಗ ಸ್ವರೂಪಕ್ಕೆ ಅನುಗುಣವಾಗಿ, ರೈತ–ಕೃಷಿಯನ್ನು ಕಾರ್ಪೊರೇಟ್‌ಗಳು ದುರ್ಬಲಗೊಳಿಸಬೇಕು ಎಂದು ಬಯಸುತ್ತದೆ. ಆದ್ದರಿಂದ, ರಬ್ಬರ್ ಬೆಳೆಗಾರರನ್ನು ಬೆಂಬಲಿಸಲು ನಿರಾಕರಿಸುತ್ತದೆ. ಆದರೆ ಕೇರಳ ಸರ್ಕಾರವು ಹೊಂದಿರುವ ಸಂಪನ್ಮೂಲಗಳು ಸೀಮಿತವಿದ್ದರೂ ಸಹ ಅದು ಈ ಬೆಳೆಗಾರರನ್ನು ರಕ್ಷಿಸಲು ಮುಂದೆ ಬಂದಿದೆ. ಕೇರಳವು 2014ರಲ್ಲಿ ರಬ್ಬರ್ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಿತ್ತು. ಅದರ ಮೊತ್ತವನ್ನು ಇತ್ತೀಚಿನ ಬಜೆಟ್‌ನಲ್ಲಿ 600 ಕೋಟಿ ರೂ.ಗಳಿಗೆ ಏರಿಸಿದೆ ಮತ್ತು ಪ್ರತಿ ಕಿಲೋಗೆ 170 ರೂ.ಗಳ ಕನಿಷ್ಟ ಬೆಲೆಯನ್ನು ನಿಗದಿಪಡಿಸಿದೆ. ರೈತರು ಮಾರುಕಟ್ಟೆಯಲ್ಲಿ ಪಡೆಯುವ ಬೆಲೆ ಮತ್ತು ತಾನು ನಿಗದಿಪಡಿಸಿದ ಕನಿಷ್ಟ ಬೆಲೆ, ಇವುಗಳ ನಡುವೆ ವ್ಯತ್ಯಾಸವಾಗುವ ಮೊತ್ತವನ್ನು ಪರಿಹಾರವಾಗಿ ಕೇರಳ ಸರ್ಕಾರ ಕೊಡುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE APRIL 17-23, 2023 Price: Rs. 10/- Date of Publication: 14 APRIL 2023 RNI No. KARKAN /2006/17926 Posted on 18-04-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2





ಫ್ಯಾಸಿಸ್ಟ್ ಮಾದರಿಯ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಬೇಕು

'ಸೌಹಾರ್ದ ಕರ್ನಾಟಕ' ಮತ್ತು ಇತರ ಎಡ-ಪ್ರಜಾಸತ್ತಾತ್ಮಕ ಸಂಘಟನೆಗಳ ಕರೆ

"ಫ್ಯಾಸಿಸ್ಟ್ ಮಾದರಿಯ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಬೇಕು. ಸಾಮಾಜಿಕ ನ್ಯಾಯ ಸ್ಥಾಪಿಸಲು, ಪ್ರಾದೇಶಿಕ ಅಸ್ಮಿತೆ, ಸ್ವಾಯತ್ತತೆಗಳನ್ನು ಕಾಪಾಡುವ ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಲು, ಸೌಹಾರ್ದ ಪರಂಪರೆಯ ಮೇಲೆ ದಾಳಿಯನ್ನು ಹಿಮ್ಮೆಟ್ಟಿಸಲು, ದಲಿತರ, ಮಹಿಳೆಯರ, ಮುಸ್ಲಿಮರ ಸಂಕಟಗಳಿಗೆ ಕಿವಿಯಾಗುವ ಸಾಂತ್ವನ ಕೊಡುವ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಿಕೊಳ್ಳಲು ಬಿಜೆಪಿ ಸೋಲು ಅಗತ್ಯ. ಈ ಸಂದೇಶವನ್ನು ಕರ್ನಾಟಕದ ತುಂಬಾ ತೆಗೆದುಕೊಂಡು ಹೋಗಿ ಜನತೆಯನ್ನು ಎಚ್ಚರಿಸಬೇಕು." ಇದು 'ಸಾರ್ವತ್ರಿಕ ಚುನಾವಣೆಯಲ್ಲಿ ಸಾರ್ವಜನಿಕರ ಹೊಣೆ' ಎಂಬ ರಾಜ್ಯ ಮಟ್ಟದ ಚಿಂತನ ಗೋಷ್ಠಿಯಲ್ಲಿ ಮೂಡಿಬಂದ ಒಕ್ಕೊರಲಿನ ಕೂಗು. ಇದನ್ನು 'ಸೌಹಾರ್ದ ಕರ್ನಾಟಕ' ಮತ್ತು ಇತರ ಎಡ-ಪ್ರಜಾಸತ್ತಾತ್ಮಕ ಸಂಘಟನೆಗಳು ಬೆಂಗಳೂರಿನ ಗಾಂಧಿ ಭವನದಲ್ಲಿ ಏಪ್ರಿಲ್ 10, 2023 ರಂದು ಸಂಘಟಿಸಿದ್ದವು.

ಮನುಷ್ಯರ ನಡುವೆ ದೊಡ್ಡ ಕಂದಕಗಳನ್ನು ಸೃಷ್ಟಿಸಿದ್ದಾರೆ

'ಒಂದು ಬಗೆಯ ಅಸಹಾಯಕತೆ ಮತ್ತು ಆತಂಕದಲ್ಲಿ ನಾವಿದ್ದೇವೆ' ಎಂದು ಮಾತುಗಳನ್ನು ಆರಂಭಿಸಿದ ಡಾ. ಕೆ. ಮರುಳ ಸಿದ್ದಪ್ಪನವರು, ಈಗ ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆ ಮತ್ತು ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆ ಈ ಎರಡೂ ಚುನಾವಣೆಗಳು ಬಹುಷಃ ಮೂರ್ನಾಲ್ಕು ದಶಕಗಳ ಕಾಲ ಈ ದೇಶದ ಭವಿಷ್ಯವನ್ನು ನಿರ್ಧರಿಸುತ್ತವೆ. ಸಾಮಾಜಿಕ ನ್ಯಾಯ ಬಹಳ ಮುಖ್ಯವಾದದ್ದು ಸರಿ. ಆದರೆ, ಸಾಮಾಜಿಕ ಸಂಭಂದಗಳನ್ನು ಬಹಳ ವ್ಯವಸ್ಥಿತವಾಗಿ ಹದಗೆಡಿಸುವ ಮೂಲಕ, ಮನುಷ್ಯ ಮನುಷ್ಯರ ನಡುವೆ ಎಷ್ಟು ದೊಡ್ಡ ಕಂದಕಗಳನ್ನು ಸೃಷ್ಟಿಸಿದ್ದಾರೆಂದರೆ, ಇದನ್ನು ಮುಚ್ಚಲು ಚುನಾಯಿತ ಸರ್ಕಾರದಿಂದ, ರಾಜಕೀಯದಿಂದ ಸಾಧ್ಯ ಎಂದು ಅನಿಸುವುದಿಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದಂತಹ ದೊಡ್ಡ ಮಟ್ಟದ ರಾಜಕೀಯೇತರ ಚಳುವಳಿಯಂತಹ ಚಳುವಳಿ ಮತ್ತೆ ಹುಟ್ಟಬೇಕು, ಅದರ ಮೂಲಕ ಮಾತ್ರ ಈ ಕಂದಕಗಳನ್ನು ಮುಚ್ಚಲು ಸಾಧ್ಯ. ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನೊಳಗೊಂಡು ಎಲ್ಲವನ್ನೂ ವ್ಯವಸ್ಥಿತವಾಗಿ ಹಾಳುಗೆಡವಲಾಗಿದೆ.





ಇಂದು ಈ ದೇಶದಲ್ಲಿ ಅಧಿಕೃತವಾದ ಸಂವಿಧಾನ ಒಂದಿದೆ. ಅನಧಿಕೃತವಾದ ಸಂವಿಧಾನ ಒಂದಿದೆ. ಅಧಿಕೃತವಾದ ಸಂವಿಧಾನವನ್ನು ಅರ್ಥರಹಿತವಾಗಿಸಿ, ಅನಧಿಕೃತ ಸಂವಿಧಾನ ಚಾಲ್ತಿಯಲ್ಲಿದೆ. ಮೇಲ್ನೋಟಕ್ಕೆ ಅಧಿಕೃತ ಸಂವಿಧಾನಕ್ಕೆ ಗೌರವ ತೋರಿಸುತ್ತೆ. ಒಬ್ಬರ ಮೀಸಲಾತಿ ಕಿತ್ತು ಮತ್ತೊಬ್ಬರಿಗೆ ಕೊಟ್ಟಿದ್ದೇವೆ ಎನ್ನುವುದೊಂದು ಕ್ರೌರ್ಯದ ಪರಮಾವಧಿ.. ಮುಖ್ಯಮಂತ್ರಿಗಳು, ರಾಜ್ಯಪಾಲರು ಸೂತ್ರದ ಗೊಂಬೆಯಂತಾಗಿದ್ದಾರೆ. ಕಾರ್ಪೊರೇಟ್ ಕುಳಗಳ ಕೈಯಲ್ಲಿ ಸೂತ್ರದ ದಾರವಿದೆ. ಹಿಂದುತ್ವವಾದಿಗಳು ಬೂಟಾಟಿಕೆಯ ರಾಮಭಕ್ತರು. ನಿಜವಾದ ರಾಮಭಕ್ತರು ಮನದಲ್ಲೇ ರಾಮನನ್ನು ಭಜಿಸುತ್ತಾರೆ. ಭಾರತ ಅತ್ಯಂತ ದುರ್ದಿನಗಳ ಕಾಲದಲ್ಲಿದೆ. ಈ ಚುನಾವಣೆಗಳಲ್ಲಿ ಯಾರನ್ನಾದರೂ ಗೆಲ್ಲಿಸಿ, ಬಿಜೆಪಿಯನ್ನು ಸೋಲಿಸಬೇಕಿದೆ. ಕತ್ತಲೆ ಕರಗಿ ಬೆಳಕು ಹರಿಯಲೇಬೇಕು. ಭರವಸೆ ಇಟ್ಟುಕೊಳ್ಳೋಣ' ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ಚುನಾವಣೆಗೆ ಮೊದಲೇ ಹಣ, ವಸ್ತುಗಳ ಹಂಚಿಕೆ

ಎಸ್ ವೈ. ಗುರುಶಾಂತ ಅವರು ಪ್ರಾಸ್ತಾವಿಕ ಮಾತನಾಡುತ್ತಾ, "ನಾಳೆ ನಡೆಯಲಿರುವ ವಿಧಾನಸಭಾ ಚುನಾವಣೆ ಕುರಿತಾಗಿ ಚಿಂತನೆ ಮಾಡುವ ಮತ್ತು ಅದಕ್ಕಾಗಿ ಸನ್ನದ್ಧರಾಗಿರಬೇಕಾದ ಅವಶ್ಯಕತೆ ಇದೆ. ಚುನಾವಣೆ ಎಂಬುದು ಒಂದು ಪ್ರಜಾಪ್ರಭುತ್ವ ಹಬ್ಬವಾಗಿದೆ. ಕಳೆದ ಚುನಾವಣೆಗಿಂತ ಇಂದಿನ ಚುನಾವಣೆ ಜನರಲ್ಲಿ ಹೆಚ್ಚು ಸಂಭ್ರಮ ತಂದಿದೆ. ರಾಜಕೀಯ ಪಕ್ಷಗಳಿಂದ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ಅಭ್ಯರ್ಥಿಗಳಿಂದ ಚುನಾವಣೆಗೆ ಮೊದಲೇ ಹಣ, ವಸ್ತುಗಳ ಹಂಚಿಕೆಯಾಗಿವೆ. ಈ ರೀತಿಯ ಹಂಚಿಕೆ ಒಂದು ವರ್ಷದಿಂದ ಶುರುವಾಗಿದೆ. ಇದು ಒಂದು ರೀತಿಯ ಭೀಕರವಾದ ಅನುಭವ. ನಾವು ತೀವ್ರತರವಾದ ಆರ್ಥಿಕ ಸಂಕಷ್ಟಗಳನ್ನು ಎದುರಿಸಿದ್ದೇವೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ಹಸಿವಿನ ನೋವನ್ನುಂಡಿದ್ದೇವೆ. ಕೋಟ್ಯಾಂತರ ಜನರು ತಮ್ಮ ಉದ್ಯೋಗ ಕಳೆದುಕೊಂಡಿದ್ದಾರೆ. ಮತೀಯವಾದ ಭೀಕರವಾಗಿ ಬೆಳೆದಿದೆ. ನಿರುದ್ಯೋಗ, ಕೃಷಿ ಬಿಕ್ಕಟ್ಟು ತೀವ್ರಗೊಂಡಿವೆ. ಇಂದು ಅಮುಲ್ ಮತ್ತು ನಂದಿನಿ ವಿಷಯ ಚರ್ಚೆಯಲ್ಲಿದೆ. ಇದು ಕೇವಲ ಕಾಂಪಿಟೇಷನ್ ಮಾತ್ರ ಎಂದು ಅವರು ಹೇಳುತ್ತಿದ್ದಾರೆ. ಹೈನುಗಾರಿಕೆಯನ್ನು ಕಾರ್ಪೊರೇಟೀಕರಣ ಗೊಳಿಸುವ ಪ್ರಯತ್ನದಲ್ಲಿ ನಂದಿನಿಯನ್ನೇ ಅವಲಂಭಿಸಿರುವ ರಾಜ್ಯದ ಲಕ್ಷಾಂತರ ರೈತರ ಜೀವನಾದಾರವನ್ನು ಹಾಳುಮಾಡಲು ಹೊರಟಿದ್ದಾರೆ" ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.





ರಾಜ್ಯದಲ್ಲಿ ಇದುವರೆಗೆ ಕರಾವಳಿ ಮಾತ್ರ 'ಗುಜರಾತ್ ಮಾದರಿ'ಯಾಗಿತ್ತು. ಆದರೆ, ಇಂದು ಹಿಂದುತ್ವವಾದಿಗಳು ಇಡೀ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿಯೂ ಕೋಮುದ್ವೇಷ ಹರಡುವ ಪ್ರಯತ್ನದ ಮೂಲಕ ಇಡೀ ರಾಜ್ಯವನ್ನೇ ಗುಜರಾತ್ ಮಾದರಿ ಮಾಡಲು ಹೊರಟಿದ್ದಾರೆ. ಗೋರಕ್ಷಕರ ಮುಖವಾಡ ತೊಟ್ಟವರಿಂದ ಕನಕಪುರ ತಾಲೂಕಿನಲ್ಲಿ ನಡೆದ ಇದ್ರೀಶ್ ಹತ್ಯೆ ಇದರ ಒಂದು ಭಾಗವಾಗಿದೆ. ಸಮುದಾಯಗಳ ನಡುವೆ ನಿತ್ಯವೂ ದ್ವೇಷ ತುಂಬುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡತೊಡಗಿದ್ದಾರೆ. ಚುನಾವಣೆ ಎಂಬುದು ಜನತೆಗೆ ಸಿನಿಕತನ ಎಂಬಂತಾಗಿದೆ. ನಾವು ಎಚ್ಚರಗೊಳ್ಳದಿದ್ದರೆ ಭೀಕರ ದಿನಗಳು ಬರುವ ಅಪಾಯ ಇದೆ' ಎಂದು ಗುರುಶಾಂತ್ ಆತಂಕ ವ್ಯಕ್ತಪಡಿಸಿದರು.



'ಸಾಮಾಜಿಕ ನ್ಯಾಯದ ಆಶಯ'ಕ್ಕೆ ದಕ್ಕೆ

ಡಾ. ಬಂಜಗೆರೆ ಜಯಪ್ರಕಾಶ್ ಅವರು 'ಸಾಮಾಜಿಕ ನ್ಯಾಯದ ಆಶಯ' ವಿಷಯದ ಕುರಿತಾಗಿ ಮಾತನಾಡುತ್ತ, 'ಸಾಮಾಜಿಕ ನ್ಯಾಯಕ್ಕಾಗಿ ನಾವು ಸ್ವಾತಂತ್ರ್ಯ ಬಂದಾಗಿಂದಲೂ ಕೇಳುತ್ತಾ. ಆಶಿಸುತ್ತಾ, ಅದಕ್ಕಾಗಿ ಹೋರಾಡುತ್ತಾ ಬಂದಿದ್ದೇವೆ. ಇಂದು ನಾವು ಒಂದು ತಿರುವಿನಲ್ಲಿ ಬಂದು ನಿಂತಿದ್ದೇವೆ. ಸ್ವಾತಂತ್ರ್ಯ ನಂತರದ 50 ವರ್ಷಗಳ ಕಾಲ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಅಳವಡಿಸುವುದರಲ್ಲಿ ತೊಡಕುಗಳಿದ್ದವು. ಸಾಮಾಜಿಕ ಮನಸ್ಥಿತಿ ಭಾರತೀಯ ಸಮಾಜದಲ್ಲಿ ಇರುವಂತೆ, ಆಳುವವರಿಂದ, ಮೇಲ್ವರ್ಗ ಕಡೆಯಿಂದ ಎಂದೂ ಸಮ್ಮುಖವಾಗಿರಲಿಲ್ಲ. ಸಂವಿಧಾನದ ಬಲದ ಮೇಲೆ ಇದಕ್ಕಾಗಿ ಹೋರಾಡಿ ಪಡೆಯುವ ಪರಿಸ್ಥಿತಿ ಸದಾ ಇದ್ದೇ ಇತ್ತು. ಆದರೆ, ಸಾಮಾಜಿಕ ನ್ಯಾಯದ ವಿರುದ್ದ ಯಾರೂ ಮಾತನಾಡುತ್ತಿರಲಿಲ್ಲ. ಭಾರತದಲ್ಲಿ ಜಾತಿ ಮನಸ್ಥಿತಿ ಆಳವಾಗಿ ಬೇರುಬಿಟ್ಟಿದೆ. ಇಂತಹ ಸ್ಥಿತಿ ಬದಲಾಗಿ ಪ್ರಭುತ್ವ ಸಾಮಾಜಿಕ ನ್ಯಾಯ ಒದಗಿಸಿಕೊಡುತ್ತದೆ ಎಂದು ಆಶಿಸಲಾಗದು. ಆದರೆ, ಕಳೆದ 20 ವರ್ಷಗಳಿಂದ ಸಾಮಾಜಿಕ ನ್ಯಾಯದ ವಿರುದ್ದ ಸರ್ಕಾರದ ಸಚಿವರು, ಆಳುವ ಪಕ್ಷದ ನಾಯಕರು ಬಹಿರಂಗವಾಗಿ ಮಾತನಾಡುವ ಮೂಲಕ ಸಾಮಾಜಿಕ ನ್ಯಾಯದ ಆಶಯವನ್ನೇ ಪ್ರಶ್ನೆ ಮಾಡುತ್ತಿದ್ದಾರೆ. ಮೀಸಲಾತಿಯನ್ನು ಇನ್ನೂ ಎಷ್ಟು ವರ್ಷಗಳ ಕಾಲ ಕೊಡುತ್ತೀರಿ ಎಂದು ಕೇಂದ್ರ ಸರ್ಕಾರದ ಪ್ರಮುಖರೇ ಕೇಳುತ್ತಾರೆ. ನಾವೀಗ ಪ್ರತಿಕ್ರಾಂತಿಕಾರಿ ಅವಧಿಗೆ ಪ್ರವೇಶ ಮಾಡಿದ್ದೇವೆ. ಅಪಾಯ ಎದುರಾಗಿದೆ.

ನಾವು ರಾಜಕೀಯ ಸಮಾನತೆಯ ಒಂದು ಯುಗವನ್ನು ಪ್ರವೇಶ ಮಾಡುತ್ತಿದ್ದೇವೆ, ಎಲ್ಲರಿಗೂ ಮತದಾನದ ಹಕ್ಕು ಮತ್ತು ಚುನಾವಣೆಯಲ್ಲಿ ಪಾಲ್ಗೊಳ್ಳುವ ಹಕ್ಕುಗಳಿವೆ. ಆ ಮೂಲಕ ರಾಜಕೀಯ ಸಮಾನತೆ ಸಾಧಿಸಲು ಸಂವಿಧಾನ ಅವಕಾಶ ಮಾಡಿಕೊಟ್ಟಿದೆ.

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**